# ಕೊಡಗು ಸಂಗಾತಿ


ಜನವರಿ 1 ರಿಂದ 15, 2000 ಪಾಕ್ಷಿಕ ಪತ್ರಿಕೆ (ಪೆರಾರ್ಡೆ 16 ರಿಂದ 30, 2000)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

K.R. N. N. 240 ಸಂಪುಟ : 4 ಸಂಚಿಕೆ : 1 ಪುಟಗಳು : 24 ಬೆಲೆ ರೂ. : 6-00




ಸಹಸ್ರಮಾನದ ವಿಶ್ವಮಹಿಳೆ ಭಾರತದ ಇಂದಿರಾ ಪ್ರಿಯದರ್ಶಿನಿ

**21ನೇ ಶತಮಾನದಲ್ಲಿ ಸುಖಶಾಂತಿ ಸುಭಿಕ್ಷೆಯನ್ನು ನಿರೀಕ್ಷಿಸೋಣಾ.**

**ನಾಡಿನ ಓದುಗರೆಲ್ಲರಿಗೂ ಕೊಡಗು ಸಂಗಾತಿ ಪತ್ರಿಕೆಯ ಪ್ರಥಮ ನಮನಗಳು**

## ಶುಭ ಹಾರೈಕೆ



ದಿನಾಂಕ 11-10-1999ರಲ್ಲಿ ನಡೆದ ಕೊಡಗು ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜು ಮಟ್ಟದ 3000 ಮೀಟರ್ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಪ್ರಥಮ ಸ್ಥಾನ ಗಳಿಸಿ ಜಿಲ್ಲೆಗೂ ಜನಾಂಗಕ್ಕೂ ಕೀರ್ತಿ ತಂದಿರುವುದಲ್ಲದೆ ಮುಂದೆ ರಾಷ್ಟ್ರ ಮಟ್ಟದಲ್ಲಿ ಪಾಲ್ಗೊಂಡು ಯಶಸ್ವಿಯಾಗಲೆಂದು ಹಾರೈಸುವ

ಮಂದೋಡಿ ವಿಜಯ್ ದೇವಯ್ಯ
ಬೆಂಗಳೂರು

ಕು. ಪೊಕ್ಕುಲಂಡ್ರ ಚಿಂಣಪ್ಪ ಬಬಿತಾ

## ಕೊಡಗು ಸಂಗಾತಿಯ ಯಶಸ್ವಿ ಮುಖಾ - ಮುಖಿ ಕಾರ್ಯಕ್ರಮ

ದಿನಾಂಕ 26-12-1999ನೇ ಭಾನುವಾರ ಪತ್ರಿಕೆಯ ಮುಖಾ ಮುಖಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮಕ್ಕೆ ಸಮಯಕ್ಕೆ ಸರಿಯಾಗಿ ಆಗಮಿಸಿದ ಜನಾಂಗದ ಸರ್ವ ಓದುಗರಿಗೂ, ಲೇಖಕರಿಗೂ, ಬರಹಗಾರರಿಗೂ, ಸಾಹಿತಿಗಳಿಗೂ, ಜಾಹೀರಾತುದಾರರಿಗೂ, ಸಮಾಜದ ಉಪಾಧ್ಯಕ್ಷರಾದ ಕೋರನ ಪೂಣಚ್ಚ ಮತ್ತು ನಿರ್ದೇಶಕರುಗಳಿಗೂ ವಿದ್ಯಾ ಸಂಘದ ಅಧ್ಯಕ್ಷ ಕುಯ್ಯಮುಡಿ ಪೂರ್ಣಯ್ಯ ಮತ್ತು ನಿರ್ದೇಶಕರುಗಳಿಗೂ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷ ತುಂತಜೆ ಗಣೇಶ್ ಮತ್ತು ನಿರ್ದೇಶಕರುಗಳಿಗೂ, ಮಹಿಳಾ ಒಕ್ಕೂಟದ ಅಧ್ಯಕ್ಷಿಣಿ ಚೀಯಂಡಿರ ರಾಧ ಯಾದವ ಮತ್ತು ನಿರ್ದೇಶಕರುಗಳಿಗೂ ಬೆಂಗಳೂರಿನ ಕಾವೇರಿ ನಾಡಿನ ಸಂಸ್ಥಾಪಕ ಅಮ್ಮಾಜೀರ ಪೊನ್ನಪ್ಪನವರಿಗೂ ಮತ್ತು ಮೈಸೂರಿನ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ತಡಿಯಪ್ಪನ ಕುಮಾರ ಜಯನವರಿಗೂ, ಜನಾಂಗದ ಹಿರಿಯ ಸಾಹಿತಿ ಪ್ರೊ. ಪೂಜಾರಿ ಮೊಣ್ಣಪ್ಪನವರಿಗೂ, ಸಂಗಾತಿ ಬಳಗಕ್ಕೂ ಹಾಗೂ ಅಂದಿನ ಕಾರ್ಯಕ್ರಮಕ್ಕೆ ವಿದ್ಯಾಸಂಘದ ಕಟ್ಟಡವನ್ನು ಉದಾರವಾಗಿ ಬಿಟ್ಟುಕೊಟ್ಟು ಸಹಕರಿಸಿದ ವಿದ್ಯಾಸಂಘದ ಅಧ್ಯಕ್ಷ ಕೆ. ಕೆ. ಪೂರ್ಣಯ್ಯ ಮತ್ತು ನಿರ್ದೇಶಕರುಗಳಿಗೂ, ಕಾಫಿ. ತಿಂಡಿಯ ವ್ಯವಸ್ಥೆಯನ್ನು ನೀಡಿ ಸಹಕರಿಸಿದ ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಚೀಯಂಡಿರ ರಾಧ ಯಾದವ ಮತ್ತು ನಿರ್ದೇಶಕರುಗಳಿಗೂ ಹಾಗೂ ಕಾರ್ಯಕ್ರಮಕ್ಕೆ ಅಗತ್ಯವಾಗಿ ಬೇಕಾಗಿದ್ದ ಧ್ವನಿ ವರ್ಧಕ ನೀಡಿ ಸಹಕರಿಸಿದ ಉತ್ಸಾಹಿ ತರುಣ ಪಳ್ಳಿಪುರ ಭರತ್ ಮತ್ತು ರೇಖಾ ದಂಪತಿಗಳಿಗೂ, ಕಾರ್ಯಕ್ರಮಕ್ಕೆ ಪ್ರೇರಣೆ ನೀಡಿದ ಬೈತಡ್ಕ ನಂಜಪ್ಪ ಬೆಳ್ಯಪ್ಪನವರಿಗೂ, ಅತ್ಯುತ್ತಮ ಸಂಯೋಜನೆ ಮತ್ತು ನಿರೂಪಣೆ ಕಾರ್ಯ ನಿರ್ವಹಿಸಿದ ಗುಡ್ಡೆಮನೆ ರಮೇಶ್ ಮತ್ತು ಬಾರಿಯಂಡ ಜೋಯಪ್ಪದ್ವಯರಿಗೂ ಅಂದಿನ ಕಾರ್ಯಕ್ರಮವನ್ನು ಬರವಣಿಗೆ ಮೂಲಕ ವರದಿ ನೀಡಲು ಸಹಕರಿಸಿದ ಬೈನೆರವನ ಇಂದ್ರಕುಮಾರ್ ಮತ್ತು ಕುಂಭಗೌಡನ ರಂಜಿತ್‌ನವರಿಗೂ, ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ಕೊಡಗು ಸಂಗಾತಿ ಸಂಸ್ಥೆಯ ಪರವಾಗಿ ಹಾರ್ದಿಕ ಅಭಿನಂದನೆಗಳು.

ಸಂಪಾದಕಿ ಮತ್ತು
ಸಂಗಾತಿ ಸಂಸ್ಥೆಯ ಪರವಾಗಿ ಗೌ. ಸ. ಪ್ರಭಾಕರ ಹಾಗೂ ಸಂಗಾತಿ ಬಳಗ

## ಶುಭ ಹಾರೈಕೆ



ನಿಡ್ಯಮಲೆ ಪಿ. ಪ್ರಕಾಶ್ ಕರ್ನಾಟಕ ರಾಜ್ಯದ ಹೆಚ್ಚುವರಿ ಸರ್ಕಾರಿ ಅಭಿಯೋಜಕರಾಗಿ ಆಯ್ಕೆಯಾಗಿದ್ದು ನಮ್ಮ ಜನಾಂಗಕ್ಕೆ ಒಂದು ಹೆಮ್ಮೆಯ ಸಂಗತಿ. ಇವರು ರಾಜ್ಯಮಟ್ಟದ ರಾಜಕಾರಣದಲ್ಲೂ ದುಡಿಯುತ್ತಿದ್ದು ಈಗಾಗಲೇ ಕಾಂಗ್ರೆಸ್ ಪಕ್ಷದ ಕೆಲವು ಹುದ್ದೆಗಳನ್ನು ಅಲಂಕರಿಸಿದ್ದಾರೆ. ಇವರಿಗೆ ಮುಂದೆಯೂ ಉನ್ನತ ಮಟ್ಟದಲ್ಲಿ ಬೆಳೆಯಲು ದೇವರು ಅನುಗ್ರಹ ಕರುಣಿಸಲಿ ಎಂದು ಹಾರೈಸುವ

ನಿಡ್ಯಮಲೆ ವೆಂಕಟರಮಣ ಪ್ರಕಾಶ್

ತಡಿಯಪ್ಪನ ಕುಮಾರ್ ಜಯ, ಮೈಸೂರು

## ಇಂದಿರಾಗಾಂಧಿ ಸಹಸ್ರಮಾನದ ಮಹಿಳೆ

ಭಾರತದ ಪ್ರಥಮ ಮಹಿಳಾ ಪ್ರಧಾನಿ ಇಂದಿರಾ ಗಾಂಧಿ ಅವರು 'ಸಹಸ್ರಮಾನದ ಮಹಿಳೆ' ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. 'ಬಿಬಿಸಿ ನ್ಯೂಸ್' ಜಾಲ ಇಂಟರ್‌ನೆಟ್‌ನಲ್ಲಿ ನಡೆಸಿದ ಜನಮತ ಸಮೀಕ್ಷೆಯಲ್ಲಿ ಭಾರತದ ಈ ಅಪೂರ್ವ ರಾಜ ತಾಂತ್ರಜ್ಞೆ ಬ್ರಿಟನ್‌ನ ರಾಣಿ ಎಲಿಜಬೆತ್ ಅವರನ್ನು ಹಿಂದೆ ಹಾಕಿದ್ದಾರೆ.

10 ಜನಪ್ರಿಯ ನಾಯಕಿಯರಲ್ಲಿ ಮದರ್ ತರೇಸಾ, ಮೇರಿ ಕ್ಯೂರಿ, ಮಾರ್ಗರೇಟ್ ಥ್ಯಾಚರ್, ಜಾನ್ ಆಫ್ ಆರ್ಕ್, ಎಮೆಲಿನ್ ಫಂಖರ್ಟ್, ಆನ್ ಸಾನ್ ಸೂಕಿ ಹಾಗೂ ಎಲೆನಾರ್ ರೂಸ್‌ವೆಲ್ಟ್ ಸ್ಥಾನ ಪಡೆದಿದ್ದಾರೆ.

- ಸಂಪಾದಕಿ

# ಒಳನೋಟ

## ಕನ್ನಡ ವಿಭಾಗ


| | | |
|---|---|---|
| ದುಂದು ವೆಚ್ಚಗಳು | - ಸಂಪಾದಕೀಯ | 02 |
| ನಿವೃತ್ತ ಪೋಲೀಸ್ ಮುಖ್ಯಪೇದೆ ಪಾರ್ವತಿ ಅನಿಸಿಕೆ | - ಸಂಗಾತಿ ವರದಿ | 02 |
| ದುಂದು ವೆಚ್ಚದೊಂದಿಗೆ ಅಸಂಘಟನೆ | - ಬಿಟ್ಟೀರ ಚೋಂದಮ್ಮ | 03 |
| ಲೇಖಕರ ಪರಿಚಯ | - ಪಟ್ಟಡ ಪ್ರಭಾಕರ | 04 |
| ಸರ್ಪಗಂಧ - ಧಾರವಾಹಿ - 21 | - ಕೌಂಡಿನ್ಯ | 05 |
| ಮೇಜರ್ ನವೀನ್.....! | - ಕಾನೆಹಿತ್ಲು ನಳಿನಿ ನಂಜಪ್ಪ | 12 |
| 'ಮಡಿಕೇರಿ ಕೋಟೆ ನನ್ನದು' | - ಕೃಪೆ ಕೆಎಂಎಂ, ಮೈ. ಮಿ. | 13 |
| ಆತ್ಮಹತ್ಯೆ : ಒಂದು ಚಿಂತನೆ | - ಕುಮಾರಿ ಕಟ್ರತನ ಝಾನ್ಸಿ ದೇವಯ್ಯ | 15 |
| ವಿವಾಹ (ಲಗ್ನ) ಬಗ್ಗೆ ಮಾತಾಪಿತರಲ್ಲಿ ಗೊಂದಲ | - ಜಿ. ಸಿ. ಗಿರೀಶ್ ಕುಮಾರ್ | 16 |
| ಗೌಡರ ಮದುವೆ : ಒಂದು ವಿಶ್ಲೇಷಣೆ | - ಡಾ. ಪುರುಷೋತ್ತಮ ಬಿಳಿಮಲೆ | 17 |
| ಪತ್ರ ವಿಭಾಗ | | 20 |
| ನಮ್ಮ ಕೊಡಗು ಜಿಲ್ಲೆ ನಮ್ಮದು | - ಯಮುನ ಕೊಳಂಗಾಯ ಪೆರಾಜ | 20 |


## ಅರೆಭಾಷಿಕ ವಿಭಾಗ


| | | |
|---|---|---|
| ಹೆಣ್ಣು ಅಬಲೆಯಲ್ಲ ಎಂದಿಗೂ ಸಬಲಳೆ | - ತೋರೇರ ನಾಣಯ್ಯ ಪದ್ಮಾವತಿ | 06 |
| ಸೋಮವಾರ ಪೇಟೇಲಿ ಗೌಡ ಜನಾಂಗದ ಔತಣ ಕೂಟ, ಹಂಗೆ ಸನ್ಮಾನ ಸಮಾರಂಭ | - ಸಂಗಾತಿ ವರದಿ | 08 |
| ಕುಂಬಳದಾಳ್‌ಲಿ ನಡೆದ ಜಿಲ್ಲಾ ಮಟ್ಟದ ಪಂದ್ಯಾಟಗ | - ಕುಂಜಿಲನ ರಾಜ | 08 |
| ವಾಂಟೆಡ್ ಮಿಸ್ಟರ್ ರಾಜು - ಕಥೆ | - ಶಂಕರನ ಬಸಪ್ಪ | 09 |
| ಜಸ್ಟ್ ಮಿಸ್ಸ್ | - ಎಡಿಕೇರಿ ಸುದರ್ಶನ್ | 14 |



**ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ : ಕೊಡಗು ಸಂಗಾತಿ,** ನಂ. 35, "ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 570 012. **ಫೋನ್ : 0821/516771**

**ಮಡಿಕೇರಿಯಲ್ಲಿ ಸಂಗಾತಿ ಕಛೇರಿ : ಬೈತಡ್ಕ ಜಾನಕಿ ಬೆಳ್ಯಪ್ಪ,** ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ ದೂರವಾಣಿ : 08272/28047

**ಸಂಗಾತಿ ಚಿಹ್ನೆ ಲಭ್ಯ : ಪಾಂಡ್ಯನ್ ಕ್ಯಾಸೆಟ್ ಅಂಗಡಿ,** ಖಾಸಗಿ ಬಸ್ ನಿಲ್ದಾಣ, ಮಡಿಕೇರಿ - 571 201 ದೂರವಾಣಿ : 08272/29620

**ಕುಂಭಗೌಡನ ಸೋಮಣ್ಣ,** ಮಯೂರ ಕೋಲ್ಡ್ ಸ್ಟೋರೆಜ್, ಮುಖ್ಯ ರಸ್ತೆ, ಕುಶಾಲನಗರ - 571 234 ದೂರವಾಣಿ : 08276/73370

**ಅಮ್ಮಾಜೀರ ಪೊನ್ನಪ್ಪ,** 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04 ದೂರವಾಣಿ - 080/6342822

**ಕಲ್ಲುಮುಟ್ಲು ಬಸಪ್ಪ,** ನಂ. 233/9, 2ನೇ ಕ್ರಾಸ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು - 19 ದೂರವಾಣಿ - 080/6549669

**ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ವಾರ್ಷಿಕ ಚಂದಾ - 144 ರೂ., ಅರ್ಧ ವಾರ್ಷಿಕ -72 ರೂ., ಬಿಡಿ ಪ್ರತಿ - 6 ರೂ.**

# ಸಂಪಾದಕೀಯ : ದುಂದು ವೆಚ್ಚಗಳು

ಮಾನವ ತಾನು ಗಳಿಸಿದ ದ್ರವ್ಯವನ್ನು ಖರ್ಚು ಮಾಡುವುದು ಅನಿವಾರ್ಯ. ಆ ರೀತಿ ಖರ್ಚು ಮಾಡದಿದ್ದರೆ ಅವನ ಪ್ರಗತಿ ಖಂಡಿತವಾಗಿಯೂ ಸಾಧ್ಯವಿಲ್ಲ. ಇದು ಬರೆ ವೈಯುಕ್ತಿಕವಾಗಿರದೆ ರಾಷ್ಟ್ರದ, ರಾಜ್ಯದ ಹಾಗೂ ಸಮಾಜದ ಹಂತಗಳಲ್ಲೂ ನಡೆಯುತ್ತಿರುತ್ತದೆ.

ಅದೇ ರೀತಿ ದುಂದುವೆಚ್ಚವು ಈ ಎಲ್ಲಾ ಹಂತಗಳಲ್ಲೂ ನಡೆಯುತ್ತಿರುತ್ತದೆ.

ವೈಯುಕ್ತಿಕವಾಗಿ ಮದುವೆ, ಮುಂಜಿ, ಹಬ್ಬ, ಹರಿದಿನಗಳಲ್ಲಿ ಒಬ್ಬ ವ್ಯಕ್ತಿ ಯಾ ಕುಟುಂಬ ಅವಶ್ಯಕವಿರುವುದಕ್ಕಿಂತ ಹೆಚ್ಚಾಗಿ ಖರ್ಚು ಮಾಡುತ್ತಾನೆ. ಅದೇ ರೀತಿ ಸಮಾಜದಲ್ಲಿ ಸಮಾಜ ಆಚರಿಸುವ ಹಬ್ಬ, ಹರಿದಿನಗಳಲ್ಲೂ ಅವಶ್ಯವಿರುವುದಕ್ಕಿಂತ ಹೆಚ್ಚಾಗಿ ಖರ್ಚು ಮಾಡುತ್ತಿದ್ದಾರೆ. ರಾಜ್ಯದ ಹಾಗೂ ರಾಷ್ಟ್ರದ ಮಟ್ಟದಲ್ಲೂ ಸರ್ಕಾರದ ಸಮಾರಂಭಗಳಲ್ಲಿಯೂ ಸಮಾರಂಭಗಳನ್ನು ನಡೆಸುವ ಅಧಿಕಾರಿ ಯಾ ಮಂತ್ರಿಗಳು ತಮಗೆ ತೋಚಿದ ರೀತಿಯಲ್ಲಿ ಖರ್ಚು ಮಾಡುತ್ತಾರೆ. ಇದರ ಜೊತೆಗೆ ಸರ್ಕಾರದ ಇಲಾಖೆಗಳಲ್ಲಿ ಸರಿಯಾದ ರೀತಿಯಲ್ಲಿ ಯೋಜನೆಗಳನ್ನು ಹಾಕಿಕೊಳ್ಳದೆ ಎಷ್ಟೋಷ್ಟೋ ಖರ್ಚುಗಳಲ್ಲಿ ಪ್ರಯೋಜನವಿಲ್ಲದ ಕೆಲಸ ಕಾರ್ಯಗಳಿಗೆ ಹಣ ತೊಡಗಿಸಿ ಸಾರ್ವಜನಿಕ ಹಣವನ್ನು ಪೋಲು ಮಾಡುತ್ತಿದ್ದಾರೆ.

ಇದಕ್ಕೆ ಪ್ರತಿಯಾಗಿ ವ್ಯಕ್ತಿಗೂ ಅವಶ್ಯಕತೆಗಿಂತ ಹೆಚ್ಚಾಗಿ ಖರ್ಚು ಮಾಡಬಾರದೆಂಬ ಪ್ರಜ್ಞೆ ಬೆಳೆಯಬೇಕು. ತಾನು ಗಳಿಸಿದ ಹಣವನ್ನು ತಾನು ಖರ್ಚು ಮಾಡಿ ಉಡಾಫೆಯಲ್ಲಿ ಮುಂದುವರಿದರೆ ಅದು ಸಮಾಜದ ಮೇಲೆ ದುಷ್ಪರಿಣಾಮ ಬೀಳುತ್ತದೆ. ಇದರಿಂದಾಗಿ ಸುವ್ಯವಸ್ಥಿತ ಸಮಾಜವಾಗಿರದೆ ಅವ್ಯವಸ್ಥಿತ ಸಮಾಜವಾಗಿ ಬೆಳೆಯುವ ಅವಕಾಶವೇ ಹೆಚ್ಚು ಇದರಿಂದಾಗಿ ಎಷ್ಟೇ ನಾಗರೀಕತೆಯನ್ನು ಪಡೆದರೂ ಅನಾಗರೀಕತೆಯ ಪರಿಯಾದ ಅನುಷ್ಠಾನ ಆಗಬಾರದೆಂದು ಸಂಗಾತಿಯ ಅನಿಸಿಕೆ.

## ಒಳಿತು ಕೆಡುಕುಗಳನ್ನು ಸಮಾನವಾಗಿ ಕಂಡುಕೊಂಡ

ನಿವೃತ್ತ ಪೋಲೀಸ್ ಮುಖ್ಯಪೇದೆ ಪಾರ್ವತಿ ಅನಿಸಿಕೆ



ಕಳೆದ ಮೂವತ್ತೇಳು ವರ್ಷದ ಸುದೀರ್ಘ ಅವಧಿಗೆ ಓರ್ವ ಸಾಮಾನ್ಯ ಪೊಲೀಸ್ ಸಿಬ್ಬಂದಿಯಾಗಿದ್ದು, ಸಮಾಜ ಮತ್ತು ಇಲಾಖೆಯಲ್ಲಿನ ಒಳಿತು ಕೆಡುಕುಗಳನ್ನು ಸಮಾನವಾಗಿ ಕಂಡುಕೊಂಡೆ' ಎಂದು ಸೇವೆಯಿಂದ ಇತ್ತೀಚೆಗೆ ನಿವೃತ್ತರಾದ ಪೊಲೀಸ್ ಹೆಡ್ ಕಾನಸ್ಟೇಬಲ್ ಕೋಳುಮುಡಿಯನ ಎನ್. ಪಾರ್ವತಿ ಅವರು ಮುಕ್ತ ಅನಿಸಿಕೆ ವ್ಯಕ್ತಪಡಿಸಿದರು.

1962ರಲ್ಲಿ ಗೌರಮ್ಮ ಎಂಬ ಮಹಿಳೆ ಪೊಲೀಸ್ ಇಲಾಖೆಗೆ ಸೇರಿದಾಗ ತಾನೂ ಸ್ಫೂರ್ತಿಗೊಂಡು ಸೇರ್ಪಡೆಗೊಂಡಾಗ ಆದಾಗಲೇ ಗೌರಮ್ಮ ಕರ್ತವ್ಯಕ್ಕೆ ಹಿಂಜರಿದು ತಾನು ಮಾತ್ರ ಇಲಾಖೆಯಲ್ಲಿ ಮುಂದುವರಿದೆ ಎಂದು ಪಾರ್ವತಿ ಅವರು ನೆನಪಿಸಿಕೊಳ್ಳುತ್ತಾರೆ.

ಅದೇ ವೇಳೆಗೆ ಬಿಳುಗುಂದ ಗ್ರಾಮದ ಸೀತಮ್ಮ ಎಂಬುವರು ಪೊಲೀಸ್‌ಹುದ್ದೆ ಪಡೆದರಾದರೂ, ಕರ್ತವ್ಯ ಮುಂದುವರಿಸಲಿಲ್ಲ ಎಂದು ಮೂರು ದಶಕಗಳ ಹಿಂದಿನ ದಿನಗಳನ್ನು ಅವರು ಕಣ್ಣೆದುರು ತಂದು ಕೊಂಡಾಗ, ಕಚೇರಿ ಹಾಗೂ ಮನೆಯ ನಿರ್ವಹಣೆಯಲ್ಲಿ ತಮ್ಮ ಸತತ ಪರಿಶ್ರಮದ ಹಾದಿ ಬಗ್ಗೆ ನಿಟ್ಟುಸಿರು ಬಿಡುತ್ತಾರೆ.

೧೯೬೫ರಲ್ಲಿ ಆಗ ಪೊಲೀಸ್ ಪೇದೆಯಾಗಿದ್ದ ದಾಯನ ಅಪ್ಪಣ್ಣ ಅವರನ್ನು ವಿವಾಹವಾಗಿ ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯೊಂದಿಗೆ ಸಂಸಾರ ನಿರ್ವಹಿಸಬೇಕಾದ ಅನಿವಾರ್ಯತೆ, ಕೆಲವೊಮ್ಮೆ ಮೇಲಧಿಕಾರಿಗಳ ಸಿಡುಕುತನದಿಂದ ಎಂದೋ ಕೆಲಸಕ್ಕೆ 'ಗುಡ್ ಬೈ' ಹೇಳಬೇಕನಿಸಿತಂತೆ !

ಆದಾಗ್ಯೂ ಮನೆ ಮಂದಿಯ ಪ್ರೋತ್ಸಾಹದಿಂದ ಕರ್ತವ್ಯ ಮುಂದುವರಿಸಿದೆ ಎಂದು ನುಡಿಯುವ ಪಾರ್ವತಿ ಅವರು, ತಮ್ಮ ಪತಿ ಪೊಲೀಸ್ ಹುದ್ದೆಯಿಂದ ಸಬ್‌ಇನ್‌ಸ್ಪೆಕ್ಟರ್ ಆಗಿ ಬಡ್ತಿ ಪಡೆದು 1994ರಲ್ಲಿ ನಿವೃತ್ತರಾದರೂ ತನಗೆ ಮಾತ್ರ 1979ರಲ್ಲಿ ಮುಖ್ಯ ಪೇದೆಯಾಗಿ ಬಡ್ತಿ ದೊರೆತು ಈ ತನಕ ಹಾಗೆಯೇ ಇದ್ದೆ ಎನ್ನುತ್ತಾರೆ.

ಇಷ್ಟೊಂದು ದೀರ್ಘ ಅವಧಿಗೆ ಪೊಲೀಸ್ ಇಲಾಖೆಯಲ್ಲಿ ಜನತೆಯ ನಡುವೆ ಸೇವೆಯಲ್ಲಿದ್ದು ಈಗ ನಿವೃತ್ತಿಗೊಳ್ಳುತ್ತಿರುವಾಗ ಸ್ವಲ್ಪಮಟ್ಟಿಗೆ ಬೇಸರವಿದ್ದರೂ, ಮನೆ ಕೆಲಸದಲ್ಲಿ ತೊಡಗಿಸಿ ಕೊಳ್ಳುವೆ ಎಂದು ಮಾರ್ನುಡಿಯುತ್ತಾರೆ ಪಾರ್ವತಿಯವರು.

### ಬೀಳ್ಕೊಡುಗೆ ಸಮಾರಂಭ

ಗಾಳಿಬೀಡು ಗ್ರಾಮದ ಕೋಳಿಮುಡಿಯನ ನಂಜಪ್ಪ ಗೌರಮ್ಮ ದಂಪತಿಯ ಪುತ್ರಿಯಾಗಿ ಎಂಟನೇ ತರಗತಿ ವಿದ್ಯಾಭ್ಯಾಸದೊಂದಿಗೆ ಪೊಲೀಸ್ ಇಲಾಖೆಯ ಕರ್ತವ್ಯಕ್ಕೆ ಭಂಗ ಬಾರದಂತೆ ಎಲ್ಲರಿಗೆ ಹಿರಿಯಕ್ಕಳಂತೆ ದೀರ್ಘ ಕಾಲದ ಒಡನಾಡಿಯಾಗಿದ್ದ ಪಾರ್ವತಿ ಅವರಿಗೆ ಸೆಪ್ಟೆಂಬರ್ 30ರ ಸಂಜೆ ನಗರ ಠಾಣಾ ಸಿಬ್ಬಂದಿ ವರ್ಗ ಭಾವಪೂರ್ಣ ಬೀಳ್ಕೊಡುಗೆ ನೀಡಿ ಗೌರವಿಸಿ ಕಳುಹಿಸಲಾಯಿತು.

# ದುಂದು ವೆಚ್ಚದೊಂದಿಗೆ ಅಸಂಘಟನೆ

ನಮ್ಮ ಅರೆಭಾಷಿಕ ಗೌಡ ಜನಾಂಗದ ಜನಜಾಗೃತಿಯನ್ನು ನೋಡಿದಾಗ ತುಂಬಾ ಸಂತೋಷ ಮತ್ತು ದುಃಖವೂ ಆಗುತ್ತಿದೆ. ನಮ್ಮ ಅರೆಭಾಷಿಕ ಬಾಂಧವರು ಯಾವ ಯಾವ ಊರಿನಲ್ಲಿ ನೆಲೆಸಿರುವರೋ ಅಲ್ಲಲ್ಲೆ ಕೈಲು ಮುಹೂರ್ತ, ಹುತ್ತೇರಿ ಎಂದು ಸಂಘಟನೆಯಾಗುತ್ತಿರುವುದು ಬಹಳ ಸಂತೋಷ ಮತ್ತು ಹೆಮ್ಮೆಯ ವಿಷಯ. ಎರಡು ಸಾವಿರದ ಇಸವಿಯ ಹೊತ್ತಿಗಾದರೂ ನಮ್ಮ ಜನ ಜಾಗೃತರಾದರಲ್ಲಾ ಎಂದು. ಆದರೆ ಬಹಳ ಬೇಸರದ ವಿಷಯ ಎಂದರೆ ಒಂದೇ ಊರಿನಲ್ಲಿ ಒಂದೇ ಸೂರಿನಡಿ ಪದೇ ಪದೆ ಕೈಲು ಮುಹೂರ್ತ ಹಬ್ಬ ಆಚರಿಸುತ್ತಿದ್ದರೆ ಏನು ಸೊಗಸು ಇದ್ದೀತು? ಏನು ಸಾಧಿಸಿದಂತಾಯಿತು? ಇದು ದುಂದು ವೆಚ್ಚವಲ್ಲದೆ ಮತ್ತೇನು? ಹೀಗಾಗಲು ಕಾರಣವೇನು? ಇದಕ್ಕೆ ಪರಿಹಾರವೇನು? ಈ ಎಲ್ಲಾ ಪ್ರಶ್ನೆಗಳಿಗೆ ನಮ್ಮ ಮುಖಂಡರುಗಳೆ ಉತ್ತರಿಸಬೇಕು. ಸಂಘ ಸಂಸ್ಥೆ ಅಥವಾ ಸಮಾಜ ಇರುವುದು ಜನರ ಉದ್ಧಾರಕ್ಕಾಗಿ, ಶೋಷಣಗಾಗಿ ಅಲ್ಲ. ಕೆಲವೇ ಜನರ ಆಧಿಕಾರಕ್ಕಾಗಿಯೂ ಅಲ್ಲ.

ಇದು ನಡೆಯುತ್ತಿರುವುದು ಮಹಾನಗರ ಬೆಂಗಳೂರಿನಲ್ಲಿ ಎಂದು ಹೇಳಿಕೊಳ್ಳಲು ನನಗೆ ನಾಚಿಕೆಯಾಗುತ್ತಿದೆ. ನಮ್ಮ ಜನಾಂಗದ ಮುಂಚೂಣಿಯಲ್ಲಿ ನಿಂತು ಮಾರ್ಗದರ್ಶನ ಮಾಡಬೇಕಾದವರು ವಾಸವಾಗಿರುವುದು ಇಲ್ಲಿಯೇ. ಈ ಮಹನೀಯರುಗಳೆಲ್ಲಾ ವೇದಿಕೆಯ ಮೇಲೆ ಅಲಂಕೃತರಾಗಿ ಸರದಿಯಂತೆ ಭಾಷಣ ಬಿಗಿದು ಹೊರಟು ಹೋಗುತ್ತಾರೆ. ಯಾಕೆ ಎಲ್ಲರೂ (ಮಹನೀಯರುಗಳು) ಕಲೆತು ಇದಕ್ಕೆ ಪರಿಹಾರ ಹುಡುಕಬಾರದು?

ನಮ್ಮ ಜನರಿಗೆ "ಅಹಂ" ಎಲ್ಲಿಯವರೆಗೆ ಹೋಗುವುದಿಲ್ಲವೊ ಅಲ್ಲಿಯವರೆಗೆ ನಮ್ಮ ಜನಾಂಗ ಉದ್ಧಾರವಾಗುವುದಿಲ್ಲ. ಇದು ನಮ್ಮ ಮುಂದಿನ ಪೀಳಿಗೆಗೆ ಮಾರ್ಗದರ್ಶನವಾದೀತೆ?

ಎರಡು ವರ್ಷಗಳಿಂದ ದಕ್ಷಿಣ ಕನ್ನಡ ಮತ್ತು ಕೊಡಗು ಗೌಡರ ಕೈಲು ಮುಹೂರ್ತ ಹಬ್ಬ ಒಂದಾಗಿ ನಡೆಸುವ ಶೀರ್ಷಿಕೆಯನ್ನು ಹೊತ್ತ ಆಹ್ವಾನ ಸಂಗಾತಿ ಪತ್ರಿಕೆಯಲ್ಲಿ ಮುದ್ರಿತವಾಗಿ ಬರುತ್ತಿದೆ. ಅದರಿಂದ ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿದೆ? ಆಗಿದ್ದರೆ ಕೊಡಗಿನ ಗೌಡರೇಕೆ ಪ್ರತ್ಯೇಕ ಕೈಲು ಮುಹೂರ್ತ ನಡೆಸಬೇಕು? ಮೊದಲೊಮ್ಮೆ ಒಂದಾಗಿದ್ದ ಸಮಾಜ ಒಡೆದು ಬಿರುಕು ಬಿಟ್ಟಿತ್ತು. ಆ ಬಿರುಕಿಗೆ ಕಾಂಕ್ರೀಟ್ ಹಾಕಿ ಮುಚ್ಚುವವರು ಯಾರು? ಹೀಗೇ ನಡೆಯುತ್ತಿದ್ದರೆ ಈ ಬಿರುಕು ಮುಂದೆ ಕಂದಕ ಆಗಬಹುದು. ಇಂದು ಗೌಡ ಸಮಾಜಗಳ (ಕೊಡಗು ಮತ್ತು ದ. ಕನ್ನಡ) ನೀತಿ, ಸ್ಥಿತಿ "ಎತ್ತು ಏರಿಗೆ, ಕೋಣ ನೀರಿಗೆ" ಎಳೆದಂತಾಗಿದೆ.

ಅಮ್ಮಾಜೀರ ಪೊನ್ನಪ್ಪನವರು ಕಾವೇರಿ ನಾಡಿನಲ್ಲಿ ಈ ಎರಡೂ ಸಮಾಜದವರನ್ನು ಒಗ್ಗೂಡಿಸಿಲ್ಲವೆ? ಅವರಿಗೆ ಮಾತ್ರ ಇದು ಹೇಗೆ ಸಾಧ್ಯವಾಯಿತು? ಅವರೇನು ಆಗರ್ಭ ಶ್ರೀಮಂತರಲ್ಲ! ಅಥವಾ ಇನ್ಯಾವುದೇ ಅಧಿಕಾರದಲ್ಲಿಯೂ ಇಲ್ಲ. ಒಬ್ಬ ಸಾಮಾನ್ಯ ಮನುಷ್ಯನಿಗೆ ಇದು ಸಾಧ್ಯವಾಗಿದೆ ಎಂದ ಮೇಲೆ ಹೀಗೆ ಮುಂದುವರೆದಲ್ಲಿ ಸಾಮಾನ್ಯ ಜನತೆಯೇ ಇದಕ್ಕೆ ಪರಿಹಾರ ಹುಡುಕುತ್ತಾರೆ. ಎರಡೂ ಸಮಾಜಕ್ಕೂ ಜನರು ಬಾರದೇ ಹೋಗಬಹುದು. ಪರಿಸ್ಥಿತಿ ಕೈಮೀರುವ ಮುಂಚೆ ಎಚ್ಚೆತ್ತುಕೊಳ್ಳುವುದು ಒಳ್ಳೆಯದು. ಉದಾ : ಕೊಂಬಾರನ ಮನೆಯವರು ಅದೇ ತಾರೀಕಿನಂದು (ಕೊಡಗು ಮತ್ತು ದ. ಕನ್ನಡ) ಕೈಲು ಮುಹೂರ್ತ ಹಬ್ಬದ ದಿನವೇ ಒಬ್ಬರ ಮನೆಯಲ್ಲಿ ಸೇರಿ ಕೈಲು ಮುಹೂರ್ತ ಆಚರಿಸಿದರು. ಹೆಚ್ಚಿನ ಜನರಿಗೆ ಗೊತ್ತಿರಲಿಕ್ಕಿಲ್ಲ. ಇಂದು ಇವರು, ನಾಳೆ ಬೇರೆ ಮನೆತನದವರು, ಕೂಡ ಇದೇ ಹಾದಿ ಹಿಡಿದಾಗ ಸಮಾಜದ ಅವಸ್ಥೆ ಏನಾಗಬಹುದು? ಇದು ಪ್ರತ್ಯಕ್ಷವಾಗಿ ಸಮಾಜ (ಸಂಘ)ಕ್ಕೆ ಬಹಿಷ್ಕಾರ ಹಾಕಿದಂತಲ್ಲವೆ? ಸಮಾಜದಲ್ಲಿ ಉಪಸ್ಥಿತರಿದ್ದ ಅತಿಥಿಗಳೊಬ್ಬರು ಸಂಘ ಮತ್ತು ಸಮಾಜಕ್ಕಿರುವ ವ್ಯತ್ಯಾಸವನ್ನು ಬಹಳ ಚೆನ್ನಾಗಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಬಹಳ ಸಂತೋಷ. ಆದರೆ ಸಮಾಜದ ಕರ್ತವ್ಯದ ಕಡೆಗೂ ಗಮನ ಹಾಯಿಸಿದರೆ ಒಳ್ಳೆಯದಲ್ಲವೆ?

ಎರಡೂ ಸಮಾಜದ ಮುಖಂಡರ (ಕಾರ್ಯಕರ್ತರ)ಲ್ಲಿ ನನ್ನದೊಂದು ಸವಿನಯ ಪ್ರಾರ್ಥನೆ. ಯುವಕರಿಗೆ ದಾರಿದೀಪವಾಗುವ ಬದಲು ಮುಳುವಾಗುವುದು ಬೇಡ. ದಯವಿಟ್ಟು ಇನ್ನು ಮುಂದಾದರೂ ಇಂತಹ ಪರಿಸ್ಥಿತಿ ಉಂಟಾಗಲು ಅವಕಾಶ ಮಾಡಿಕೊಡಬೇಡಿ ಎಂದು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

**ಬಿಟ್ಟೀರ ಚೋಂದಮ್ಮ ಶಂಭು, ಬೆಂಗಳೂರು**

---

## ಶುಭವಿವಾಹ

ಬೆಂಗಳೂರು ನಿವಾಸಿ ಬಿ. ಶಿವರಾಮಗೌಡ ಮತ್ತು ಕೆ. ಎಂ. ಕುಸುಮಾವತಿ ದಂಪತಿಗಳ ಪುತ್ರಿ **ಬಿ. ಎಸ್. ಸವಿತ** ಇವಳ ವಿವಾಹವು ಬೆಂಗಳೂರಿನ ನಿವಾಸಿ ಕಾಯರ್‌ಕಟ್ಟೆ ದಿ. ರಾಮದಾಸ್‌ರವರ ಪುತ್ರ **ಆರ್. ತೀರ್ಥಾನಂದರ** ವಿವಾಹವು ದಿನಾಂಕ 31-12-1999 ರಂದು ಬೆಂಗಳೂರಿನಲ್ಲಿ ವಿಜೃಂಭಣೆಯಿಂದ ನಡೆಯಿತು

ಮಡಿಕೇರಿ ನಿವಾಸಿ ಬೈತಡ್ಕ ಬೆಳ್ಯಪ್ಪನವರ ಪುತ್ರ **ನಂಜಪ್ಪನಿಗೂ** ಮತ್ತು ಬೆಂಗಳೂರು ನಿವಾಸಿ ದಿ. ಜೋಸೆಫ್ ಬಾಬುರವರ ಪುತ್ರಿ **ಪ್ರಿಸಿಲ್ಲಾಳಿಗೂ** ದಿನಾಂಕ 9-12-1999ರಂದು ಮಡಿಕೇರಿಯ ಕೆಳಗಿನ ಗೌಡ ಕಲ್ಯಾಣ ಮಂಟಪದಲ್ಲಿ ನಡೆಯಿತು.

ಮರಗೋಡು ಮುಕ್ಕಾಟಿರ ಕರುಂಬಯ್ಯನವರ ಪುತ್ರ **ಕುಸುಮಧರನಿಗೂ** ಹೊಸ್ಕೇರಿ ಗ್ರಾಮದ ಬೊಳ್ಳೂರು ಚಂಗಪ್ಪನವರ ಪುತ್ರಿ **ಘನಾವತಿಗೂ** ದಿನಾಂಕ 13-12-1999ರಲ್ಲಿ ಮಡಿಕೇರಿಯ ಮೇಲಿನ ಗೌಡ ಸಮಾಜಲಿ ನಡೆಯಿತು.

ಮಡಿಕೇರಿ ವಾಸಿ ಬೊಳ್‌ದಂಡ ಪೆಮ್ಮಯ್ಯನವರ ಪುತ್ರ **ಮುತ್ತಣ್ಣನಿಗೂ** ಮೈಸೂರು ನಿವಾಸಿ ಬಲ್ಲ ಕಾಳಂಡ ಬೆಳ್ಯಪ್ಪನವರ ಪುತ್ರಿ **ಕಾವೇರಿಯ** ವಿವಾಹವು ದಿನಾಂಕ 5-12-1999ರಂದು ವಿರಾಜಪೇಟೆ ಕೊಡವ ಸಮಾಜದಲ್ಲಿ ನಡೆಯಿತು.

ಅಭ್ಯತ್‌ಮಂಗಲ ನಿವಾಸಿ ಕರ್ಣೆಯ್ಯನ ವಿಶ್ವನಾಥರವರ ಪುತ್ರಿ **ಕನ್ನಿಕಾ** ಮತ್ತು ಬೆಂಗಳೂರು ವಾಸಿ ಚೀಯಂಡಿರ ಬಸಪ್ಪನವರ ಪುತ್ರ **ಭಗವಾನ್**‌ರ ವಿವಾಹವು ಮಡಿಕೇರಿಯ ಕೆಳಗಿನ ಗೌಡ ಸಮಾಜದಲ್ಲಿ ಭಾರಿ ವಿಜೃಂಭಣೆಯಿಂದ ನಡೆಯಿತು

ಬೆಟ್ಟತ್ತೂರು ಗ್ರಾಮದ ಚೆರಿಯಮನೆ ಮುತ್ತಣ್ಣನವರ ಮಗಳು **ಜ್ಯೋತಿ** ಮತ್ತು ನರಿಯಂದಡ ಗ್ರಾಮದ ಮಂಞ್ಞಾಪುರ ತಿಮ್ಮಯ್ಯನವರ ಮಗ **ಪೂಣಚ್ಚನ** ವಿವಾಹವು 5-12-1999ರಂದು ಮಡಿಕೇರಿ ಮೇಲಿನ ಗೌಡ ಸಮಾಜದಲ್ಲಿ ನಡೆಯಿತು

# ನಮ್ಮ ಲೇಖಕರ ಪರಿಚಯ :



ಆಜಡ್ಕ ರಾಣಿ ಬಾಲಕೃಷ್ಣ

ಮಾಲ್ದಾರೆಯ ಪಾಣತ್ತಲೆ ದೇವಯ್ಯ ಹಾಗೂ ಪೂವಮ್ಮನವರ ಪ್ರಥಮ ಪುತ್ರಿಯಾಗಿ ಜನಿಸಿದ ಇವರ ತಂದೆ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾದರು. ತಾಯಿ ಗೃಹಿಣಿ. ಇವರಿಗೆ ಎರಡು ತಂಗಿಯರು ಹಾಗೂ ಎರಡು ತಮ್ಮಂದಿರು. ವಿದ್ಯಾಭ್ಯಾಸವು ಕೂಡ ತಂದೆಯವರ ವರ್ಗಾವಣೆಯಾದ ಕಡೆಯೆಲ್ಲಾ ನಡೆಯಿತು. ತನ್ನ ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸವನ್ನು ವೀರಾಜಪೇಟೆ ಸರಕಾರಿ ಹೈಸ್ಕೂಲ್‌ನಲ್ಲಿ ಮಾಡಿದರು. ನಂತರ ಕುಶಾಲನಗರಕ್ಕೆ ವರ್ಗಾವಣೆಯಾದ ಕಾರಣ ಬೆರಳಚ್ಚು ವಿದ್ಯಾಭ್ಯಾಸವನ್ನು (Junior) ಪ್ರಥಮ ಶ್ರೇಣಿಯಲ್ಲಿ ಪಾಸು ಮಾಡಿದರು. ಮುಂದಿನ ವಿದ್ಯಾಭ್ಯಾಸಕ್ಕೆ ಕಾರಣಾಂತರದಿಂದ ಕಷ್ಟವಾಯಿತು. ತಾಯಿಯವರು ಮಾಲ್ದಾರೆಯಲ್ಲಿರುವ ಭೂಮಿಯ ಉಸ್ತುವಾರಿಯನ್ನು ನೋಡಿಕೊಳ್ಳಲು ಮಾಲ್ದಾರೆಗೆ ಹೋದರು. ವಿದ್ಯೆ ಅಲ್ಲಿಗೆ ಮುಕ್ತಾಯವಾಯಿತು. ಇವರಿಗೆ ಸರಕಾರಿ ಉದ್ಯೋಗದಲ್ಲಿರಬೇಕೆಂದು ತುಂಬಾ ಆಸೆ ಇತ್ತಂತೆ ತಮ್ಮ ತಂಗಿಯರ ಭವಿಷ್ಯಕ್ಕೆ ಇವರು ಹೆಗಲು ಕೊಡಬೇಕಾಯ್ತು. ಹಾಗಾಗಿ ಇವರು ಎಲ್ಲಾ ರೀತಿಯಲ್ಲಿಯೂ ಅಸಹಾಯಕರಾದರು.

ಇವರಿಗೆ ಕೈಗಾರಿಕೆ, ಕಲೆಗಳಲ್ಲಿ ಹುಮ್ಮಸ್ಸು ಹೆಚ್ಚು. ಇವರು ಟೈಲರಿಂಗ್ ಮಾಡುತ್ತಿದ್ದರು. ಜೊತೆಗೆ ಕಾದಂಬರಿಗಳನ್ನು ಓದುವುದು ಮತ್ತು ಕೆಲವೊಮ್ಮೆ ಬಿಡುವಾದಗ ತನ್ನ ಮನಶಾಂತಿಗಾಗಿ ಚಿಕ್ಕ ಪುಟ್ಟ ಕಥೆಗಳನ್ನು ಮತ್ತು ಕವನಗಳನ್ನು ಬರೆಯುತ್ತಿದ್ದರು. ಹಾಗೂ ಮಂಗಳ, ಸುಧಾ, ಪ್ರಜಾಮತ, ವಾರ ಪತ್ರಿಕೆಗಳನ್ನು ಓದಿ ಅದರಲ್ಲಿ ಪ್ರಕಟವಾದ ಧಾರವಾಹಿಗಳನ್ನು ಸಂಗ್ರಹಿಸಿ ಓದುಗರಿಗೆ ಅನುಕೂಲವಾಗುವಂತೆ ನೂರಕ್ಕೂ ಹೆಚ್ಚು ಪುಸ್ತಕಗಳನ್ನು ತಯಾರಿಸಿದ್ದಾರೆ.

1981ರಲ್ಲಿ ಇವರ ವಿವಾಹವು ಕಾಸರಗೋಡು ತಾಲ್ಲೂಕು, ಆಜಡ್ಕ ದೇರಣ್ಣನವರ ದ್ವಿತೀಯ ಪುತ್ರ ಬಾಲಕೃಷ್ಣನವರೊಂದಿಗೆ ಆಯಿತು. ಇವರು ಕೂಡ ಪೋಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈಗ ಇವರು ಮಡಿಕೇರಿ ನಗರ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿರುವರು. ಇವರಿಗೆ ಒಬ್ಬನೇ ಮಗ, ಹೆಸರು ರೋಹಿತ್, ಕುಶಾಲನಗರದ ಕನ್ನಡ ಭಾರತಿ, ಕಾಲೇಜ್‌ನಲ್ಲಿ ದ್ವಿತೀಯ ಪಿ.ಯು.ಸಿ. ವ್ಯಾಸಂಗ ಮಾಡುತ್ತಿರುವನು.

ರಾಣಿಯವರ ಲೇಖನವು "ಶಕ್ತಿ ದಿನ" ಪತ್ರಿಕೆಯಲ್ಲಿ ಪ್ರಕಟವಾಗಿದೆ. ಕೆಲವೊಮ್ಮೆ "ಉಭಯ ಕುಶಲೋಪರಿ" ವಿಭಾಗದಲ್ಲಿಯೂ ಪ್ರಕಟವಾಗಿದೆ. ಈ ಬರವಣಿಗೆಯೇ ಪ್ರೇರಣೆಯಾಯ್ತು. ಹೀಗೆ ಇದನ್ನು ಒಂದು ಹವ್ಯಾಸವಾಗಿ ಮುಂದುವರಿಸಿಕೊಂಡು ಬಂದರು ಶ್ರೀಮತಿ ರಾಣಿಯವರು.

"ಕೊಡಗು ಸಂಗಾತಿಯು ಗೌಡ ಜನಾಂಗದ ಪತ್ರಿಕೆಯಾಗಿ ಹೊರ ಹೊಮ್ಮಿರುವುದು ಇವರಿಗೆ ಸ್ಫೂರ್ತಿ ನೀಡಿ ಸಹಕರಿಸಿದೆ ಎನ್ನುತ್ತಾರೆ. ಅದನ್ನು ಓದಿದ ರಾಣಿಯವರಿಗೂ ಅದರಲ್ಲೂ ಮದೆ ಜೋಯಪ್ಪನವರ ಹಾಸ್ಯ ಲೇಖನವನ್ನು ಓದಿ ಸಂತೋಷ ಹಾಗೂ ಇವರಿಗೆ ಬರೆಯಬೇಕೆಂಬ ಕುತೂಹಲವಾಯಿತಂತೆ. ಜೋಯಪ್ಪನವರಿಗೆ ಶ್ರೀಮತಿ ರಾಣಿಯವರು ಚಿರಋಣಿಯಂತೆ. ಇವರು ಬರೆದ ಲೇಖನವು ಪ್ರಕಟವಾದ ನಂತರ ನನಗೆ ಪ್ರೋತ್ಸಾಹ ಸಿಕ್ಕಿದಂತಾಯಿತು. ನನ್ನ ಮನಸ್ಸಿಗೆ ಅವರ ಲೇಖನವೇ ಸ್ಫೂರ್ತಿ ಸಿಕ್ಕಿದಂತಾಯಿತೆನ್ನುತ್ತಾರೆ.

ಕೊಡಗು ಸಂಗಾತಿಯು ಹೆಚ್ಚಿನ ಪುಟಗಳಲ್ಲಿ ಹೊರ ಹೊಮ್ಮಲಿ ಎಂದು ನಾನು ಆಶಿಸುತ್ತೇನೆ. ನನ್ನ ಕಿರು ನೆನಪುಗಳೊಂದಿಗೆ ನಿಮ್ಮ ಪ್ರೋತ್ಸಾಹ, ಸಲಹೆ, ಹಾಗೂ ಜನರ ಅಭಿಮಾನ ಸದಾ ಇರಲಿ ಎನ್ನುತಾ ಸಂಗಾತಿಯನ್ನು ತುಂಬು ಹೃದಯದಿಂದ ನೆನಯುತ್ತಾರೆ ಆಜಡ್ಕ ರಾಣಿ ಬಾಲಕೃಷ್ಣನವರು. ಇವರಿಗೆ ಜನಾಂಗದ ಪರವಾಗಿ ಸಂಗಾತಿಯು ಶುಭವನ್ನು ಹಾರೈಸುತ್ತದೆ.

**ಬರಹ : ಪಟ್ಟಡ ಪ್ರಭಾಕರ**

---

## ನಗೆಹನಿ

ಒಂದು ಹುಚ್ಚಾಸ್ಪತ್ರೆಯಲ್ಲಿ ಒಬ್ಬ ಹುಚ್ಚ ಡಾಕ್ಟರ ಬಳಿ ಬಂದು ಡಾಕ್ಟ್ರೆ ಡಾಕ್ಟ್ರೆ ನನ್ನ ಜೊತೆಗಾರ ನೀರಲಿ ಬಿದ್ದ ಅವನನ್ನು ಮೇಲೆತ್ತಿದ್ದೇನೆ ಎಂದ.

ಡಾಕ್ಟರ್ ಪರ್ವಾಗಿಲ್ಲ ನಿನಗೆ ಹುಚ್ಚು ಬಿಟ್ಟಿದೆ. ಅವನನ್ನು ಎಲ್ಲಿ ಬಿಟ್ಟಿದ್ದೀಯ ಎಂದು ಡಾಕ್ಟರ್ ಕೇಳಿದರು

ಆಗ ಅವನು ಹೇಳಿದ ಒದ್ದೆಯಾಗಿದೆಯಲ್ಲ ಡಾಕ್ಟರ್ ಅದಕ್ಕೆ ಒಣಗಲು ಅವನ ಕುತ್ತಿಗೆಗೆ ಹಗ್ಗ ಕಟ್ಟಿ ಮರಕ್ಕೆ ತೂಗು ಹಾಕಿದ್ದೇನೆ ಎಂದ.

**ಮುಕ್ಕಾಟಿ ಕೆ. ಮೋಹನ್, ಮರಗೋಡು**

ವಧು ಪರೀಕ್ಷೆ ಆದ ಮೇಲೆ ಹೈದ ಒಬ್ಬ ನಿಮ್ಮ ಮಗಳ ಮದುವೆ ಮಾಡಿಕಂಡ್ರೆ ಎಷ್ಟ್ ದೌರಿ ಕೊಟ್ರೆ?

ಅಪ್ಪ ಮೂರು ತುಂಬಿದ ಪೆಟ್ಟಿಗೆ ಕೊಟ್ಟನೆ

ಹೈದ ಅದರ್ಲಿ ಎಂತಟ್ಟು?

ಅಪ್ಪ ಹಳೆ ಚಪ್ಪಲ್ ಶೂ ಉಟ್ಟು

**ದೇರಜೆರ ಕಿರಣ, ಮುತ್ತಾರ್ಮುಡಿ**




✦ ಕೌಂಡಿನ್ಯ

**ಧಾರವಾಹಿ -21**

ಅದು ದೇವಸ್ಥಾನದ ಜಗುಲಿ !

ಅಲ್ಲಿ ಮೀನಳ ಸಹೋದರ ಶ್ರೀಕಂಠ, ಅಜ್ಜಿ, ದೇವಸ್ಥಾನದ ಪೂಜಾರಿ ಮತ್ತು ರೇವತಿ ಇದ್ದಾರೆ.

ಆಗ ರಾತ್ರಿ ಎಂಟು ಗಂಟೆ !

ಅಜ್ಜಿ ಭಯ, ಗಾಬರಿಯಿಂದ "ರೇವತಿ.... ನೀನು ನಾಳೆ ಬೆಳಿಗ್ಗೆ ಊರಿಗೆ ಹೊರಟು ಬಿಡು. ಇಲ್ಲಿ ನಿನಗೇನಾದರು ಹೆಚ್ಚು ಕಡಿಮೆಯಾದರೆ ನಿನ್ನ ತಂದೆ ತಾಯಿಗೆ ನಾವು ಉತ್ತರ ಹೇಳಬೇಕಾಗುತ್ತದೆ" ಎಂದರು.

ಶ್ರೀಕಂಠ ಗಂಭೀರವಾಗಿ "ನಿಮಗೆ ಸಂಬಂಧ ಪಡದ ವಿಚಾರಕ್ಕೆ ತಲೆ ಕೆಡಿಸಿ ಕೊಂಡು ಅಪಾಯವನ್ನು ನೀವಾಗಿಯೇ ಮೈಮೇಲೆ ಹಾಕಿಕೊಳ್ಳಬೇಡಿ.

ಯುವಕ ಪೂಜಾರಿ "ರೇವತಿ...... ನಾನು ಈ ಹಿಂದೆಯೇ ಎಚ್ಚರಿಕೆ ನೀಡಿದ್ದೆ. ನೀನ್ಯಾಕೆ ಒಬ್ಬಳೇ ಆ ಹುತ್ತದ ಹತ್ತಿರ ಹೋಗಿದ್ದೆ. ನನ್ನನ್ನೋ ಅಥವಾ ಶ್ರೀಕಂಠನನ್ನೋ ಕರೆಯಬಾರದಿತ್ತೆ ರೇವತಿ"

ರೇವತಿ "ಆಗ ನೀವ್ಯಾರು ಇರಲಿಲ್ಲ"

ಪೂಜಾರಿ "ಅಜ್ಜಿ ಹೇಳಿದಂತೆ ಕೇಳು ಮೊದಲು ನೀನು ಈ ಊರಿನಿಂದ ಹೊರಟು ಹೋಗು"

ರೇವತಿ ದುಃಖ ಕೋಪದಿಂದ "ನೀವೆಲ್ಲ ಯಾಕೆ ಈ ರೀತಿ ಆಡುತ್ತಿದ್ದೀರ? ನನ್ನ ಗೆಳತಿ ಮೀನ ಎಂತಹ ಭಯಂಕರ ಸನ್ನಿವೇಶದೊಂದಿಗೆ ಪ್ರಾಣ ಕಳೆದುಕೊಂಡಳು. ಅವಳ ಸಾವಿನ ಹಿಂದೆ ಏನಿದೆ ಅಂತ ಪತ್ತೆ ಮಾಡಬೇಕೆಂಬ ಮನಸ್ಸು ನಿಮಗ್ಯಾರಿಗೂ ಇಲ್ಲವೆ? ಛೇ..... ಛೇ,...."

ಶ್ರೀಕಂಠ "ಅದು ಅಷ್ಟು ಸುಲಭವಲ್ಲ, ಸಾವಿನ ಸತ್ಯ ಹುತ್ತದಲ್ಲಿ ಸೇರಿ ಹೋಗಿದೆ."

ಪೂಜಾರಿ "ಸತ್ಯ ಕಂಡು ಹಿಡಿಯುತ್ತೇನೆ ಅಂತ ಹಾವಿನ ಹುತ್ತಕ್ಕೆ ಕೈ ಹಾಕಿದರೆ ಸಾವು ಗ್ಯಾರಂಟಿ"

ರೇವತಿ ದುಃಖ ಕೋಪದಿಂದ "ನೀವು ಯಾರು ಏನೇ ಹೇಳಿದರೂ ಸಹ ನನ್ನ ಪ್ರಯತ್ನ ನಿಲ್ಲಿಸೋಲ್ಲ"

"ಹಾಗಲ್ಲ ರೇವತಿ"

ರೇವತಿ ಗಡುಸಾಗಿ "ನಿಮಗ್ಯಾರಿಗೂ ತೊಂದರೆಯಾಗದಂತೆ ನಾನು ಇವತ್ತೇ ಪತ್ರ ಬರೆದು ಇಡುತ್ತೇನೆ. ಒಂದು ವೇಳೆ ನಾನು ಸತ್ತರೂ ಸಹ ನಮ್ಮನ್ನು ಯಾರು ಕೇಳಬಾರದು"

ಉಳಿದವರು ಬೆರಗಾದರು !

ಎಂತಹ ಧೈರ್ಯ ಹಟ ಈ ಹೆಣ್ಣಿಗೆ !

ಪೂಜಾರಿ ಅವಳ ಹತ್ತಿರ ಬರುತ್ತಾ "ನಿನ್ನನ್ನು ನೋಡುತ್ತಿದ್ದರೆ ನಮಗೆಲ್ಲಾ ನಾಚಿಕೆಯಾಗುತ್ತದೆ. ರೇವತಿ..... ಈ ಕ್ಷಣದಿಂದ ನಿನ್ನ ಸಹಾಯಕ್ಕೆ ನಾನಿರುತ್ತೇನೆ"

ಶ್ರೀಕಂಠ ಅವಳ ಕೈ ಹಿಡಿದುಕೊಂಡು "ರೇವತಿ ನೀವು ನನಗೆ ಅಕ್ಕ ಇದ್ದಂತೆ. ಪ್ಲೀಸ್.... ನಮಗೆ ತಿಳಿಸದೆ ಒಬ್ಬರೇ ಯಾವ ಸಾಹಸವನ್ನು ಮಾಡಬೇಡಿ"

ರೇವತಿ ಸಂತೋಷದಿಂದ "ನೀವಿಬ್ಬರು ನನ್ನ ಸಹಾಯಕ್ಕೆ ಇರುವಾಗ ನಾನೇಕೆ ಒಬ್ಬಳೇ ಹೋಗಲಿ"

"ರೇವತಿ ನಿನ್ನ ಪ್ರೋಗ್ರಾಂ ಏನು?"

ರೇವತಿ ತಲೆಯಾಡಿಸುತ್ತಾ "ಇಲ್ಲಿ ನಡೆದಿರುವ ಸಂಗತಿಯನ್ನೆಲ್ಲಾ ನಮ್ಮ ಪ್ರೊಫೆಸರ್‌ಗೆ ಬರೆದು ತಿಳಿಸಿದ್ದೇನೆ. ಹಾವುಗಳ ವಿಚಿತ್ರ ವರ್ತನೆಯ ಬಗ್ಗೆ ಕಾರಣ ಕಂಡು ಹಿಡಿಯಲು ಅವರು ಪ್ರಯತ್ನಿಸುತ್ತಿದ್ದಾರೆ. ಅದು ಗೊತ್ತಾದರೆ ಇನ್ನು ಮುಂದೆ ಇಂತಹ ಭೀಕರ ಘಟನೆ ನಡೆಯಲು ಆಸ್ಪದವಾಗುವುದಿಲ್ಲ"

ಪೂಜಾರಿ ಸಂತೋಷದಿಂದ "ವೆರಿಗುಡ್ ರೇವತಿ..... ನಿನ್ನ ಪ್ರಯತ್ನಕ್ಕೆ ಫಲ ಸಿಗಲಿ"

ರೇವತಿ ಚಿಂತಿಸುತ್ತಿದ್ದಾಳೆ.

* * *

ರಾತ್ರಿ ಹನ್ನೊಂದರ ಸಮಯ !

ಎಡತೊರೆಯ ಬಂಗಲೆ !

ಬಂಗಲೆಯಲ್ಲಿ ಹತ್ತು ರೂಮುಗಳಿವೆ. ಎಲ್ಲಾ ರೂಮುಗಳಲ್ಲೂ ದೀಪ ಆರಿದೆ !

ರೂಮೊಂದರ ಬಾಗಿಲು ತೆರೆಯಿತು !

ಅಲ್ಲಿಂದ ವ್ಯಕ್ತಿಯೊಂದು ಬಂದಿತು !

ಆ ವ್ಯಕ್ತಿ ಮುಸುಕನ್ನು ಧರಿಸಿದೆ. ಅದರೊಂದಿಗೆ ದೇಹದ ತುಂಬಾ ದೊಡ್ಡ ರಗ್ಗನ್ನು ಸುತ್ತಿಕೊಂಡಿದೆ !

ಗಂಡೋ... ಹೆಣ್ಣೋ ಗೊತ್ತಾಗುತ್ತಿಲ್ಲ !

ಮುಸುಕುಧಾರಿ ಈಗ ಪ್ರಸನ್ನನ ರೂಮಿನ ಹತ್ತಿರ ಬಂದಿತು ! ವಿಂಡೋ ಮೂಲಕ ಕೈ ತೂರಿಸಿತು !

ವ್ಯಕ್ತಿಯ ಕೈಯಲ್ಲಿ ಪಿಸ್ತೂಲ್ ಇದೆ !

ಸೈಲೆನ್ಸರ್ ಕ್ಯಾಪ್ ಇರೋ ಪಿಸ್ತೂಲ್ !

ಮಂಚದ ಮೇಲೆ ಪ್ರಸನ್ನ ಮಲಗಿದ್ದಾನೆ. ದೇಹದ ಒಂದು ಅಂಗುಲ ಸಹ ಕಾಣದಂತೆ ಪೂರ್ತಿಯಾಗಿ ಮುಸುಕನ್ನು ಹೊದ್ದುಕೊಂಡು ಗಾಢವಾಗಿ ನಿದ್ರಿಸುತ್ತಿದ್ದಾನೆ

ಪಿಸ್ತೂಲಿನ ಟ್ರಿಗ್ಗರ್ ಅದುಮಿತು !

ನಿಶ್ಯಬ್ಧವಾಗಿ ಗುಂಡು ಬಡಿಯಿತು !

ಯಾವ ರೀತಿಯ ಕಿರುಚುವಿಕೆ ಕೇಳಿ ಬರಲಿಲ್ಲ. ಗುಂಡು ತಗುಲಿದರೆ ಕಿರುಚದಿರಲು ಸಾಧ್ಯವೆ?

ಆ ವ್ಯಕ್ತಿಗೆ ಭಯವಾಯಿತು !

ಸರಸರನೆ ಅಲ್ಲಿಂದ ಮರೆಯಾಯಿತು. ದಡದಡನೆ ಓಡಿ ಹೋಗುತ್ತಿದೆ.

15ನೇ ಪುಟಕ್ಕೆ

**ಇಲ್ಲಿಯವರೆಗೆ.........**

ರೇವತಿ ತನ್ನನ್ನು ಅನುಮಾನಿಸಿದ್ದರಿಂದ 'ಬೇಸರಗೊಂಡ ಪ್ರಸನ್ನ ಬಂಗಲೆಗೆ ಹಿಂತಿರುಗುತ್ತಾನೆ. ಅಲ್ಲಿ ಅವನನ್ನು ಸಾಯಿಸಲು ನಿಗೂಢ ರೀತಿಯಲ್ಲಿ ಯಾರೋ ವಿಫಲ ಪ್ರಯತ್ನ ನಡೆಸಿರುತ್ತಾರೆ. ಪ್ರಸನ್ನನಿಗೆ ತನ್ನ ಅಕ್ಕನ ಮೇಲೆ ಅನುಮಾನ ಬರುತ್ತದೆ.

ಮುಂದೆ ಓದಿ..........

# ಹೆಣ್ಣು ಅಬಲೆಯಲ್ಲ ಎಂದಿಗೂ ಸಬಲಳೆ

## ಕಥೆ : ಮಹಿಷಾಸುರ ಮರ್ಧಿನಿ

ದೇವದಾನವರಿಗೆ ಹಿಂದಿನಕಾಲದಲ್ಲಿ ಆಗಾಗ ಜಗಳ ಆಗ್‌ತ್ತಿತ್. ಅವರಲ್ಲಿ ಮಹಿಷಾಸುರ ಎಂಬವ ತುಂಬಾ ಅಹಂಕಾರಲಿ ಮೆರಿತ್ತಿತ್. ಒಮ್ಮೆ ಇಂವ ಮೂರುಲೋಕಕ್ಕೆ ಅಧಿಪತಿ ಆಕುಂತಹೇಳಿ "ಬ್ರಹ್ಮದೇವನ ಗ್ಯಾನ ಮಾಡಿ ತಪಸ್ಸು ಮಾಡಿಕೆ ಸುರು ಮಾಡ್ತ್. ಆಗ ಬ್ರಹ್ಮದೇವ ಪ್ರತ್ಯಕ್ಷ ಆಗಿ ನಿಂಗೆ ಏನ್ ವರ ಬೇಕ್ ಕೇಳಿಕಾಂತ ಹೇಳ್‌ಕನ, ಇಂವ ಹೇಳ್ತ್ "ನಂಗೆ ಮೂರು ಲೋಕಕ್ಕೆ ಅಧಿಪತಿ ಆಕು. ಅಲ್ಲದೆ ಯಾರಿಂದಲೂ ನಂಗೆ ಸಾವು ಬಾಕಾಗದ್‌ಂತ ವರ ಕೊಡು ಎಂದು ಕೇಳಿಕಂತ್. ಆಗ ಬ್ರಹ್ಮದೇವ ತಥಾಸ್ತುತ ಹೇಳಿದೆ, ಆದ್ರೆ ನಿಂಗೆ ಹೆಣ್ಣಿಂದ ಮಾತ್ರ ಸಾವು ಖಂಡಿತಾ. ಅದ್ಟರಿಂದ ನೀನ್ ಜಾಗ್ರತೆಯಿಂದಿರ್‌ತ ಹೇಳಿ ಮಾಯ ಆತ್. ನನ್ನಂತ ಸೂರಂಗೆ ಹೆಣ್ಣಿಂದ ಸಾವು ಉಟ್ಟಾ, ಇದೆಲ್ಲಾ ಭ್ರಮೆ ಎಂದ್ ಭಾವಿಸಿ, ದೇವಲೋಕಕ್ಕೆ ಕಿರುಕುಳ ಕೊಡಿಕ್ಕೆ ಸುರು ಮಾಡ್ತ್.

ಇದರಿಂದಾಗಿ ದೇವರಿಗೂ ಅಲ್ಲದೆ, ಋಷಿಗಳ ಯಜ್ಞಗಳಿಗೂ ತೊಂದರೆ ಆತ್. ಅವರಲ್ಲಿ ಸಾವು ನೋವು ಉಂಟಾತ್. ಇದನ್ನ ದೇವರ್‌ಗಳಿಂದ ತಡಿಯಕ್ಕೆ ಆಗದೆ ಎಲ್ಲವು ಸೇರಿ, ತ್ರಿಮೂರ್ತಿಗಳ ಪಾದಕ್ಕೆ ಬಿದ್ಟ್ ಬೇಡಿಕೊಂಡೋ, ಇದಕ್ಕೆಲ್ಲಾ ಪಾರ್ವತಿಯೇ ದಾರಿ ತೋರಿಸೋಕುತ್ತೇಳಿ ಹೇಳ್‌ಕನ, ಪಾರ್ವತಿ ಅಲ್ಲಿಂದ ಎದ್ದು ಹೋದೆ. ಅವಳನ್ನ ಅನುಸರಿಸಿ, ಲಕ್ಷ್ಮಿ ಮತ್ತು ಸರಸ್ವತಿ ಸಹ ಎದ್ಟ್ ಹೋದವೆ. ಅವು ಮೂರು ಜನ ಒಟ್ಟಿಗೆ ಮಾಯದಲ್ಲಿ ಐಕ್ಯ ಆಗಿ, ಒಂದು ಬೆಳಕ್ ರೂಪಲಿ ಹೊರಬಂದವೆ. ಅದೇ ಕಡೆಗೆ ಚಾಮುಂಡೇಶ್ವರಿ ಆಗಿ ಅವತಾರ ತಾಳಿದೆ. ಅವಳಿಗೆ ಬಲಭಾಗಲಿ ಮೂರಕ್ಕೆ, ಎಡಭಾಗಲಿ ಮೂರು ಕೈಗಳಿದ್ದವೆ. ಬಲಗಡೆಯ ಒಂದು ಕೈಲಿ ವಿಷ್ಣು ಚಕ್ರ, ಎರಡನೆ ಕೈಲಿ ಬಾಳ್‌ಕತ್ತಿ, ಮೂರನೇ ಕೈಲಿ ತ್ರಿಶೂಲ ಇದ್ದದೆ. ಹಂಗೆ ಎಡಭಾಗದ ಕೈಯಲ್ಲಿ ಒಂದರಲಿ ತಾವರೆ ಹೂ, ಎರಡನೇ ಕೈಲಿ ಗದೆ, ಮೂರನೆ ಕೈಲಿ ಬಿಲ್ಲು ಬಾಣ ಇದ್ದದೆ. ಇಂತಹ ಅಸ್ತ್ರಗಳನ್ನ ಪಡೆದ್ ಆಕಾಶಮಾರ್ಗ ಆಗಿ ಹೋಕನ, ಮಹಿಷಾಸುರನ ಕಂಡದೆ. ಆಗ ಅವಂಗೆ ಅವಳ ಮೇಲೆ ಆಶೆ ಆದೆ. ಇಂತ ಸುರಸುಂದರಿನ ಬುಡ್‌ಕಾಗದ್‌ತ ಹೇಳಿ, ಅವಳ ಹತ್ತಿರ ನನ್ನನ್ನ ಪ್ರೀತಿಸ[illegible], ನನ್ನವಳಾಕುತ್ತೇಳಿ ಕೇಳಿ ಕಂಡದೆ. ಆಗ ಅವಳು ಕೋಪಿಷ್ಠೆ ಆಗಿ ತನ್ನಲಿದ್ದ ಎಲ್ಲಾ ಅಸ್ತ್ರಗಳನ ಉಪಯೋಗಿಸಿ, ಸೋಲಿಸಿಕೆ ನೋಡ್ದೆ. ಆದರೆ ಯಾವುದ್ ಪ್ರಯೋಜನ ಆದುಲೆ. ಕಡೇಗೆ ತ್ರಿಮೂರ್ತಿಗಳನ್ನ ಗ್ಯಾನ ಮಾಡಿ ವಿಷ್ಣು ಚಕ್ರ ಬಿಟ್ಟದೆ. ಚಕ್ರ ಹೋಗಿ ಮಹಿಷಾಸುರನ ಕುತ್ತಿಗೆ ಕತ್ರಿಸಿದೆ. ತುಂಡಾದ ಕುತ್ತಿಗೆ ಆಹಾ....ಹಾ....ಹಾ...ತಾ ನಗೆಡಿಕಂಡ್ ಆಕಾಶಲಿ ಮಾತಾಡಿಕೆ ಸುರು ಮಾಡ್ದೆ. ನನ್ನ ನೀನ್ ಏನ್ ಮಾಡಿಕೆ ಸಹ ಆದುತ ನನ್ನ ತಲೆಯಿಂದ ಬಿದ್ದ ಒಂದೊಂದು ತೊಟ್ಟು ರಕ್ತಲಿ ಸಹ ನಾನು ಪುನಃ ಅವತಾರ ತಾಳಿನೆ ಬೇಕಾರೆ ನೋಡಿಕಾತ ಹೇಳ್ದೆ. ಅದೇ ರೀತಿ ರಕ್ತ ಬಿದ್ದ ಕಡೆಲ್ಲಾ ಒಬ್ಬೊಬ್ಬ ಮಹಿಷಾಸುರಗ ಹುಟ್ಟುತ್ತಾ ಬಂದವೆ. ಇದನ್ನ ನೋಡಿ ದೇವಿಗೆ ಏನ್ ಮಾಡೋಕುತ ಗೊತ್ತಾಗದೆ, ಆ ದಿವ್ಯ ಜ್ಯೋತಿಯನ್ನ ಪ್ರಾರ್ಥಿಸಿ ಕಂಡ್, ಚಾಮುಂಡೇಶ್ವರಿ ಕಾಳಿ ಅವತಾರವನ್ನು ತಾಳಿ, ಆಕಾಶದಲ್ಲಿ ಹಾರಾಡಿಕಂಡಿದ್ದ ತಲೆಯನ್ನ ಹಿಡ್ಕಂಡ್ ಕುಣೆಯಕ್ಕೆ ಸುರುಮಾಡ್ದೆ. ಎಲ್ಲೆಲ್ಲಾ ಮಹಿಷಾಸುರ ಹುಟ್ಟಿಟು, ಅದನ್ನೆಲ್ಲಾ ಕೊಂದ್ ರಕ್ತದ ಹೊಳೆಯನ್ನೆ ಹರಿಸಿದೆ. ಆದ್ರೂ ಅದರ ದಾಹ ತೀರದೆ ರೌದ್ರಾವತಾರಂದ ಕುಣೆಯಕ್ಕೆ ಸುರು ಮಾಡ್ದೆ. ಇದರಿಂದ ದೇವಲೋಕಲಿ ಅಲ್ಲೋಲ ಕಲ್ಲೋಲ ಉಂಟಾದೆ. ಆಗ ದೇವಾನುದೇವತೆಗ, ಶಿವನ ಮೊರೆಹೋದವೆ. ಇದ್ಕೆ ನೀವೇ ದಾರಿ ತೋರಿಸೋಕುತ ಬೇಡಿಕನಾ ಶಿವ ತನ್ನ ಸ್ಥಾನದಿಂದ ಎದ್ದ್ ಕಾಳಿಯನ್ನ ಹುಡುಕಿಕೊಂಡ್ ಹೋದೆ. ಅಲ್ಲಿ ಶಿವ ನೋಡ್‌ಕನ, ಕಾಳಿದೇವಿ ರಕ್ತದ ಹೊಳೆನೆ ಹರಿಸಿ, ಅದರಲ್ಲಿ ಕುಣಿತ್ತಿದ್ದದೆ. ಅದ್ನ ಇನ್ನ್ ಯಾರಿಂದಲೂ ತಡಿಯಕ್ಕೆ ಆದುಲೇತ ಗ್ಯಾನ ಮಾಡಿಕಂಡ್, ಶಿವ ಅವಳ ಕಾಲಿಗೆ ಅಡ್ಡ ಆಗಿ ಮಲಿಗಿದೆ. ಮಹಾತಾಯಿ ಕಾಳಿ ಕುಣ್‌ಕಂಡ್ ಬಾಕನ, ಅವಳ ಒಂದು ಪಾದ ಶಿವನ ಎದೆಯ ಮೇಲೆ ಮೆಟ್ಟಿದೆ. ಆ ಕ್ಷಣ ಅವಳ ಕಾಳಿ ಅವತಾರ ಶಾಂತಿಯಾದೆ. ಅಷ್ಟರಲ್ಲಿ ಅವಳ ನಿಜರೂಪವಾದ ಚಾಮುಂಡೇಶ್ವರಿಯಾಗಿ ಪರಿವರ್ತನೆ ಗೊಂಡದೆ. ಇದನ್ನ ಕಂಡ ದೇವಾಧಿದೇವತೆಗ ಚಾಮುಂಡೇಶ್ವರಿಗೆ ವಂದಿಸಿ, ಮಹಿಷಾಸುರ ಮರ್ಧಿನಿಗೆ ಜಯವಾಗಲಿ ಎಂದ್ ಒಟ್ಟಿಗೆ ಜಯಘೋಷಂದ ಪರಿಪರಿಯಾಗಿ ಸ್ತುತಿಸುವೆ. ಹಿಂಗೆ ಮಹಿಷಾಸುರ ಮರ್ಧಿನಿ ಅವತಾರ ತಾಳಿದೆ. ಹಂಗಾಗಿ ಹೆಣ್ಣ್ ಅಬಲೆ ಅಲ್ಲ. ಅವುಳು ಸಬಲೆ ಅವಳ ಕೈಯಿಂದ ಆಗದ ಕೆಲ್ಸ ಯಾವ್‌ದ್ ಇಲ್ಲೆತ್ತೆಳಕ್ಕ್.

**ತೋರೇರ ನಾಣಯ್ಯ ಪದ್ಮಾವತಿ, ಮಡಿಕೇರಿ.**

---

## ಮುಮೊದಲಿಗೆ ಸೂರ್ಯ ಉದಯಿಸುವುದು ಎಲ್ಲಿ?

೧. ನಮ್ಮ ಭೂಗೋಳನ ಸರಿಯಾಗಿ ೨೪ ಭಾಗಗಳಾಗಿ ವಿಂಗಡಿಸಳೊ.

೨. ಅಂದರೆ ೧ ಗೆರೆಂದ ಇನ್ನೊಂದು ಗೆರೆಗೆ ೧೫ ಡಿಗ್ರಿ ಅಗಲ ಇರುವಂಗೆ ೨೪ ೧೫ ೩೬೦ ಡಿಗ್ರಿ ಭೂಮಿಂದ್ ಒಂದ್ ಸುತ್ತು ಆದೆ.

೩. ಈ ಒಂದೊಂದು ಭಾಗಗಳ ಸೂರ್ಯನ ಬೆಳಕ್ ಮೂಡಿಕೆ ಒಂದೊಂದು ಗಂಟೆ ಸಮಯ ಬೇಕಾದೆ

೪. ಅಂತರಾಷ್ಟ್ರೀಯ ಮಟ್ಟಲಿ ಇಂಗ್ಲೇಂಡ್‌ನ ಒಂದ್ ಪ್ರಾಂತ್ಯವಾದ ಗ್ರೀನ್‌ವಿಚ್ ಎಂಬ ಜಾಗಲಿ ೦ ಡಿಗ್ರಿ ಗೆರೆ ಬಂದದೆ ಹಂಗಾಗಿ ಈ ಭೂಗೋಳದ ಹಲವಾರು ಪ್ರಾಂತ್ಯಗಳ ಸಮಯನ ಲೆಕ್ಕ ಹಾಕಿಕೆ ಈ ಗ್ರೀನ್‌ವಿಚ್‌ನ ಸರಾಸರಿ ಸಮಯ ಬಹಳ ಸಹಕಾರಿ ಆಗುಟ್ಟು.

೫. ಗ್ರೀನ್‌ವಿಚ್‌ದ ೧೮೦ ಡಿಗ್ರಿ (ಅರ್ಧ ಭಾಗ) ಭೂಮಿಯ ರೇಖಾಂಶ ಫೆಸಿಫಿಕ್ ಮಹಾಸಾಗರದ ಮಧ್ಯಕ್ಕೆ ಬಂದದೆ ಈ ೧೮೦ ಡಿಗ್ರಿ ಬರುವಲ್ಲಿ ೩೩ ದ್ವೀಪ ಸಮೂಹಗಳಿರತಕ್ಕ "ಕಿ ಹ್‌ರಿಸ್ ಬಾಸ್"ತ್ತೇಳುವ ಸಣ್ಣ ರಾಷ್ಟ್ರ ಉಟ್ಟು. ಕೇವಲ 80 ಸಾವಿರ ಜನಸಂಖ್ಯೆ ಇರತಕ್ಕಂತ ಈ ದೇಶಲೇ ಮೊಟ್ಟ ಮೊದಲಿಗೆ ಸೂರ್ಯ ಹುಟ್ಟುದುತ ಲೆಕ್ಕಕೆ ಮಡಗಿಕೊಂಡಳೊ.

**ಸಂಗ್ರಹ : ಸಂಕರನ ಎಂ. ಬಸಪ್ಪ, ಮೈಸೂರು**

# ಮೇಜರ್ ನವೀನ್......!

ಸ್ಪೂರ್ತಿಗೆ ಆ ಮುಂಜಾನೆ, ಎಲ್ಲಾ ಮುಂಜಾನೆಯಂತೆ ಮಾಮೂಲಾಗಿರಲಿಲ್ಲ. ದಿನಾ ಏಳುವರೆಯಾದರೂ ಹಾಸಿಗೆ ಬಿಟ್ಟೇಳದ ಸ್ಪೂರ್ತಿ ಆ ದಿನ ಆರು ಗಂಟೆಗೆ ಎದ್ದು, ಸ್ನಾನ ಮಾಡಿ ಸಡಗರದಿಂದ ತಯಾರಾಗಿ ನವೀನ್‌ಗಾಗಿ ಎದುರು ನೋಡುತ್ತಿದ್ದಳು.

ಅವಳ ಸಡಗರ ಶಾರದಮ್ಮನಿಗೆ ಅರ್ಥವಾಗುತ್ತಿತ್ತು. ಒಂದು ವರ್ಷದಿಂದ ನವೀನ್‌ನನ್ನು ಕಾಣದೆ ಮಗಳು ಬಹಳ ಚಡಪಡಿಸುತ್ತಿದ್ದಾಳೆ ಎಂದು.

ಎಲ್ಲಕ್ಕಿಂತ ಮಿಗಿಲಾಗಿ ಒಂದು ತಿಂಗಳ ಹಿಂದೆ ಬರೆದ ಪತ್ರದಲ್ಲಿ ನಾನು ಕುಪ್ಪುವಾರ್‌ನಿಂದ ಈಗ ಯುದ್ದ ಭೂಮಿ ದ್ರಾಸ್ ಕಾರ್ಗಿಲ್‌ನ ಸರಹದ್ದಿನಲ್ಲಿದ್ದೇನೆ. ನಾನು ದೇಶಕ್ಕಾಗಿ ನಿಜವಾಗಿಯೂ ಸೇವೆ ಮಾಡುವ ಕಾಲ ಬಂದಿದೆ. ಸಾವಿಗಾಗಿ ನಾನು ಚಿಂತಿಸುವುದಿಲ್ಲ. ನಮ್ಮ ಸಾವು ಕೂಡ ಉತ್ತಮ ಉದ್ದೇಶದಿಂದ ಕೂಡಿದ್ದಾಗಿದೆ. ಭಗವದ್ಗೀತೆಯಲ್ಲಿ ಕೃಷ್ಣ ಅರ್ಜುನನಿಗೆ ಹೇಳಿಲ್ಲವೆ? "ಸತ್ತರೆ ವೀರಸ್ವರ್ಗ ಸೇರುತ್ತೀಯೆ, ಗೆದ್ದರೆ ಭೂ ಚಕ್ರಾಧಿಪತ್ಯವನ್ನು ಅನುಭವಿಸುತ್ತೀಯ" ಎಂದು ಆದುದದರಿಂದ ಏಳು ಅರ್ಜುನ ದೃಢ ನಿಶ್ಚಯದಿಂದ ಯುದ್ದ ಮಾಡು" ಎಂದು.

ಪ್ಲೀಸ್ ಸ್ಪೂರ್ತಿ ಹಾಗೆ ಈ ಹೋರಾಟ ಕೂಡ ನನ್ನ ಇಡೀ ಜೀವಮಾನದಲ್ಲೇ ಗೌರವಕ್ಕೆ ಅರ್ಹವಾದದ್ದು ಇದಕ್ಕಿಂತ ಕಡಿಮೆ ಮಟ್ಟದಲ್ಲಿ ನಾನು ಯೋಚಿಸಲಾರೆ. ನಾನು ಭೂಸೇನೆಯಲ್ಲಿರುವುದಕ್ಕೆ ನಿಜವಾಗಿಯೂ ನಾನು ಹೆಮ್ಮೆ ಪಡುತ್ತೇನೆ. ಪದೆ ಪದೇ ಕೇಳ ಬೇಡ ಸ್ಪೂರ್ತಿ. ಎಲ್ಲಿದ್ದೀರಾ? ಹೇಗಿದ್ದೀರಾ? ಎಂದು ನಿನ್ನ ಕಾಳಜಿ ನನಗೆ ಅರ್ಥವಾಗುತ್ತದೆ. ಆದರೆ ನಾನು ಜವಾಬ್ದಾರಿಯುತ ಮೇಜರ್. ಇನ್ನೊಬ್ಬರಿಗೆ ಆಜ್ಞೆ ಮಾಡುವವನು ಅದರಲ್ಲಿ ನಾನು ಹೇಡಿಯಾಗಬಾರದು. ಅದು ನಿನಗೆ ತಿಳಿದಿಲ್ಲವಾ? ನನ್ನ ಧೈರ್ಯದ ಬಗ್ಗೆ ನಿನಗೆ ನಂಬಿಕೆ ಇಲ್ಲವಾ? ಯುದ್ಧದಲ್ಲಿ ಗೆಲುವು ನಮದಾಗಿ ಬದುಕಿ ಉಳಿದರೆ ನಾನು ನಿನ್ನಲ್ಲಿಗೆ ಬರುತ್ತೇನೆ...... ಎಂದೆಲ್ಲಾ ಬರೆದಾಗಿನಿಂದ ಒಂದೇ ಸಮನೆ ಕಣ್ಣೀರು ಸುರಿಸುತ್ತಾ ಚಡಪಡಿಸುತ್ತಿದ್ದಳು ಸ್ಪೂರ್ತಿ.

ಚಿಕ್ಕಂದಿನಿಂದಲೂ ಒಟ್ಟಿಗೆ ಆಡಿ ಬೆಳೆದವರು ನವೀನ್, ಸ್ಪೂರ್ತಿ. ವಯಸ್ಸಿಗೆ ಬಂದಂತೆ ಆ ಪ್ರೀತಿ ಅನುರಾಗವಾಗಿ ಮಾರ್ಪಟ್ಟಿತ್ತು. ಸ್ಪೂರ್ತಿಗೆ ಈಗ ಇಪ್ಪತ್ತನಾಲ್ಕು ವರ್ಷ, ನವೀನ್‌ಗೆ ಮೂವತ್ತೆರಡು ವರ್ಷ, ಸಾಮಾನ್ಯ ಸೈನಿಕನಿಂದ ಶಿಸ್ತು, ಕರ್ತವ್ಯ ಪ್ರಜ್ಞೆಯಿಂದ, ಶ್ರಮದಿಂದ ಇಂದು ಮೇಜರ್ ಪದವಿಗೆ ಏರಿದ್ದ.

ಈ ಬಾರಿ ಸ್ಪೂರ್ತಿಯನ್ನು ಮದುವೆಯಾಗಿ ಅವನಿರುವಲ್ಲಿಗೆ ಕರೆದೊಯ್ಯುವವನಿದ್ದ. ಅವರ ಮಧ್ಯದಲ್ಲಿ ಇಂಡೋ ಪಾಕ್ ಗಡಿ ಪ್ರದೇಶದ ಗಲಾಟೆಯಿಂದಾಗಿ ಯುದ್ದದ ಬಿರುಸು ಬಂದಿತ್ತು. ಎರಡೂ ಕಡೆಯ ಸೈನಿಕರಿಗೂ.

ಈ ಎಲ್ಲದರ ಮಧ್ಯೆ ಮೊನ್ನೆ ಬಂದ ಪತ್ರದಲ್ಲಿ 'ಯುದ್ದದ ಬಿರುಸು ಕಡಿಮೆಯಾಗಿ ಎರಡೂ ದೇಶಗಳು ಶಾಂತವಾಗಿದೆ. ನಮ್ಮ ಭಾರತೀಯ ಸೈನಿಕರು ಪರಿಶ್ರಮದಿಂದ ಹೋರಾಡಿ ಭಾರತ ಮಾತೆಯ ಸೆರಗು ಉಳಿಸಿದ್ದಾರೆ. ಈ ವಿಜಯವೇ ನಮಗೆ ಸ್ಪೂರ್ತಿ ಚಿಲುಮೆಯಾಗಿದೆ. ಈ ಸಂತೋಷದಲ್ಲೇ ನಿನ್ನನ್ನು ಶಾಶ್ವತವಾಗಿ ನನ್ನವಳಾಗಿ ಮಾಡಿಕೊಳ್ಳುತ್ತೇನೆ ಎಂದೆಲ್ಲಾ ಬರೆದಿದ್ದಾ.

ಆ ಗುಂಗಿನಲ್ಲಿ ಇಂದು ಬರುವ ನವೀನ್‌ಗಾಗಿ ಇಷ್ಟೆಲ್ಲಾ ಸಡಗರದಿಂದ ಸ್ಪೂರ್ತಿ ಕಾಯುತ್ತಿರುವುದು ಒಂಭತ್ತು ಗಂಟೆಗೆಲ್ಲಾ ಬರಬಹುದು ಬೆಂಗಳೂರಿನಿಂದ ನೈಟ್ ಸರ್ವಿಸ್‌ಗೆ ಬಂದರೇ ಎಂದು. ಗಂಟೆ ಹತ್ತು, ಹನ್ನೊಂದು, ಒಂದು ಆದರೂ ನವೀನ್ ಬರದಿದ್ದಾಗ ಸ್ಪೂರ್ತಿಗೆ ಅವನ ಮೇಲೆ ಕೆಟ್ಟ ಕೋಪ. ಹೇಳಿದ ಸಮಯಕ್ಕೆ ಬಾರದೆ ಕಾಯಿಸುತ್ತಾನಲ್ಲಾ ಎಂದು.

ಇನ್ನೇನು ಈಗ ಬರುತ್ತಾನೆ. ಈಗ ಬರುತ್ತಾನೆ ಎಂದು ಕಾಯುತ್ತಿದ್ದಾಗ ಬಂದದ್ದು ನವೀನ್ ಮನೆ ಫೋನ್ ಮತ್ತು ಅದರಲ್ಲಿನ ಅಘಾತಕರ ಸುದ್ದಿ ! "ಮೇಜರ್ ನವೀನ್ ಆಫೀಸ್‌ನಲ್ಲಿ ಪತ್ರಕರ್ತರೊಡನೆ ಮಾತನಾಡುತ್ತಿದ್ದಾಗ ಆಫ್‌ಘಾನ್ ಭಯೋತ್ಪಾದಕರು ಒಳನುಗ್ಗಿ ಮೇಜರ್ ನವೀನ್‌ನನ್ನು ಕೊಲ್ಲಲು ನೋಡಿದಾಗ ನವೀನ್ ಕೂಡ ಅವರನ್ನು ತಡೆಯಲು ನೋಡಿದ್ದಾನೆ. ಆಗ ಆಫ್‌ಘಾನ್ ಭಯೋತ್ಪಾದಕರಿಗೂ ಮತ್ತು ನವೀನ್ ನಡುವೆ ಗುಂಡಿನ ಚಕಮುಕಿಯಾಗಿ ಆಫ್‌ಘಾನ್ ಭಯೋತ್ಪಾದಕರು ಸತ್ತಿದ್ದಾರೆ. ಮತ್ತು ನವೀನ್‌ಗೆ ತೀವ್ರತರನಾದ ಪೆಟ್ಟಾಗಿ ಆಸ್ಪತ್ರೆಗೆ ಸಾಗಿಸುವಾಗ ಮಧ್ಯದಲ್ಲೇ ಪ್ರಾಣ ಬಿಟ್ಟಿದ್ದಾನೆ. ಮತ್ತು ನಾಳೆ ಮಧ್ಯಾಹ್ನದ ಒಳಗೆ ಬಾಡಿಯನ್ನು ಮನೆಗೆ ಕಳಿಸುತ್ತಾರೆ ಎಂದು ಸುದ್ದಿ ಕೇಳಿ ಶಾರದಮ್ಮ ಗರಬಡಿದವರಂತೆ ಹಾಗೇ ಫೋನ್ ಹಿಡಿದು ನಿಂತಿದ್ದರು. ಸ್ಪೂರ್ತಿಗೆ ವಿಷಯ ಹೇಳಲೋ ಬೇಡವೋ ಎಂಬಂತೆ.

ಆದರೆ ಸ್ಪೂರ್ತಿಗೆ ವಿಷಯದ ಅರಿವು ಆಗಲೇ ಆಗಿತ್ತು. "ಅಮ್ಮ..... ನವೀನ್" ಎಂದಷ್ಟೇ ಹೇಳಿ ಕುಸಿದಳು.

**ಕಾನೆಹಿತ್ಲು ನಳಿನಿ ನಂಜಪ್ಪ, ಕುಶಾಲನಗರ**

---

## ಹುತ್ತರಿ ಹಬ್ಬ

ಹಬ್ಬ ಬಾತ್ ಹಬ್ಬ ಹುತ್ತರಿ ಹಬ್ಬ
ಜೇಬಿಗೆ ಕತ್ತ್‌ರಿ ಬೀಳುವ ಹಬ್ಬ
ಸಿಡಿಮದ್ದ್ ಪಿಟಾಕಿ ಸಿಡ್‌ಸುವ ಹಬ್ಬ
ತರತರ ತಿಂಡಿ ಮಾಡುವ ಹಬ್ಬ
ನೆರೆಕಟ್ಟಿ ಕದ್‌ರ್ ಕೊಯ್ಯುವ ಹಬ್ಬ
ಅಕ್ಕಿ ಪಾಯಸ ಹಪ್ಪಳ ತಿನ್ನುವ ಹಬ್ಬ
ಮಂದ್‌ಲಿ ಕೋಲಾಟ ಆಡುವ ಹಬ್ಬ
ಬಾಣೇಲಿ ಊರೊರ್ಮೆ ಮಾಡುವ ಹಬ್ಬ
ಗೌಡ ಜನಾಂಗದ ಗೌಜಿನ ಹಬ್ಬ
ಇದೇ ಕೊಡ್‌ಗ್‌ನ "ಹುತ್ತರಿ ಹಬ್ಬ"

**ಎಡಿಕೇರಿ ಜಿ. ಜಗನ್ನಾಥ್, ಬಲ್ಲಮಾವಟಿ**

**ಕೊಡಗು ಸಂಗಾತಿ, ಪಾಕ್ಷಿಕ ಅನ್ನು ಕೊಂಡು ಓದಿರಿ.**

# ಸೋಮವಾರ ಪೇಟೇಲಿ ಗೌಡ ಜನಾಂಗದ ಔತಣ ಕೂಟ, ಹಂಗೆ ಸನ್ಮಾನ ಸಮಾರಂಭ

ತಾರೀಕ್ 5-12-99ರಂದ್ ಸೋಮವಾರಪೇಟೆಲಿ ಕೊಡಗ್ ಮತ್ತೆ ದಕ್ಷಿಣ ಕನ್ನಡ ಅಭಿವೃದ್ಧಿ ಸಂಘದವು ಒಂದು ಭರ್ಜರಿ ಊಟೋಪಚಾರನ ಏರ್ಪಾಡ್ ಮಾಡಿದ್ದೊ. ಆ ಔತಣ ಕೂಟ ನಮ್ಮ ಜನಾಂಗದ ಸಂಘಟನೆ ಮತ್ತೆ ಸಂಸ್ಕೃತಿನ ಎತ್ತಿ ಹಿಡಿಯುವ ರೀತಿಲಿ ಕಾಂಬತ್ತಿತ್. ನಮ್ಮ ಜನಾಂಗದವು ಭಾರಿ ಸಂಖೆಲಿ ಸೇರಿ ನಾವುಸನ ಜನಾಂಗದ ಸಂಘಟನೆಲಿ ಯಾರಿಗೆ ಕಮ್ಮಿ ತ್ತೇಳಿ ತೋರ್ಸಿಕೊಟ್ಟೊ. ಇಂದ್ ಕೊಡಗ್‌ನ ಮೂಲೆ ಮೂಲೆಲಿ ಜನಾಂಗದ ಸಂಘಟನೆ ಆಗುಟ್ಟು. ಆ ಸಂಘಟನೆಗಳ ಸಾಲಿಗೆ ಇಂದ್ ಸೋಮವಾರ ಪೇಟೆ ಅಲ್ಲದೆ ಸುತ್ತಮುತ್ತಾ ಇರುವ ನಮ್ಮವು ಸೇರಿ ನಡ್ಸಿದ ಔತಣ ಕೂಟದ ಸಭೆ ಸಹ ಸೇರಿ ಜನಾಂಗದ ಸಂಘಟನೆ ಸಾಲಿಗೆ ಸೇರ್ಪಡೆ ಆತ್. ಈಗಾಗಲೇ ಇಂತ ಸಂಘಟನೆ ಕೊಡಗ್‌ಲಿ ಗೌಡ ಸಾಂಸ್ಕೃತಿಕ ಅಕಾಡೆಮಿ ಮತ್ತೆ ಕೆಲವು ಯುವಕ ಸಂಘಗ, ಅಲ್ಲದೆ ಮಹಿಳಾ ಒಕ್ಕೂಟ, ಮೈಸೂರ್‌ಲಿ ಕೊಡಗು ಸಂಗಾತಿ ಪತ್ರಿಕೆಯ ಸಂಪಾದಕರ್ ಆದ ಪಟ್ಟಡ ಶೀಲಾಮಣಿ ಪ್ರಭಾಕರ್‌ನವು, ಬೆಂಗ್‌ಳೂರ್‌ಲಿ ಅಮ್ಮಾಜೀರ ಪೊನ್ನಪ್ಪನವು ನಮ್ಮ ಜನಾಂಗದ ಸಂಘಟನೆಲಿ ಅಲ್ಲದೆ ನಮ್ಮ ಸಂಸ್ಕೃತಿ ಸಂಪ್ರದಾಯನ ಎತ್ತಿ ಹಿಡಿವಲ್ಲಿ ಯಶಸ್ಸು ಕಂಡೊಳೊ. ಇವರ ಸಾಲಿಗೆ ನಮ್ಮ ಸೋಮವಾರ ಪೇಟೆ ಜನಾಂಗದವು ಸೇರಿಯಾಳೊತಾ ಹೇಳಿರೆ ತಪ್ಪಾಕಿಲೆ

ಈ ಊಟೋಪಚಾರದ ಕಾರ್ಯಕ್ರಮಲಿ ಜನಾಂಗದವು ಅಲ್ಲಿ ಸೇರ್‌ದವುಕೆ ಆಟೋಟಗಳ ಕಾರ್ಯಕ್ರಮ ಏರ್ಪಾಡ್ ಮಾಡಿದ್ದೊ. ಅಣ್ಣಂದರ್, ಅಕ್ಕಂದರ್ ಅಲ್ಲದೆ ಮಕ್ಕಳೂಸ ಭಾಗವಹಿಸಿ ಈ ಕಾರ್ಯಕ್ರಮನ ಲಾಯ್ಕಾಗಿ ನಡೆಸಿಕೊಟ್ಟೊ. ಈ ಕಾರ್ಯಕ್ರಮ ಮುಗ್ದ ಮೇಲೆ ಸಭಾ ಕಲಾಪ ನಡೆಸಿದೊ. ಈ ಸಭಾ ಕಾರ್ಯಕ್ರಮಲಿ ಮುಖ್ಯವಾಗಿ ಸೋಮವಾರ ಪೇಟೆಲಿ ಹುಟ್ಟಿ ಬೆಳ್ದ್ ಈಗ ಬೆಂಗಳೂರ್‌ಲಿ ಸರಕಾರಿ ಕೆಲ್ಸ ಮಾಡಿಕಂಡಿರುವ ಅಸಿಸ್ಟೆಂಟ್ ಕಮರ್‌ಸಿಯಲ್ ಟ್ಯಾಕ್ಸ್ ಆಫೀಸರಾದ ನಂಗಾರ್ ನಾಣಯ್ಯನವು ಮುಖ್ಯ ನೆಂಟ್ರಗಳಾಗಿ ಬಂದಿದ್ದೊ. ಇವರೊಟ್ಟಿಗೆ ಬೆಂಗಳೂರ್‌ಲಿ ಕಾವೇರಿ ನಾಡ್‌ನ ಹುಟ್ಟಿ, ಹಾಕಿ ಬೆಳ್ಸ್‌ತ್ತಿರುವ ಶ್ರೀ ಅಮ್ಮಾಜೀರ ಪೊನ್ನಪ್ಪನವು, ಕೊಡ್ಗ್‌ನವೇ ಆದ ಕಾನಡ್ಕ ಅಪ್ಪಾಜಿಯವು ದ. ಕ. ಮತ್ತು ಕೊಡಗು ಅಭಿವೃದ್ಧಿ ಸಂಘ ಸೋಮವಾರ ಪೇಟೆಯ ಅಧ್ಯಕ್ಷರಾದ ಕುದುಕುಳಿ ರಾಮಪ್ಪನವು (ಉದಯ ಪ್ರೆಸ್) ವೇದಿಕೆಲಿ ಕುದ್ದಿದ್ದೊ.

ಕಡೇಗೆ ನಂಗಾರ್ ನಾಣಯ್ಯನವು ಮಾತಾಡಿ, ನನ್ನ ಹುಟ್ಟೂರಿಗೆ ಬಾಕೆ ಮಾಡಿ ಸನ್ಮಾನ ಮಾಡ್ದಕ್ಕೆ ವಂದನೆ, ಅಲ್ಲದೆ ಜನಾಂಗದವುಕ್ಕೆ ಕೆಲವು ಹಿತವಚನ ಹೇಳ್ದೊ. ಅಮ್ಮಾಜೀರ ಪೊನ್ನಪ್ಪನವು ಮಾತಾಡಿ ಸಂಸ್ಕೃತಿ ಬಗ್ಗೆ ಅವು ಮಾಡ್ದ ಹಾಡ್‌ಗ, ಕೊಡಗು ಸಂಗಾತಿ ಜನಾಂಗಕ್ಕೆ ದುಡಿಯುತ್ತಿರುವ ವಿಷಯನ ಜನಗಳಿಗೆ ವಿವರವಾಗಿ ತಿಳ್‌ಸಿ, ಈ ರೀತಿ ನಡಿತ್ತಿದ್ದರೆ ನಮ್ಮ ಸಂಸ್ಕೃತಿ ಖಂಡಿತವಾಗಿ ಉಳ್ದದೆ ತೇಳ್ದೊ. ಅಮ್ಮಾಜೀರ ಪೊನ್ನಪ್ಪನವು ಬಿಳಿ ಕುಪ್ಪಸದಟ್ಟಿ, ಪೇಟಾ ಹಾಕಿ ರಾರಾಜಿಸುತ್ತಿದ್ದೊ. ಕಾನಡ್ಕ ಅಪ್ಪಾಜಿಯವು ಮಾತಾಡಿ ನಮ್ಮ ಸಂಸ್ಕೃತಿ ಸಮಾಜಲಿ ಬೆಳಿಯಕು, ಅಮ್ಮಾಜೀರ ಪೊನ್ನಪ್ಪನವರಂಗೆ ಉಡಿಗೆ-ತೊಡಿಗೆ ಉಟ್ಟ್, ಅರೆಭಾಷೆ ಹಾಡ್‌ಗಳ ಮಾಡಿ, ಪ್ರಯತ್ನ ಪಟ್ಟಂಗೆ ಎಲ್ಲಾ ಪ್ರಯತ್ನಪಡಕು. ಸಮಾಜಗಳಲ್ಲಿ ಹಾಲ್ ಬರೋ ಮರಗಳನ್ನ ನೆಟ್ಟ್ ಜನ ಸಹಕಾರ ಕೊಡಕೂತ್ತೇಳ್ದೊ. ಕೊಡಗು ಸಂಗಾತಿ ಪತ್ರಿಕೆನ ತಕಂಡ್ ಪ್ರತಿಯೊಬ್ಬ ನಮ್ಮವು ಓದಕೂತ ನೆರೆದ ಜನಾಂಗಕ್ಕೆ ಕರೆ ಕೊಟ್ಟೊ. ಇದರೊಟ್ಟಿಗೆ ಅಂದಿನ ಊಟೋಪಚಾರದ ಸಭೆ ಲಾಯ್ಕಾಗಿ ಕಳ್‌ತ್.

ಸಂಗಾತಿ ವರದಿ.

# ಕುಂಬಳದಾಳ್‌ಲಿ ನಡೆದ ಜಿಲ್ಲಾ ಮಟ್ಟದ ಪಂದ್ಯಾಟಗ

ದಿನಾಂಕ 28-11-99ರ ಆದಿತ್ಯವಾರ ಮಡಿಕೇರಿ ತಾಲೂಕ್ ಕುಂಬಳದಾಳ್‌ಲಿ ಜಿಲ್ಲಾಮಟ್ಟದ 2ನೇ ವರ್ಷದ ವಾಲಿಬಾಲ್ ಮತ್ತೆ ಥ್ರೋಬಾಲ್ ಆಟಗ ನಡ್ತ್. ಕುಂಬಳ್‌ದಾಳ್‌ನ ನವಚೇತನ್ ಯುವಕ ಸಂಘ, ಕನ್ನಿಕಾ ಮಹಿಳಾ ಸಮಾಜ, ನೆಹರು ಯುವ ಕೇಂದ್ರ ಮಡಿಕೇರಿ ತಾಲೂಕ್ ಯುವ ಒಕ್ಕೂಟ ಮಡ್ಕೇರಿ, ಯುವ ಜನ ಸೇವಾ ಮತ್ತೆ ಕ್ರೀಡಾ ಇಲಾಖೆ ಇವರ ಸಂಯುಕ್ತ ಆಶ್ರಯಲಿ ನಡ್ತ್

ಅಂದ್‌ನ ಸಮಾರಂಭದ ಅಧ್ಯಕ್ಷರಾಗಿ ನವಚೇತನ ಯುವಕ ಸಂಘದ ಅಧ್ಯಕ್ಷರ್ ಮತ್ತೆ ಹೊದ್ದೂರು ಗ್ರಾಮ ಪಂಚಾಯಿತಿ ಸದಸ್ಯರ್ ಆದ ಕರ್ಣೇಯ್ಯನ ಸಿದ್ಧಾರ್ಥನವು ವಹಿಸಿದೊ. ಮುಖ್ಯ ಅತಿಥಿ ಆಗಿ ಕೊಡಗ್ ಜಿಲ್ಲಾ ಪಂಚಾಯಿತಿ ಅಧ್ಯಕ್ಷರ್ ಆದ ಶ್ರೀ ಊರ್‌ಬೈಲು ಜಯಪ್ರಕಾಶ್‌ನವು ಬಂದಿದ್ದೊ ಅತಿಥಿಯಾಗಿ ಮಂದ್ರಿ ಬೆಳ್ಳಪ್ಪ ಲೆಕ್ಕಾಧಿಕಾರಿ ನೆಹರು ಯುವ ಕೇಂದ್ರ ಮಡಿಕೇರಿ ಮತ್ತೆ ಗಿರೀಶ್ ತಾಳತ್‌ಮನೆ, ಅಧ್ಯಕ್ಷರ್ ತಾಲೂಕು ಯುವ ಒಕ್ಕೂಟ ಮಡಿಕೇರಿ ಇವು ಆಗಮಿಸಿದ್ದೊ. ವಾಲಿಬಾಲ್ ಪಂದ್ಯಾಟದ ಉದ್ಘಾಟನೆನ ಹೊದ್ದೂರ್ ಗ್ರಾಮ ಪಂಚಾಯಿತಿ ಅಧ್ಯಕ್ಷರ್ ಆದ ಚೌರಿರ ಅಚ್ಚಯ್ಯನವು ಮಾಡ್ದೊ. ಥ್ರೋಬಾಲ್ ಪಂದ್ಯಾಟದ ಉದ್ಘಾಟನೆನ ಶ್ರೀ ಕೊದಂಡ ಪುರುಶೋತ್ತಮನವು, ಅಧ್ಯಕ್ಷರ್ V.S.S.N ಹೊದ್ದೂರ್ ಇವು ಮಾಡ್ದೊ.

ಮಧ್ಯಾಹ್ನ 1ಗಂಟೆಗೆ ಊಟದ ವ್ಯವಸ್ಥೆ ಇತ್ತು. ಇದಕ್ಕೆ ಸಹಕರಿಸಿದವು ಯುವಕ ಸಂಘದ ಪದಾದಿಕಾರಿಗ. ಯುವಕ ಸಂಘದ ಸದಸ್ಯರ್ ಆದ ಕುಂಜಿಲನ ರಾಜ, ಮಹೇಶ, ಮೋಗೆರನ ವಸಂತ ಮತ್ತೆ ಇನ್ನಿತರರ ಸಹಕಾರ ಸ್ಮರಣೀಯ. ಅಂದ್‌ನ ಕ್ರೀಡಾಕೂಟಲಿ 19 ವಾಲಿಬಾಲ್ ತಂಡ, 6ಥ್ರೋಬಾಲ್ ತಂಡಗ ಭಾಗವಹಿಸಿದ್ದೊ. ವಾಲಿಬಾಲ್ ಪಂದ್ಯಾಟಲಿ ವಿನ್ನರ್ ಗೋಲ್ಡನ್ ಫ್ರೇಂಡ್ಸ್ ಕೂಡಿಗೆ ಆದರೆ, ಪೋಲಿಸ್ ತಂಡ ರನ್ನರ್ಸ್ ಅಫ್ ಆತ್. ಮಹಿಳೆಯರ ಥ್ರೋಬಾಲ್‌ಲಿ ವಿನ್ನರ್ಸ್ ಆಗಿ ಒಣಿಮನೆ ತಾರ ಪ್ರೆಂಡ್ಸ್, ರಂಗ ಸಮುದ್ರ ಪಡ್ದೊ. ರನ್ನರ್ಸ್ ಆಗಿ ಕನ್ನಿಕಾ ಮಹಿಳಾ ಸಮಾಜ ಕುಂಬಳದಾಳ್ ಪಡ್ತ್.

ವಾಲಿಬಾಲ್ ತಂಡದ 1ನೇ ಬಹುಮಾನಕೆ ದಾನಿಗಳಾದ ಕುಜಿಲನ ಕೆಂಚಪ್ಪನವು ನೀಡ್ದೊ. 2ನೇ ಬಹುಮಾನ ನೆರಮಂಡ ಸುಬ್ರಮಣಿ ಕೊಟ್ಟಿದ್ದೊ. ಮಹಿಳೆಯರ ಥ್ರೋಬಾಲ್‌ಲಿಗೆ ಒಂದನೇ ಬಹುಮಾನ ಕರ್ಣೇಯ್ಯನ ಜೋಯಪ್ಪನವು ನೀಡಿದ್ದೊ. ಮತ್ತೆ 2ನೇ ಬಹುಮಾನ ದಂಬೆಕೋಡಿ ಭೀಮಯ್ಯ ನಿವೃತತಿ ಅಧ್ಯಾಪಕರಂ ಕೊಟ್ಟೊ, ಆಟಲಿ ಗೆದ್ದವುಕೆ ದಾನಿಗಳ ಕೈಯಾರೆ ಬಹುಮಾನ ಕೊಡ್ಸಿದೊ. ವಾಲಿಬಾಲ್‌ಲಿ ಪ್ರಥಮ ಬಹುಮಾನದ ಮೊತ್ತ 3,000/-ರೂ ಮತ್ತೆ ಟ್ರೋಪಿ ಆಗಿತ್, 2ನೇ ಬಹುಮಾನದ ಮೊತ್ತ 2,000/-ರೂ ಮತ್ತೆ ಟ್ರೋಪಿ ಆಗಿತ್. ಹಂಗೆ ಥ್ರೋಬಾಲ್‌ಲಿ 1ನೇ ಬಹುಮಾನ 2000/-ರೂ ಮತ್ತೆ ಟ್ರೋಪಿ ಹಂಗೇನೆ 2ನೇ ಬಹುಮಾನ 1,000/-ರೂ ಮತ್ತೆ ಟ್ರೋಪಿ ಇತ್

ನಾಡ್‌ನ ಮಧ್ಯಲಿ ಹಸ್‌ರ್ ಕಾಡ್‌ನ ಸೆರೆಲಿ ಇರುವ ಪೊರ್ಲಾದ ಊರು ಕುಂಬಳದಾಳ್. ಚಪ್ಪರ ಹಾಸಿದಂಗೆ ಇರುವ ಕಾಫಿ ತೋಟಗ ಬಳ್ಳಿ ಸೆರೆಂಡ ಆಣೆಗಿ ನೊಡುವ ಒಳ್ಳೆಮನ್ಸ್ ಕೈಬೀಸಿ ಕರೆವ ಹುಳಿಮರಗ, ಸೂರ್ಯ ಚಂದ್ರನ ತಲೆ ಎತ್ತಿ ನೋಡುವ ಅಡಿಕೆ ಮರಗ, ಬಂಗಾರದಂತ ಭತ್ತದ ಬೆಳೆ, ತುಂಬಾ ತರದ ಹೂ, ಹಣ್ಣ್‌ಗ, ಮರಗಿಡಗ, ಬಳ್ಳಿಗ, ಸಾವಿರಾರ್ ಸ್ವರಲಿ ರಾಗ ಎಳೆವ ಹಕ್ಕಿಗ, ಪೂಜೆ ಮಾಡಿಕೆ ಇರ್ದು ಒಂದು ದೇವರ ದೇವಸ್ಥಾನ ಹಿಂಗೆ ಇರ್ದು ಸಣ ಊರಾಗಿ, ಉದಾರತನದ ದೊಡ್ಡತನನ ತೋರ್ಸಿ ಕೊಟ್ಟೊವು ಈ ನಮ್ಮ ಕುಂಬಳ ದಾಳ್ ಗ್ರಾಮದವು. ಇನ್ನ್ ಮುಂದಕ್ಕೆಸ ಹಿಂಗೇನೇ ನಡೆಯಲಿತ್ತೇಳಿ ಗ್ಯಾನ ಮಾಡ್ನೆ

ವರದಿ : ಕುಂಜಿಲನ ರಾಜ, ಕುಂಬಳದಾಳ್

# ವಾಂಟೆಡ್ ಮಿಸ್ಟರ್ ರಾಜು[ನಮ್ಮ ರಾಜು ಮಂಜನ ಕಥೆ]

ಮುನ್ನುಡಿ : ಈ ಸಮಾಜಲಿ ಹಲವಾರ್ ತರದ ನಯವಂಚರ ಜನಂಗ ನಮ್ಮ ತಿಳುವಳಿಕೆಗೆ ಬಾರದಂಗೆ ನಾನಾ ತರಲಿ ಶೋಷಣೆ ಮತ್ತೆ ಅನ್ಯಾಯನ ಮಾಡುತ್ತಾ ಒಳೊ. ಅವರ ವಿರುದ್ಧ ಯಾವ ರೀತಿಲಿ ತಿರುಗಿ ನಿಂತ್ ಹೋರಾಡಕುತ್ತೇಳುವ ಜ್ಞಾನನ ತೋರ್ಸಿಕೊಡುವ ಚಿತ್ರಣವೇ ಈ ವಾಂಟೆಡ್ ಮಿಸ್ಟರ್ ರಾಜು ನ ಕಥಾವಸ್ತು. ಹಿಂಗೆ ಕೆಲವು ಬಗೆಯ ದುಷ್ಟರ, ವಂಚಕರ ವಿರುದ್ಧ ಸವಾಲ್ ಹಾಕಿಕೋಸ್ಕರ ಮತ್ತೆ ಹಲವಾರು ಸಂದರ್ಭಗಳಲ್ಲಿ ಅಸಹಾಯಕ ಜನರಿಗೆ ಸಹಾಯ ಮಾಡಬೇಕಾದ ಪರಿಸ್ಥಿತಿ ಬರುತಿದ್ದರಿಂದ ಇವರ ಕಥಾನಾಯಕ ಆಗಿಂದಾಗ್ಗೆ ಸನ್ನಿವೇಶಕ್ಕೆ ತಕ್ಕಂಗೆ ತನ್ನ ವೇಷ ಭೂಷಣನ ಬದಲಾಯಿಸಿ ಕಂಡೆ ಹೋಕಾದೆ. ಆದರೂ ಈ ಕಥೆಯ ಗೂಡತನನ ಮತ್ತೆ ಗಟ್ಟಿತನನ ಕಾಯ್ದಿ ಕಂಡೇ ಹೋಗುಟ್ಟು. ತಾನು ಗ್ಯಾನ ಮಾಡ್ದ ಗುರಿನ ತಲಪುದರಲ್ಲಿ ತನ್ನಲ್ಲಿರತಕ್ಕ ಬಹುಮುಖಿ ಪ್ರತಿಭೆನ ಪ್ರದರ್ಶಿಸಿಕಂಬೋಕೆ ಒಳ್ಳೊಳ್ಳೆ ಅವಕಾಸಂಗ ಸಿಕ್ಕಿದ್ದದೆ. ಹಂಗಾಗಿ ಈ ಕಥಲಿ ಸಾಹಿತ್ಯ ಮತ್ತೆ ಶೃಂಗಾರಗಳಿಗೆ ಅಥವಾ ಅನಾವಶ್ಯಕ ಕ್ಲೈಮ್ಯಾಕ್ಸ್ ದೃಶ್ಯಗಳಿಗೆ ಆದ್ಯತೆ ಕೊಡದೆ, ಎದುರುಗೆ ಬರತಕ್ಕಂತಹ ಸವಾಲುಗಳನ್ನು ಧೈರ್ಯಶಾಲಿ, ತಂತ್ರಕ್ಕೆ ಪ್ರತಿತಂತ್ರವಾಗಿ, ಸ್ಪರ್ಧಾತ್ಮಕವಾಗಿ, ಬುದ್ಧಿವಂತಿಕೆಂದ ಎದುರಿಸಿ ಜಯ ಗಳಿಸಿ ಕೆಟ್ಟದಕೆ ಪಾಠ ಕಲಿಸುವಂತಹ ಆಕ್ಷನ್ ಕ್ರಿಯೆಗಳ್ಗೆ ಮಹತ್ವನ ಕೊಟ್ಟುಕಂಡ್ ಹೋಗೊಳೊ. ಈ ಕಥೆ ಉದ್ದಕ್ಕೂ ಒನ್ ಮ್ಯಾನ್ ಹೀರೋ ಆಗಿ ನಡಿಯುತ್ತಾ ಇದ್ದರೂ ಎಲ್ಲೂ ಉತ್ಪ್ರೇಕ್ಷೆಗಳಿಂದ ಹೇಳದೆ ನೈಜ ರೂಪಲೇ ಈ ಕಥೆನ ಸೃಷ್ಟಿಸೊಳೊ

ಈ ನಮ್ಮ ಹೈದನ ಈ ಕಥೆಲಿ ಬರತಕ್ಕಂತ ಕಾರ್ಯದಕ್ಷತೆನ ನಮ್ಮ ಹಿಂದಿರುವ ಯುವಕ ಜನ ಅವರ ಜೀವನ ಕ್ರಮಲಿ ಅಲ್ಪಮಟ್ಟಿಗಾದ್ರೂ ಅಳವಡಿಸಿಕೊಂಬೊಕುತ್ತೇಳುವ ಉದ್ದೇಶದಿಂದ ಪ್ರಿಯ ಓದುಗರ ಮುಂದೆ ತರುತಾ ಒಳೊ. ಓದ್‌ಗರ್‌ಗ ಪ್ರೀತಿ ಹಾಗೂ ಅಭಿಮಾನದಿಂದ ಸ್ವೀಕರಿಸಿ ಪ್ರೋತ್ಸಾಹಿಸಕೂ.

**– ಸಂಪಾದಕಿ**

ಬೆಳಿಗ್ಗೆ 8ಗಂಟೆ ಆಗಿರ್ದು. ಸೂರ್ಯನ ಕಡ್ಡಿಗಳಂತ ಕಿರಣಂಗ ಚಿಗ್‌ರ್ ಹುಲ್ಲ್‌ನ ಕೊನೆಗಳಲ್ಲಿ ನಿಂತಿದ್ದ್ ಇಬ್ಬನಿ ಹನಿ ತೊಟ್ಟ್‌ಗ ತರ ತರಾ ಬಣ್ಣಗಳಿಂದ ಮಿಂಚಿಕಂಡ್ ಒಳ್ಳೆ ಬಲ್ಬ್‌ಗಳಂಗೆ ಹೊಳಕಂಡ್ ನೆಲಕ್ಕೆ ಒಂದೊಂದೇ ಹನಿಗ ಜಾರುತಿದ್ದೊ. ಒಳ್ಳೆ ಮೆತ್ತನೆ ಬೆಚ್ಚಂಗೆನ ಬಿಸ್‌ಲ್ ತನ್ನ ಕಾವುನ ಏರಿಸಿಕಂಡ್ ಸುತ್ತ ಒಳ್ಳೆ ಹಸ್‌ರ್ ಕುಂದ್ ಬೆಟ್ಟಗಳ ನಾಡಾದ ಪ್ರಕೃತಿಯ ಪೊರ್ಲ್‌ನ ಇನ್ನೂ ಜೀವಂತವಾಗಿ ಉಳ್ಸಿಕಂಡ್ ಬಂದ ಮಡಿಕೇರಿ ಕಾವೇರಿ ಕಾಲೇಜ್‌ನ ಸ್ಪೋರ್ಟ್ಸ್ ಗ್ರೌಂಡ್‌ಲಿ ಸ್ಫೂರ್ತಿಗಳ ಚಿಲುಮೆಗಳ ಮೂರ್ತಿಗಳ ಹಂಗೆ ಒಳ್ಳೆ ಲವಲವಿಕೆಲಿ ತುಂಬಾ ಉತ್ಸಾಹ ತುಂಬಿ ಕಂಡ್ ಗುಡ್ಡೆ ಗುಡ್ಡೆ ಆಗಿ ಬಣ್ಣ ಬಣ್ಣದ ಯೂನಿಫಾರಂ ಬಟ್ಟೆಗಳನ್ನ ಹಾಕಂಡ್ ಒಳ್ಳೆ ಸಿಸ್ತ್‌ಲಿ ಆಟದ ಅಂಗಳದ ಮಧ್ಯಭಾಗಕ್ಕೆ ಈ ಹೈದಂಗಳ ಗೂಡೆಗಳ ಗುಂಪ್‌ಗೆ ನಗೆ ಆಡಿಕಂಡ್ ಕಿರ್‌ಚಾಡಿಕಂಡ್ ಬಂದ್‌ಸೇರ್ದೊ.

ಬಣ್ಣ ಬಣ್ಣದ ಚಿತ್ರಗಳ ಬಿಡಿಸಿದ್ದ ಬಟ್ಟೆಗಳ ಹೊದ್ದ್ ಎತ್ತರಕ್ಕೆ ಎದ್ ನಿಂತ ಚಪ್ಪರದ ಒಳೆಗೆ ಈ ಕಾಲೇಜಿನ ಕ್ರೀಡಾವ್ಯವಸ್ಥಾಪಗ ಆಗಿದ್ದ ಮಿಸ್ಟರ್ ಗಣಪತಿ ಎಂಬವು ಬಂದ್, ಮೊದಲ್ ಮೈಕಲಿ ಕಿರುಚುತಿದ್ದ "ಚೀಜ್ ಬಡೀ ಹೈ ಮಸ್ತ್ ಮಸ್ತ್" ಹಿಂದಿ ಹಾಡ್‌ನ ಸದ್ದ್‌ನ ಅಡಿಗಿಸಿದೊ ಮತ್ತೆ ಮೈಕ್‌ನ ದುಂಡಿಗೆ ಉಗ್‌ರ್‌ಂದ ಎರಡ್ ಸರ್ತಿ ಮಿಡ್ದ್ ಮತ್ತೆ ಎರಡ್ ಸರ್ತಿ ಮೆತ್ತಂಗೆ ಕೆಮ್ಮಿ ತಮ್ಮ ಕಳ್ಳ್ ಕುಡ್ದ ದೊಂಡನ ಸರಿ ಮಾಡಿಕೊಂಡೊ.

ನನ್ನ ಆತ್ಮೀಯ ಸ್ನೇಹಿತರೆ ನಾವ್ ಇಂದ್ ನಮ್ಮ ಸೌತ್ ಕರ್ನಾಟಕ ವಲಯದ ಕ್ರಿಡೋತ್ಸೋಹಕ್ಕೆ ನಮ್ಮ ಸುತ್ತಮುತ್ತ ಇರುವ ಸುಮಾರು ಎಂಟು ಡಿಸ್ಟ್ರಿಕ್ಟ್‌ಗಳಂದ ಕ್ರೀಡಾಪಟುಗಳನ್ನ ಬಂಧುಬಳಗನ ಕರ್ದ್ ತಂದೊಳೊ. ಹಂಗೇ ಈ ದಸರ ಹಬ್ಬದ ಪ್ರಯುಕ್ತ ನಡೆಯುವ ಈ ಆಟೋಟ ಸ್ಪರ್ಧೆಗಳ ಸಮಾರಂಭಕ್ಕೆ ಅಧ್ಯಕ್ಷರಾಗಿ ನಮ್ಮ ನಾಡ್‌ನ, ನಮ್ಮ ಜನಾಂಗದ ಹಿರಿಯ ಮುಂದಾಳ್ ಜನ ಆದ ಮತ್ತೆ ನಮ್ಮ ಕೊಡಗು ನಾಡ್‌ನ ಏಳಿಗೆಗೋಸ್ಕರ ಹಳೇ ಪಂಡ್ ಕಾಲದಿಂದಲೇ ಕಷ್ಟಪಟ್ಟ್ ದುಡ್ಡಂತಹ ಮಾನ್ಯ ಶ್ರೀ ದಂಬೆಕೋಡಿ ಶ್ರೀ ಸುಬ್ರಾಯನವು ಬಂದೊಳೊ. ಅವ್ರ ಬಂದ್ ಈ ಕ್ರೀಡೋತ್ಸವದ ಅಧ್ಯಕ್ಷ ಸ್ಥಾನನ ವಹಿಸಿಕೊಂಬಕ್ಕುತಾ ನಾ ಕೇಳಿಕಂಡನೆ. ತಾ ಹೇಳಿ ಶ್ರೀ ಸುಬ್ರಾಯ ಅಜ್ಜನ ಕೈ ಹಿಡ್ದ್ ಕುಲುಕಿ ವಂದಿಸಿ ಕುರ್ಚಿ ಮೇಲೆ ಕೂರ್ಸಿದೊ. ಈಗ ನಮ್ಮ ಅಧ್ಯಕ್ಷರಿಂದ ಕ್ರೀಡಾ ಸಮಾರಂಭ ಉದ್ಘಾಟನೆ ನೆರವೇರಿಸುತ್ತಾ ಒಳೋ ತೇಳಿಕಾಕನ ಅಧ್ಯಕ್ಷ ಸುಬ್ರಾಯ ಅಜ್ಜ ಎದ್ದ್ ಬಂದ್, ದೂರಲಿ ಮರದ ಕೊಂಬೆ ಮೇಲೆ ಕಟ್ಟಿದ ದೊಡ್ಡ ಕೆಂಪು ಬಲೂನಿಗೆ ಪಾಯಿಂಟ್ ಟೂ ಕೋವಿಲಿ ಗುರಿ ಮೊಡ್ಗಿದೊ. ಆಗ ಟೊಯ್ ತೇಳಿ ಸದ್ ಬಂದ್ ಬಲೂನ್ ಒಡ್ದ್‌ಹೋತ್. ಅದರೊಳಗಿದ್ದ ತರತರ ಹೂವಿನ ಎಸಳ್‌ಗೆಲ್ಲಾ ಅಲ್ಲಿ ಗುಡ್ಡೆ ಗುಡ್ಡೆ ಆಗಿ ನಿಂತಿದ್ದ ಮಕ್ಕಳ ಮೇಲೆಲ್ಲಾ ಚೆಲ್ಯಾಡಿಕಂಡ್ ಬೀಳ್‌ತಿತ್ತ್.

ಎಂಟ್ ಕಡೇಂದ ಬಂದಂತಹ ಬೇರೆ ಬೇರೆ ಕ್ರೀಡಾಳುಗ ಎನ್.ಸಿ.ಸಿ. ಬ್ಯಾಂಡ್‌ಸೆಟ್ ಸಂಗೀತಕ್ಕೆ ಒಬ್ಬರ ಹಿಂದೆ ಒಬ್ಬರಂಗೆ ಸ್ಟೆಪ್ಸ್ ಹಾಕಂಡ್ ಅಧ್ಯಕ್ಷ ಸುಬ್ರಾಯ ಅಜ್ಜಂಗೆ ಸೆಲ್ಯೂಟ್ ಮಾಡಿಕಂಡ್ ಗೌರವ ಸೂಚಿಸಿಕಂಡ್ ಸಿಸ್ತಿಲಿ ಒಂದು ರೌಂಡ್ ಗ್ರೌಂಡ್ ಸುತ್ತಾ ತಿರುಗಿ ಬಂದೊ. ಅಷ್ಟೊತ್ತಿಗೆ ನಮ್ಮ ಗಣಪತಿ ಅಣ್ಣನ ಜೊತೆಗೆ ಜನ ಎಲ್ಲಾ ಸೇರಿಕಂಡ್ ಈ ಗ್ರೌಂಡ್ ಒಳಗೆ ಬಂದ್ ಒಂದೊಂದಾಗಿ ಸ್ಪರ್ಧೆಗ ನಡಿಯುವಂಗೆ ವ್ಯವಸ್ಥೆ ಮಾಡುತಿದ್ದೊ.

ಎಲ್ಲಾ ಒಟ್ಟು 200ಕ್ಕೂ ಹೆಚ್ಚ್ ಸ್ಪರ್ಧೆಗೆ ಬಂದ ಮಕ್ಕ ಅವರವರ ಬಟ್ಟೆಗಳ ಬಿಚ್ಚಿ ಒಂದ್‌ಕಡೆ ಬಿಸಾಕಿದೊ. ನಿಕ್ಕರ್, ಬನೀನ್, ಬೆತ್ಲತ್ತೇಳಿಕಂಡ್ ಕೆಲವು ಓಟದ ಸ್ಪರ್ಧೆಗೆ ರೆಡಿ ಆದೊ. ಈ ಹೈದಂಗ, ಗೂಡೆಗ ಎಲ್ಲಾ ಒಂದೊಂದು ಕಡೆ ಗುಂಪಾಗಿ ಒಂದೊಂದ್ ತರದ ಸ್ಟೈಲ್ ಮಾಡಿಕಂಡ್ ಕಾಲ್‌ನ, ಕೈನ ಕೊಡಹಿಕಂಡ್, ಸುಮ್ಮಸುಮ್ನೆ ಕೊಣ್‌ಕಂಡ್ ಅವರವರ ಶರೀರನ (Warm up) ಬಿಸಿ ಮಾಡಿಕೊಂಬತಿದ್ದೊ.

ಮೊದಲಿಗೆ 100 ಮೀ. ಓಟನ ಸುರು ಮಾಡ್ರೊ. ಇದರಲ್ಲಿ ನಮ್ಮ ಕಾವೇರಿ ಕಾಲೇಜಂದ ಚೆರಿಯಮನೆ ಭೋಜಪ್ಪನ ಮಂಜ 2ನೇ ಪಿ.ಯು.ಸಿ. ಓದುವ ಮಿ. ರಾಜು ಮಾತ್ರ ಬಟ್ಟೆಬಿಚ್ಚಿ ಇಳ್ತ್. ಬೇರೆ ಎಲ್ಲಾ ಒಟ್ಟ್ ಹದ್ನಾಲ್ ಹೈದಂಗ ಓಡಿಕೆ ನಿಂತಿದ್ರೊ.

ಏರ್ ಪಿಸ್ತೂಲ್ ಸದ್ದ್ ಕೇಳ್ದಂಗೆ ಎಲ್ಲಾ ಒಟ್ಟಿಗೆ ಹಾರ್ರೊ. ನಮ್ಮ ರಾಜು ಹೈದ ಸಲೀಸಾಗಿ ಲೀಲಾಜಾಲವಾಗಿ ಎಲವರ್ನ ಹಿಂದೆ ಹಾಕಂಡ್ ಮುಂದೆ ಗುರಿಮುಟ್ಟಿ ಬುಡ್ತ್. ಅಷ್ಟೊತ್ತಿಗೆ ಅಲ್ಲಿ ನಿಂತಿದ್ದ ನಮ್ಮ ಕಡೆ ಹೈದಂಗಗಳ ಕೇಳೊಕಾ? ಓಡಿಹೋಗಿ ಈ ರಾಜು ಹೈದನ ಎತ್ತಿಕಂಡ್, ತಬ್ಬಾಡಿಕಂಡ್ ಮುತ್ತಿಕ್ಕಿಕಂಡ್ ಸಂತೋ ಪಟ್ರೊ. ಈ ಕಾಲೇಜ್‌ನ ಗೂಡೆಗೇನ್ ಹಿಂದೆ ಬಿದ್ರೊ. ಇವುಸನ ಓಡಿಹೋಗಿ ಅವರ ಕೈಯಿಂದ ಎಳ್ದ್ ಬುಡ್ಸಿಕಂಡ್ ಇವನ ಎತ್ತಿ ಎತ್ತಿ ಮುದ್ದಾಡಿ ಕಂಗ್ರಾಟ್ಸ್ ಹೇಳ್ರೊ.

ಅಷ್ಟೊತ್ತಿಗೆ ಗೂಡೆಗಳ 100ಮೀ. ಓಡಿಕೆ ಶುರು ಮಾಡ್ರೊ. ಮತ್ತೆ ಸಣ್ಣ ಹೈದಂಗಗಳ 100ಮೀ ನ ಓಡ್ಸಿಕೆ ಬುಟ್ರೊ. ಅದರ ಹಿಂದೆನೇ ಸಣ್ಣ ಸಣ್ಣ ಗೂಡೆಗಳ ಗುಂಪುನೂ ನಿಲ್ಸಿ ಓಡ್ಸಿದೊ. ಹಿಂಗೆ ಒಂದರ ಹಿಂದೆ ಒಂದೊಂದಾಗಿ ಈ ಆಟೋಟ ಸ್ಪರ್ಧೆನ ಮಿ. ಗಣಪತಿನವು ವ್ಯವಸ್ಥೆ ಮಾಡುತಿದ್ರೊ. ಈಗ (ಲಾಂಗ್ ಜಂಪ್ ಇವೆಂಟ್) ದೂರ ಜಿಗಿತ ಕಾಲೇಜ್ ಮಕ್ಕಳಿಗೆ ಶುರು ಆಗುತಾ ಉಟ್ಟ್‌ತಾ ಜೋರಾಗಿ ಮೈಕ್‌ಲಿ ಅನೌನ್ಸ್ ಮಾಡ್ರೊ. ಪುನಃ ಇನ್ನೊಂದ್ ಸಲ ಸುಮಾರ್ ದೊಡ್ಡ ದೊಡ್ಡ ಹೈದಂಗ ಕಾಲ್‌ನ ಕೈನ ಕೊಡಕಿಕಂಡ್ ಸೊಂಟನ ತಿರುಗಿಸಿಕಂಡ್ ಒಬ್ಬೊಬನೇ ದೂರ ಹಾರಿಕೆ ಶುರು ಮಾಡ್ರೊ. ನಮ್ಮ ರಾಜು ಹೈದ ಇದರಲ್ಲಿ ಹಾರಿಕೆ ಅಷ್ಟಾಗಿ ಮನಸ್ಸ್ ಕೊಟ್ಟಿತ್ತಿಲ್ಲೆ. ಏಕೆತ್ತೇಳಿರೆ ಕಾವೇರಿ ಕಾಲೇಜ್‌ನ ಕಡೇಂದ ಹಾರಿಕೆ ಕುಯ್ಯುಮುಡಿ ಕುಮಾರ ಬಟ್ಟೆ ಬಿಚ್ಚಿ ಇಳ್ದಿತ್. ಆಗ ರಾಜುನ ಫ್ರೆಂಡ್ಸ್‌ಗ ಬಂದ್, ಹೇ ರಾಜು ನೀನ್ ಇದರಲ್ಲಿ ಒಂದ್ ಕೈ ನೋಡ್ರಾ ಇದರಲ್ಲಿ ಜಾಸ್ತಿ ಮಕ್ಕ ಇಳ್ತಲೆತ್ತೇಳಿ ಪುಸಲಾಯಿಸಿದೊ. ಹೇ ನಂಗೆ ಆದುಲೆರ್ರಾ. ನಾನ್ ಈಗ ಓಡಿ ಸುಸ್ತ್ ಆಗಿ ಹೋಗ್ಯೇಳೆತ್ತೇಳಿಬುಡ್ತ್. ಆಗ ಅವನ ಫ್ರೆಂಡ್ಸ್ ಗೂಡೆಗ ಹೇಯ್ ರಾಜು ತಕಾ ಈ ಗ್ಲುಕೋನ್ ಡಿ, ಅರ್ಧ ಪ್ಯಾಕ್ ನುಂಗ್. ನೀನ್ 100 ಮೀ ಗೆದ್ದೇ ಗೆದ್ದಿಯ. ಹೂ ಏಳ್. ಬಟ್ಟೆ ಬಿಚ್ಚಿ ಇಳಿತ್ತೇಳಿ ಹುರಿದುಂಬಿಸಿ ಒತ್ತಾಯ ಮಾಡಿಕಾಕನ ಮಿ. ರಾಜು ಬಟ್ಟೆಬಿಚ್ಚಿ ದೂರ ಹಾರುವ ವಿಭಾಗಕ್ಕೆ ಹೆಸರ್‌ನ ಕೊಡ್ತ್. ಈ ಗುಂಪ್‌ಲಿ ಕೊನೇ ಸರದಿ ರಾಜುದಾಗಿತ್. ಸುಮ್ಮನೆ ಟ್ರೈಮಾಡಿ ನೋಡಿನೆ ತಾ ಎಲ್ಲದರ ಮುಂದೆ ಹೇಳ್ದಂವ ಆತ್ಮಬಲಲೇ ನಾನ್ ಇವರ ಹಿಂದೆ ಹಾಕಿ ಬುಟ್ಟನೆ ತಾ ಧೈರ್ಯ ತಕಂಡ್ ಫಸ್ಟ್ ರೌಂಡ್‌ನ ಸಿಂಪಲ್ ಆಗಿ ಓಡಿ ಬಂದ್ ಹಾರ್ತ್. ಇಂವ ಎದ್ದ್ ಹೋಗಿ ತಿರುಗಿ ನೋಡಿರೆ ! ಇವನ ಮಾರ್ಕ್ ಎಲ್ಲವರಿಗಿಂತ ಮುಂದೆ ಉಟ್ಟು. ಇದರ ನೋಡ್ದೆ ಈ ಕಾವೇರಿ ಕಾಲೇಜ್ ಮಕ್ಕಳಿಗೆ ತುಂಬಾ ಖುಷಿ ಆಗಿ ಹೋತ್. ಎಲ್ಲವೂ ಒಟ್ಟಿಗೆ ಸೇರಿ ಇವನ ಮನ್ಸಿಗೆ ಹುರಿದುಂಬಿಸಿ ಧೈರ್ಯ ಕೊಟ್ರೊ. ಎರಡನೆ ರೌಂಡ್‌ಲಿ ಹಾರಿಕಾಕನ ನಮ್ಮ ರಾಜು ದಮ್ಮುಕಟ್ಟಿ ಓಡಿ ಬಂದ್ ಜೋರಾಗಿ ನೆಗ್ದ್ ಬುಡ್ತ್. ಇದರಂದ ರಾಜುಗೆ ಹೆಚ್ಚಿನ ಆಯಾಸ ಏನೂ ಆತ್ಲೆ.

ಇದಾದ ಮೇಲೆ ಬಾರದ ಗುಂಡು ಎಸೆಯದುತ್ತೇಳಿಕಂಡ್ ಶುರು ಮಾಡ್ರೊ. ಇದ್‌ಕ್ಕೆ ಹಾಸನ ಮತ್ತೆ ಮಂಗಳೂರು ಕಡೇಂದ ಬಂದ ಅಜಾನುಬಾಹು ಸ್ಪರ್ಧಿಗ ಒಳ್ಳೆ ಕಪ್ಪುಕೋಣನಂಗೆ ಇದ್ದವು. ಬನೀನ್ ಕಾಚಾನ ಹಾಕಂಡ್ ಇಳ್ದಿದ್ರೊ. ಇದ್ದ 12 ಜನರ ಪೈಕಿ ಮಡಿಕೇರಿ ಕಾಲೇಜಿನ ಮೊಣ್ಣಪನೇ ಪೀಚೆ ಹೈದ. ಆದ್ರಂದ ಈ ಮಕ್ಕ ಎಲ್ಲಾ ಸೇರಿಕಂಡ್ ಆದ್ರೆ ಆಗಲಿ ಹೋದ್ರೆ ಹೋಗಲಿ ಬೇಜಾರ್ ಮಾಡ್‌ಬ್ಯಾಡ ರಾಜು. ಒಂದ್ ಥರ್ಡ್ ಪ್ರೈಜಾದ್ರೂ ನೀ ಇಳ್ದರೆ ಸಿಕ್ಕುದ್ರು ತಾ ಒತ್ತಾಯ ಮಾಡ್ರೊ. ನಮ್ಮ ರಾಜುಗೆ ಕೂಡಾ ಈಗ ಒಳ್ಳೆ ಹುಮ್ಮಸ್ ತುಂಬಿತ್. ರಟ್ಟೇಲ್ ಒಳ್ಳೆ ಶಕ್ತಿನೂ ಉಟ್ಟು ಆದ್ರೂ ಈ ಆನೆಮರಿಗಳ ಮುಂದೆ ಈ ಕಡ್ಡಿ ಪೈಲ್ವಾನ್ ರಾಜು. ಅಜಗಜಾಂತರ ವ್ಯತ್ಯಾಸ ಉಟ್ಟು. ಆದ್ರೂ ದೊಡ್ಡ ದೊಡ್ಡ ಹುಡುಗರ್ ಕಲ್ಲೆಸದುವರ ನೋಡ್ದ ಮೇಲೆ ಒಂದ್ ಲೆಕ್ಕಾಚಾರಕ್ಕೆ ಬಂದವನಂಗೆ ಕಂಡತ್. ಈಗ ರಾಜುನ ಸರದಿ. ರಾಜು ಆ ಗುಂಡ್‌ನ ಒಂದ್ ಕೈಲಿ ಎತ್ತಿಕಂಡ್ ತೆಂಗಿನ ಕಾಯಿನ ತಿರುಗ್ಸಿದಂಗೆ ತಿರುಗ್ಸ್‌ತಿತ್ತ್. ಅಂವ ಒಮ್ಮೆ ಒಳ್ಳ ಉಸಿರ್ ಎಳ್ದ್ ಎದೆ ಒಳಗೆ ಕಟ್ಟಿ ಕೈನೂ ತಲೆನೂ ನೆಲಮಟ್ಟಕ್ಕೆ ಬೊಗ್ಗಿಸಿತಪ್ಪ. ಒಳ್ಳೆ ಮೂಗ್‌ಲಿ ಶೀನ್ ಬಂದಂಗೆ ಸದ್ದ್ ಮಾಡಿ ಒಮ್ಮೆಗೆ ಮೇಲಕ್ಕೆ ಹಾರಿ ಸ್ವಲ್ಪ ಎತ್ತರಲೇ ಆ ಕಲ್‌ನ ಕಳ್ಸಿತ್. ನೋಡಿರೆ ಅದ್ ಎಲ್ಲವರಿಗಿಂತ ಒಂದ್ ಇಂಚ್ ಮುಂದೆ ಹಾರಿ ಬಿದ್ದುಟು. ಆಮೇಲೆ ಇಂವನ ಹಿಂದೆ ಹಾಕಿಕೆ ಬಾಕಿ ಇದ್ದವಕೆ ಮೂರು ಮೂರು ರೌಂಡಿಗೂ ಸಾಧ್ಯ ಆತ್‌ಲ್ಲೆ. ಇದ್ ಮುಗ್ದಂಗೆ ಅಲ್ಲಿ ಬಂದ್ ಸೇರ್ದ ಎಲ್ಲಾ ಅಭಿಮಾನಿಗಳಿಗೂ ಅಲ್ಲೇ ಚಪ್ಪರದ ಕೆಳಗೆ ಫಲಹಾರ, ಕಾಫಿ ತಿಂಡಿತ್ತೇಳಿ ನಮ್ಮ ವಿಜಯಲಕ್ಷ್ಮಿ ಬಸ್‌ನ ಸಾಹುಕಾರ ಹೊಸೂರು ಜೋಯಪ್ಪನವ್ರ ವ್ಯಸವ್ಥೆ ಮಾಡಿದ್ರೊ. ದೊಡ್ಡವು ಸಣ್ಣವು ಮಕ್ಕವೊರಿತ್ತೇಳುವ ಭೇದ ಇಲ್ಲದೆ ಊಟ ತಿಂಡಿ ಮುಗಿಯುವ ಪೊದ್ಲೇ ಅಂದ್‌ನ ಕೊನೆಯ ಸ್ಪರ್ಧೆಲಿ ಒಂದಾದ 400×100 ರಿಲೆ ಓಟ, ಗೂಡೆಗಳಿಗೂ, ಹೈದಂಗಗಳಿಗೂ ಶುರು ಆತ್. ಈ ದಿನದ ಒಟ್ಟು ಈವನ್ಟ್ಸ್ (Events)ಲಿ ಕಾವೇರಿ ಕಾಲೇಜ್‌ನ ಹೈದಂಗ, ಗೂಡೆಗ ಸಣ್ಣವು ದೊಡ್ಡವರ ಬ್ಯೇಚ್‌ಲಿ ಬೇಕಾದಷ್ಟು ಫಸ್ಟ್, ಸೆಕೆಂಡ್‌ತ್ತೇಲಿ ತುಂಬಾ ಪ್ರೈಜ್‌ಗಳನ್ನ ಬಾಚಿಕೊಂಡಿದ್ರೊ. ಆದ್ರೇ ಟೀಂ ಚಾಂಪಿಯನ್ ಷಿಪ್‌ಗೆ ಮೈಸೂರು, ಶಿವಮೊಗ್ಗ, ಮಡಿಕೇರಿ ತಂಡದೊಳಗೆ ಪೈಪೋಟಿ ಆಗಿ ಹೋತ್. ಮುಖ್ಯ ಆಗಿ ಈ ರಿಲೆ ಓಟಲಿ ಗೆದ್ದೇ ಗೆಲ್ಲಕು. ದೊಡ್ಡವರ ರಿಲೆಲಿ ನಮ್ಮ ಚಾಂಪಿಯನ್ ರಾಜು ಇದ್ರೂ ಅಂವಂಗೆ ಬೆಳಿಗ್ಗೆಂದ ಅದ್ರುಲಿ, ಇದ್ರುಲಿ ತೇಳಿ ಓಡಾಡಿ ಸುಸ್ತ್ ಆಗುಟ್ಟುತ್ತೇಳುವ ಚಿಂತೆ ನಮ್ಮ ಕಾವೇರಿ ಕಾಲೇಜ್‌ನ ತಂಡಕ್ಕೆ ಶುರು ಆಗಿತ್. ಆದ್ರಂದ ಟೀಂ ಚಾಂಪಿಯನ್ ಷಿಪ್ ತಪ್ಪಿಹೋದಲ್ಲಾ ?ತ್ತೇಳುವ ಭಯಂದ ನಮ್ಮ ಮಕ್ಕಳ ಮುಖ ಮಂಕಾಗಿತ್. ಆದ್ರೆ ಗೂಡೆಗಳ ರಿಲೆ ಓಟದ ತಂಡ ಒಳ್ಳೆ ಸ್ಟ್ರಾಂಗ್ ಆಗಿದ್ರಂದ ಅವು ಗ್ಯಾನ ಮಾಡ್ದಂಗೆ ಫಸ್ಟ್ ಪ್ರೈಜ್ ತೆಗ್ದೇ ಬುಟ್ರೊ.

ಸೀನಿಯರ್ ಬಾಯ್ಸ್ ರಿಲೆ ಓಟಕ್ಕೆ ಎಲ್ಲಾ ಮಕ್ಕ ರೆಡಿ ಆಗಿ ನಿಂತೊ. ಓಡಿಕಾಕನ ಕಾವೇರಿ ಕಾಲೇಜ್‌ನ ತಂಢ ಫಸ್ಟ್

ಬಾದುತ್ತೇಳುವ ಆಸೆನ ಬುಟ್ಟೇ ಬುಟ್ಟೊ. ಏಕೆತ್ತೇಳಿರೆ ಇದರ ಮೂರನೆ ರೌಂಡ್‌ನ ಮನುಷ್ಯ ಮೇದಪ್ಪ ನಾಲ್ಕನೇ ಸ್ಥಾನಲಿ ಗುರಿ ಮುಟ್ಟಿತ್. ಆದ್ರೂ ಹೆದ್ರದ ನಮ್ಮ ರಾಜು ಅವನ ಕೈಂದ ಬೇಟನ್‌ನ ಕಿತ್ತ್‌ಕಂಡ್ ಕುರೆಂಗಿನಂಗೆ ಕಣ್ ಮುಚ್ಚಿ ಓಡಿರೆ ಒಂದೇ ಸ್ಪೀಡ್ ಅಂವ ಗುರಿ ಮುಟ್ಟಿ ಗೆರೆ ದಾಟಿರೂ ಇವನ ಸ್ಪೀಡ್ ಕಂಟ್ರೋಲ್ ಆಕೆ ಅರ್ಧ ರೌಂಡ್ ಮುಂದೆ ಓಡಿ ಹೋಗಿತ್. ಅಲ್ಲಿ ಹೋಗಿ ದೊಪ್ಪನೆ ತಲೆ ತಿರುಗಿ ಬಿದ್ದ್‌ಬುಡ್ತ್. ಮಕ್ಕ ಎಲ್ಲಾ ಕಿರ್‌ಚಿಕಂಡ್ ಅಂವನ ಹಿಂದೆನೇ ಓಡಿ ಹೋದೊ. ರಾಜುನ ನಿಧಾನಕ್ಕೆ ಹಿಡ್ದ್ ಮೇಲೆತ್ತಿ ತೊಡೆ ಮೇಲೆ ಒಬ್ಬ ಮಲ್ಗ್‌ಸಿಕಂಡತ್. ಇನ್ನೊಬ್ಬ ಅಂವನ ತಲೆಗೆ ನೆತ್ತಿಗೆ ತಣ್ಣೀರ್‌ನ ಚಿಮುಕಿಸಿದೊ. ಸುತ್ತ ಸೇರ್‌ದ ಮಕ್ಕಳ ದೂರ ಮಾಡಿ ಗಾಳಿ ಹಾಕಿದೊ. ಸ್ವಲ್ಪ ಹೊತ್ ಕಳ್ದ ಮೇಲೆ ರಾಜು ಮಂಜ ಮೆಲ್ಲಂಗೆ ಕಣ್ ಬುಟ್ಟಿತ್. ತನ್ನ ಸುತ್ತ ಮುಖ ಬಾಡಿಸಿ ಕಂಡ್ ನಿಂತಿದ್ದ ಸ್ನೇಹಿತರ ನೋಡಿ. ಇಲ್ಲೆರ ನಂಗೇನ್ ಆತ್‌ಲೆ. ನಾನ್ ಲಾಯಕಲ್ ಒಳೆತ್ತೇಳಿ ಮೆತ್ತಂಗೆ ಹೇಳ್ತ್.

ರಾಜು ಕಣ್ ಬುಟ್ಟು ನೋಡ್‌ದ ಮೇಲೆ ಸುತ್ತ ನಿಂತಿದ್ದ ಹೈದಂಗ ಗೂಡೆಗ ಅವರವರ ಕಣ್ಣ್ ನೀರ್‌ನ ಒರ್ಸಿಕಂಡ್ ಖುಷೀಲಿ ನೆಗೆ ಆಡ್ದೊ. ಎಲ್ಲವ್ರೂ ಸೇರಿ ಅಂವನ ಹೊತ್ತ್‌ಕಂಡೇ ಕುಣಿದಾಡಿಕಂಡ್ ಅಲ್ಲೆ ಚಪ್ಪರದ ಕಡೆಗೆ ಜಯಘೋಷ ಹಾಕಂಡ್ ಹೊರಟೊ. ಕಾವೇರಿ ಕಾಲೇಜಿನ ಎಲ್ಲಾ ಮಕ್ಕಳಿಗೆ ಹೇಳಿಕೆ ಬೊತ್ತದಷ್ಟ್ ಖುಷಿ ಆತ್. ಕಾವೇರಿ ಕಾಲೇಜಿಗೆ ಟೀಂ ಚಾಂಪಿಯನ್ ಷಿಪ್ ಅಲ್ಲದೆ ನಮ್ಮ ಊರ್‌ನ ಹೈದ ರಾಜುಗೆ ವೈಯುಕ್ತಿಕ ಚಾಂಪಿಯನ್ ಷಿಪ್ ಕೂಡಾ ಸಿಕ್ಕಿಹೋತ್.

ಈ ವಿಷಯ ತಿಳ್ದ ಅಧ್ಯಕ್ಷ ಸುಬ್ರಾಯ ಅಜ್ಜನ ದೊಡ್ಡ ಮೀಸೆಗ ಕೊಣ್ದಾಡಿಕೆ ಶುರು ಆತ್. ಇದ್ ಏನ್ ಸಾಮಾನ್ಯದ ಹೆಗ್ಗಳಿಕೆ ಏನಲ್ಲಯ್ಯ. ಇದ್ ನಮ್ಮ ಮಂಜನ ದೊಡ್ಡ ಮರೆಯಲಾಗದ ದೊಡ್ಡ ಸಾಧನೆ. ಭೇಷ್ ಹುಟ್ಟಿಸಿದ ಅಪ್ಪಅವ್ವಂಗೆ ಕೀರ್ತಿ ತಂದ ಕೂಸ್ ಇವತ್ತೇಳಿ ಕೊಂಡಾಡಿದೊ.

ಗಣಪತಿನವ್ವು ಮೈಕ್‌ನ ಹಿಡಕಂಡ್ ಹೇಳ್ದೊ. ಇಂದ್‌ನ ಕಾರ್ಯಕ್ರಮಗ ಇಲ್ಲಿಗೆ ಮುಗ್ತ್. ಎಲ್ಲಾ ಕ್ರೀಡಾಪಟುಗಳಿಗೆ ಬಹುಮಾನ ವಿತರಣೆ. ನಮ್ಮ ಅಧ್ಯಕ್ಷರಿಂದ ನಡ್ದದೆ. ಆದ್‌ದರಿಂದ ಸರ್ವಜನ ಇಲ್ಲಿ ಸಭಾಂಗಣಲಿ ಬಂದು ಸೇರಿ ಕಂಬಕುತಾ ವಿನಂತಿಸಿದೊ. ನಮ್ಮ ಸನ್ಮಾನ್ಯ ಅಧ್ಯಕ್ಷರಿಂದ ಎಲ್ಲಾ ಹಂತದ ಆಟೋಟಗಳಲ್ಲಿ ಜಯ ಸಾಧಿಸಿದವ್ರಿಕೆ ಬಹುಮಾನನ ವಿತರಿಸಿದೊ. ಕೊನೆಗೆ ಇಂದ್‌ನ ಈ ಕ್ರೀಡಾ ಉತ್ಸವಲಿ ಪಾಲ್ಗೊಂಡವರ ಪೈಕಿ ಟೀಂ ಚಾಂಪಿಯನ್ ಷಿಪ್ ಪ್ರೈಜ್ ಕೂಡಾ ಇಂದ್‌ನ ದಿನಲಿ ನಮ್ಮ ಕೊಡಗ್‌ನ ಕಾವೇರಿ ಕಾಲೇಜಿಗೆ ದಕ್ಕಿದುದರ ವಿಷ್ಯ ತಿಳ್ದ್ ಇಲ್ಲಿ ನೆರೆದಿದ್ದ ಎಲ್ಲಾ ಅಭಿಮಾನಿಗಳಿಗೆ ಕೈಚಪ್ಪಾಳೆ ಹೊಡ್ದ್ ಹೊಡ್ದ್ ತಮ್ಮ ಖುಷಿನ ತೋರ್ಸಿಕಂಡೊ. ವ್ಯವಸ್ಥಾಪಕ ಗಣಪತಿವ್ವು ಕೈಲಿ ಮೈಕ್ ಹಿಡ್ದ್ ಜೋರಾಗಿ ಕಿರುಚಿಕಂಡ್ ಖುಷೀಲಿ ಹೇಳ್ದೊ. ನಮ್ಮ ಕಾವೇರಿ ಕಾಲೇಜಿನ ಎಲ್ಲಾ ಕ್ರೀಡಾಳುಗ ಇನ್ನೊಂದು ಸರ್ತಿ ಸ್ಟೇಜ್ ಮೇಲೆ ಬರೊಕ್ಕಾದ್. ಇಂದ್‌ನ ಟೀಂ ಚಾಂಪಿಯನ್ ಷಿಪ್ ಬಹುಮಾನ ಸ್ವೀಕರಿಸ್‌ಕನ ನಮ್ಮ ಎಲ್ಲಾ ಮಕ್ಕ ಒಟ್ಟಿಗೆ ನಿಂತ್‌ಕಂಡ್ ಒಂದು ದೊಡ್ಡ ಪೋಟೋನ ಹೊಡ್ಸಿಕಂಣಕುತ್ತಾ ಹೇಳ್ದೊ. ಮತ್ತೆ ಹ್ಯಾಟ್ರಿಕ್ ಬಹುಮಾನ ಕೂಡಾ ಇದೇ ನಮ್ಮ ಕಾಲೇಜ್‌ನ ಸೆಕೆಂಡ್ ಇಯರ್ ಪಿ.ಯು.ಸಿ.ನ ರಾಜು ಇವ್ರಿಕೆ ನಮ್ಮ ಮಾನ್ಯ ಅಧ್ಯಕ್ಷರಿಂದ ವೈಯುಕ್ತಿಕ ಬಹುಮಾನ ಕೂಡಾ ಕೊಡುತಾ ಒಳೊ. ಕೇಳಿಕಾಕನ ಇನ್ನೊಂದೊಪ್ಪ ಕೂಡಾ ಜನರ ಚಪ್ಪಾಳೆ ಸದ್ದ್. ಮತ್ತೆ ಖುಷೀಲಿ ಕಿರುಚಾಟ ಜೋರಾತ್. ಈ ಚಪ್ಪಾಳೆ ಸದ್‌ನ ಮಧ್ಯ ಸುಬ್ರಾಯ ಅಜ್ಜ ಎದ್ದ್‌ಬಂದ್ ರಾಜುನ ಹೆಗಲ್ ಮ್ಯಾಲೆ ಕೈ ಹಾಕಿ ಬಲಗೈನ ಅವನ ತಲೆಮೇಲೆ ಮೊಡಗಿ ನಮ್ಮ ಜಾತಿ ಗೌಡನ ಮಂಜನೇ ಆದ ನೀನ್ ಇಂದ್ ತೋರ್ಸಿದ ಸಾಧನೆ ನೋಡಿ ನಮಿಗೆಲ್ಲಾ ಬಹಳ ಖುಷಿ ಆಗುಟ್ಟು. ಇದೇ ತರ ನೀನ್ ಮುಂದಕ್ಕೂ ನಿನ್ನ ಆತ್ಮಬಲ, ಧೈರ್ಯ ಬುದ್ಧಿವಂತಿಕೆನ ಹೆಚ್ಚಿಸಿ ಕೊಂಡ್ ಹೋಗುತಾ ಒಳ್ಳೆ ಕೀರ್ತಿ ಸಂಪಾದಿಸಿಕೆ ಈ ನಮ್ಮ ಕುಲದೇವ್ರು ವೆಂಕಟ ರಮಣನ ಸಹಾಯ ಕೂಡ ಸಿಕ್ಕಲಿತ್ತೇಳಿ ಆಶೀರ್ವಾದ ಮಾಡ್ದೊ. ಮತ್ತೆ ಖುಷೀಲಿ ಅವನ ತಲೆ ಸವರಿ ತನ್ನ ಜೋಬ್‌ಂದ ನೂರರ 20 ನೋಟ್‌ನ ಅವನ ಕೈಯೊಳಗೆ ಮಡಗಿ ಹರ್ಸಿದೊ.

ಇಂದ್ ನಮ್ಮ ರಾಜು ಹೈದ ಎಲ್ಲವರ ಕಣ್ಣೆಲೂ ದೊಡ್ಡ ಹೀರೊ ತರ ಕಂಡತ್. ನಾಲ್ಕ್ ಚಿನ್ನದ ಪದಕದ ಸರನ ಕುತ್ತಿಗೆಗೆ ಹಾಕಿಸಿಕಂಡ್ ಅಧ್ಯಕ್ಷರ ಕೊಟ್ಟ 2,000 ರೂ. ನ ಜೋಬೊಳಗೆ ಹಾಕಂಡ್ ಟೀಂ ಚಾಂಪಿಯನ್ ಷಿಪ್‌ನ ದೊಡ್ಡ ಷೀಲ್ಡ್‌ನ ಹೊತ್ ಕಂಡ್ ಆ ವೇದಿಕೆಯಿಂದ ಕೆಳಗೆ ಇಳ್ದ್ ಬಾಕಾಕನ ಆ ಕಾಲೇಜ್‌ನ ಹೈದಂಗ ಎಲ್ಲ ಸೇರಿ ಅಂವನ ಎತ್ತಿಕಂಡ್ ಕೊಣ್ದಾಡಿಕಂಡ್ ಹೊರಗೆ ಓಡೇಬುಟ್ಟೊ.

ಬುಟ್‌ಬುಡ್ರೋ ನನ್ನ ನಿಮಿಗೆ ದಮ್ಮಯ್ಯತೇಳಿನೆ. ಈ ಆಟಗಳ ಮಧ್ಯೆ ನಾನ್ ನನ್ನ ಮನೆನ ಮರ್ತೆಬುಟ್ಟೆ, ಮನೇಲಿ ನನ್ನ ತಂಗೆ ಗೀತನ ನೋಡಿಕೆ ಹೊಸ ನೆಂಟ್ರ್‌ಗ ಬಂದಿದ್ದವೆ. ಬೇಗ ಬಂದಂ ಬುಡಂತ ನಮ್ಮ ಅಪ್ಪ ಹೇಳಿಟ್ಟು ನಂಗೆ ಇಲ್ಲೇ ತಡ ಆಗಿ ಹೋಗುಟುತಾ ಹೇಳಿಕಂಡ್ ಕೊಸರಾಡಿಕಂಡ್ ಅವರ ಕೈಯಿಂದ ಬುಡ್ಸಿಕಂಡ್ ತನ್ನ ಜಾವ ಬೈಕ್‌ನ ಹತ್ರ ಓಡಿಬಾತ್. ಆದ್ರೆ ಆಗಲೇ ಈ ರಾಜುನ ಬೈಕ್‌ಮೇಲೆ ತಂಗೆ ಗೀತನ ಸ್ನೇಹಿತೆಗ ಶಿಲ್ಪಾ ಮತ್ತೆ ರಾಣಿ ಓಡಿಹೋಗಿ ಕುದ್‌ಬುಟ್ಟೊಳ. ನಡೀ ರಾಜು ಬಾವ ನಾವು ಸನ ನಮ್ಮ ಗೀತನ ಗಂಡ್ ಪೊರ್ಲು ಉಟ್ಟಾತ ನೋಡಕು. ನಾವು ಕೂಡಾ ನಿನ್ನೊಟ್ಟಿಗೆ ಮನೆಗೆ ಬಂದವೆತಾ ಹೇಳಿ ಹಠ ಹಿಡ್ದ್ ಕುದ್ದ್‌ಬುಟ್ಟೊ. ಸರಿ ಜೇರೆ ದಾರಿ ಕಾಣದೆ ರಾಜು ಈ ಎರಡ್ ಗೂಡೆಗಳ ಬೈಕ್ ಹಿಂದೆ ಕೂರ್ಸಿಕಂಡ್ ತಾಳೊತ್ತು ಮಾನಿ ಕಡೆ ತನ್ನ ಮನೆಗೆ ಹೊರಟತ್. ಮನೆ ಗೇಟ್ ಮುಂದೆ ಬೈಕ್‌ನ ನಿಲ್ಸಿತ್. ಎದುರುಗಡೆ ಕೈಯಲೆಲಿ ಪಪ್ಪ ಒಬ್ಬನೇ ಅತ್ತ ಇತ್ತ ತಿರುಗಾಡುದು ಕಂಡದೆ. ಇದರ ನೋಡಿ ರಾಜುದ್ ಮೈ ಒಮ್ಮೆ ನಡ್‌ಗಿತ್. ಮೆಲ್ಲಂಗೆ ಆ ಎರಡ್ ಗೂಡೆಗಳಿಗೆ ಕೆಳಗೆ ಇಳಿಯಕೆ ಹೇಳ್ತ್. ಬಂದಿದ್ದ ನೆಂಟ್ರ್‌ಗ ಅಲ್ಲೆ ಎಲ್ಲಾರೂ ಒಳೊತ್ತೇಲಿ ದೂರದಿಂದಲೇ ನೋಡ್ತ್. ಅಷ್ಟೊತ್ತಿಗೆ ಅಲ್ಲಿಗೆ ತಂಗಿ ಗೀತ ಓಡಿಬಾತ್. ತನ್ನ ಫ್ರೆಂಡ್ಸ್ ರಾಣಿ, ಶಿಲ್ಪನ ಮೆಲ್ಲಂಗೆ

14ನೇ ಪುಟಕ್ಕೆ

# ವ್ಯಕ್ತಿ ಪರಿಚಯ : ಬಿ. ಇಡಿ ಪದವಿಯಲ್ಲಿ ರ್‍ಯಾಂಕ್ ಪಡೆದ ಪಾಡಿಚೆಟ್ಟೀರ ಕವಿತ



ಪಾಡಿಚೆಟ್ಟೀರ ಕವಿತ

ಪ್ರಶ್ನೆ : ನಿಮ್ಮ ತಂದೆ ತಾಯಿ ಬಗ್ಗೆ ಹೇಳುವಿರಾ?

ಉತ್ತರ : ತಂದೆ ಪಾಡಿಚೆಟ್ಟೀರ ಶ್ರೀ ಪೊನ್ನಪ್ಪ, ಸಿಂಡಿಕೇಟ್ ಬ್ಯಾಂಕ್ ಮಡಿಕೇರಿಯಲ್ಲಿ ಉದ್ಯೋಗದಲ್ಲಿದ್ದಾರೆ. ತಾಯಿ ಶ್ರೀಮತಿ ಲತಾ.

ಪ್ರ. : ನಿಮಗೆ ಅಕ್ಕ ತಂಗಿ, ಅಣ್ಣ ತಮ್ಮ?

ಉ. : ನಾವು ನಾಲ್ವರು ಹೆಣ್ಣುಮಕ್ಕಳೇ, ಅಕ್ಕ ಮಮತ, ಬಿ.ಬಿ.ಎಂ. ಓದಿದ್ದಾಳೆ. ಸದ್ಯಕ್ಕೆ ಖಾಸಗಿ ಸಂಸ್ಥೆಯೊಂದರಲ್ಲಿ ಉದ್ಯೋಗದಲ್ಲಿದ್ದಾಳೆ. ಹಿರಿಯ ತಂಗಿ ವನಿತ ಆಕೆ ಅಂತಿಮ ವರ್ಷದ ಬಿ.ಎ. ಓದುತ್ತಿದ್ದಾಳೆ. ಕಿರಿಯ ತಂಗಿ ನಮಿತ ಆಕೆ ಪ್ರಥಮ ಬಿ.ಎ. ಓದುತ್ತಿದ್ದಾಳೆ. ಇಬ್ಬರೂ ಎಫ್.ಎಂ.ಕೆ. ಕಾಲೇಜು ಮಡಿಕೇರಿಯಲ್ಲಿ ಓದುತ್ತಿದ್ದಾರೆ.

ಪ್ರ. : ನಿಮ್ಮ ವಿದ್ಯಾಭ್ಯಾಸದ ಬಗ್ಗೆ ಹೇಳುವಿರಾ?

ಉ. : ನನ್ನ ಪ್ರಾಥಮಿಕ ವಿದ್ಯಾಭ್ಯಾಸ ಸಂತ ಮೈಕಲರ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಾಯಿತು. ಮಡಿಕೇರಿ ಕಾನ್ವೆಂಟ್‌ನಲ್ಲಿ ಪ್ರೌಢ ವಿದ್ಯಾಭ್ಯಾಸವನ್ನು ಆಂಗ್ಲ ಮಾಧ್ಯಮದಲ್ಲಿ ಪಡೆದೆ. ಎಸ್.ಎಸ್.ಎಲ್.ಸಿ. ಶೇ. 80 ಅಂಕ ಪಡೆದೆ. ಪಿ.ಯು.ಸಿ. ವಿದ್ಯಾಭ್ಯಾಸವನ್ನು ಕೊಡಗು ವಿದ್ಯಾಲಯದಲ್ಲಿ ಮುಗಿಸಿದೆ. ಅಲ್ಲಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾದೆ. ಬಿ.ಎಸ್ಸಿ. ಪದವಿಯನ್ನು ಮಡಿಕೇರಿ ಸೀನಿಯರ್ ಕಾಲೇಜಿನಲ್ಲಿ ಪಡೆದೆ. ಶೇ. 70 ಅಂಕ ಪಡೆದು "ಡಿಸ್ಟಿಂಗ್ಷನ್" ದೊರೆಯಿತು.

ಪ್ರ. : ನೀವು ಬಿ.ಇಡಿ. ಪದವಿಯಲ್ಲಿ ಎಲ್ಲಿ ಪಡೆದಿರಿ? ಅಲ್ಲಿ ನಿಮ್ಮ ಸ್ಥಾನ ಯಾವುದು?

ಉ. : ನಾನು ಬಿ. ಇಡಿ. ಪದವಿಯನ್ನು ಮಂಗಳೂರು ವಿ. ವಿ. ವ್ಯಾಪ್ತಿಗೆ ಬರುವ ಮಂಗಳೂರಿನ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶೇ. 83 ಅಂಕ ಪಡೆದು ತೃತೀಯ ರ್‍ಯಾಂಕ್ ವಿಜೇತೆಯಾದೆ.

ಪ್ರ. : ನಿಮ್ಮ ಈ ಸಾಧನೆಯ ಒಳಗುಟ್ಟೇನು?

ಉ. : ನಿರಂತರ ಪರಿಶ್ರಮ. ನಾನು ಪ್ರೌಢ ಶಾಲೆಗೆ ಸೇರಿದಾಗ ಆಂಗ್ಲ ಮಾಧ್ಯಮವನ್ನು ಆರಿಸಿಕೊಂಡೆ. ಮೊದಲ ಆರು ತಿಂಗಳು ತುಂಬಾ ಕಷ್ಟವಾಯಿತು. ನಂತರ ಯಾವುದನ್ನೇ ಆಗಲಿ ಅದು ಎಷ್ಟೇ ದೊಡ್ಡ ವಿಷಯವೇ ಆಗಲಿ ಬರೆದೇ ಕಲಿಯಲು ಪ್ರಾರಂಭ ಮಾಡಿದೆ. ಬಿ.ಇಡಿ. ಪದವಿ ಪರೀಕ್ಷೆಯ ಕಾಲದಲ್ಲಿ ರಾತ್ರಿ ಎರಡು ಗಂಟೆವರೆಗೂ ಅಭ್ಯಾಸದಲ್ಲಿ ತೊಡಗಿದ್ದು ಮತ್ತೆ ಐದೂವರೆ ಗಂಟೆಗೆದ್ದು ಅಭ್ಯಾಸದಲ್ಲಿ ತೊಡಗುತ್ತಿದ್ದೆ.

ಪ್ರ. : ಇಷ್ಟು ದೀರ್ಘವಾಗಿ ಅಭ್ಯಾಸದಲ್ಲಿ ತೊಡಗಿರುವಾಗ ನಿಮ್ಮ ಮನೆಯವರು ಆಕ್ಷೇಪಿಸುತ್ತಿರಲಿಲ್ಲವೆ?

ಉ. : ನಾನು ಇದ್ದುದು ಹಾಸ್ಟಲ್‌ನಲ್ಲಿ? ನಾನು ಇಷ್ಟು ದೀರ್ಘ ಅಭ್ಯಾಸದಲ್ಲಿ ತೊಡಗಿದ್ದೇನೆಂದು ಅವರಿಗೆ ಗೊತ್ತಿಲ್ಲ.

ಪ್ರ. : ಹೀಗೆ ನಿದ್ರೆಗೆಟ್ಟು ಓದುತ್ತಿದ್ದ ನಿಮಗೆ ಆರೋಗ್ಯ ಕೈಕೊಡಲಿಲ್ಲವೆ?

ಉ. : ಸದ್ಯ ಹಾಗೇನೂ ಆಗಲಿಲ್ಲ. ಆದರೆ ಲಾವಾರಾಗಿಬಿಟ್ಟಿದ್ದೆ.

ಪ್ರ. : ಬಿ.ಇಡಿಯಲ್ಲಿ ರ್‍ಯಾಂಕ್ ನಿರೀಕ್ಷೆ ಮಾಡಿದ್ದೀರಾ?

ಉ. : ಇಲ್ಲ "ಡಿಸ್ಟಿಂಗ್ಷನ್" ಪಡೆಯಬೇಕೆಂಬ ಹಠದಲ್ಲಿದ್ದೆ ನೋಡಿ, ರ್‍ಯಾಂಕ್ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಫಲಿತಾಂಶ ಬಂದಾಗ ಶೇ 83 ಅಂತ ಮಾತ್ರ ಗೊತ್ತಾಯಿತು. ಆದರೆ ಅಂಕಪಟ್ಟಿ ಪಡೆಯಲು ಕಾಲೇಜಿಗೆ ಹೋದಾಗಲೇ ನಾನು ಮೂರನೇ ರ್‍ಯಾಂಕ್ ಪಡೆದಿದ್ದೇನೆಂದು ಗೊತ್ತಾದುದು.

ಪ್ರ. : ನೀವು ರ್‍ಯಾಂಕ್ ವಿಜಯಿ ಅಂತ ಗೊತ್ತಾದಾಗ ಏನನ್ನಿಸಿತು? ಮನೆಯವರ ಪ್ರತಿಕ್ರಿಯೆ?

ಉ. : ಅಯ್ಯೋ ಅನ್ನೋದೇನು? ಕುಣಿದು ಕುಪ್ಪಳಿಸಿಬಿಟ್ಟೆ. ಮನೆಯವರೊಂದಿಗೆ ಈ ವಿಚಾರ ಹೇಳಿದಾಗ "ಮಗಳನ್ನು ಓದಿಸಿದ್ದು ಸಾರ್ಥಕವಾಯಿತು" ಅಂತ ಸಂಭ್ರಮದಿಂದ ಅಲ್ಲಿ ಇಲ್ಲಿ ಓಡಾಡಿದರು. "ನಾನೂ ಅದ್ನೇ ಓದಬೇಕಿತ್ತು" ಅಂತ ಅಕ್ಕ ಪರದಾಡಿಕೊಂಡಳು. ಒಬ್ಬಳು ತಂಗಿಯಂತೂ ನಾನೂ ಅದನ್ನೇ ಓದುತ್ತೇನೆಂದು" ಪ್ರತಿಜ್ಞೆ ಮಾಡಿಯೂ ಬಿಟ್ಟಳು.

ಪ್ರ. : ನೀವು ಬಿ.ಇಡಿ. ಪದವಿಯನ್ನೇ ಏಕೆ ಅಪೇಕ್ಷಿಸಿದ್ದು?

ಉ. : ನಾನು ಶಿಕ್ಷಕಿ ಆಗಬೇಕೆಂದು ಮೊದಲಿಂದಲೂ ಆಸೆ ಪಟ್ಟಿದ್ದೆ. ಹಾಗಾಗಿ ಈ ಪದವಿಯನ್ನೇ ಆಯ್ಕೆ ಮಾಡಿಕೊಂಡೆ.

ಪ್ರ. : ಕೆಲವು 'ನಾಲಗೆ ತುರಿಕೆ' ಇರುವವರು "ಎಲ್ಲೂ ಸಿಗದವರಿಗೆ ಶಿಕ್ಷಕ ಕೆಲಸ" ಎನ್ನುತ್ತಾರಲ್ಲ ಅಂತಹವರ ಬಾಯಿ ಮುಚ್ಚಿಸುವಲ್ಲಿ ನಿಮ್ಮ ಸಲಹೆ ಏನು?

ಉ. : ಅದು ಮೂರ್ಖರ ಮಾತು. ಇಂತಹ ಪವಿತ್ರ ಕೆಲಸ ಅವರಿಗೆ ಸಿಗಲಿಲ್ಲವಲ್ಲ, ಅದಕ್ಕೆ ಹಾಗೆ ನಾಲಗೆ ಚಾಚುತ್ತಾರೆ. ಅಂತಹವರ ಮಾತಿನ ಕುರಿತು ಉದಾಸೀನ ಮಾಡಿದರಾಯಿತು.

ಪ್ರ.: ನಿಮ್ಮ ಮುಂದಿನ ಗುರಿ?

ಉ. : ಎಂ.ಇಡಿ. ಪದವಿ ಪಡೆಯಬೇಕೆಂದಿದ್ದೇನೆ.

20ನೇ ಪುಟಕ್ಕೆ

# 'ಮಡಿಕೇರಿ ಕೋಟೆ ನನ್ನದು' : ಮೈಸೂರಿನ ಪ್ರಜೆಯೊಬ್ಬರಿಂದ ತಕರಾರು

ಕೊಡಗಿನ ರಾಜಧಾನಿ ಮಡಿಕೇರಿಯಲ್ಲಿರುವ ಕೋಟೆ ಮತ್ತು ಅರಮನೆಗೆ ತಾವೇ ವಾರಸುದಾರರು ಎಂದು ವ್ಯಕ್ತಿಯೊಬ್ಬರು ಹೇಳಿಕೊಂಡು, ಮುಂದೆ ಬಂದಿರುವ ಪ್ರಕರಣ ವರದಿಯಾಗಿದೆ.

ಪ್ರಸಕ್ತ ಮೈಸೂರಿನ ಶಿವರಾಂಪೇಟೆಯಲ್ಲಿರುವ 'ಸದಾನಂದ ಹಿಟ್ಟಿನ ಅಂಗಡಿ'ಯ ಮಾಲೀಕರಾದ ಸಿ. ನಾಗರಾಜ್ ಎಂಬುವರೇ ಆ ವ್ಯಕ್ತಿಯಾಗಿದ್ದಾರೆ.

೧೮೩೪ರಲ್ಲಿ ಕೊಡಗಿನ ರಾಜರಾಗಿದ್ದ ಚಿಕ್ಕವೀರರಾಜೇಂದ್ರರನ್ನು ಬ್ರಿಟಿಷರು ಸೋಲಿಸಿ, ಸೆರೆಹಿಡಿದಾಗ, ತಮ್ಮ ಮುತ್ತಜ್ಜ ಮಲ್ಲಪ್ಪ ಗೌಡರು ಮಡಿಕೇರಿಯ ಪಾಳೇಗಾರರಾಗಿದ್ದು, ತಮ್ಮ ಪೂರ್ವಜರು ಮಡಿಕೇರಿ ಅರಮನೆ ಮತ್ತು ಕೋಟೆಯಲ್ಲಿಯೇ ವಾಸವಾಗಿದ್ದರೆಂದು ನಾಗರಾಜ್ ವಾದಿಸುತ್ತಿದ್ದಾರೆ.

ಚಿಕ್ಕವೀರರಾಜೇಂದ್ರ ಮತ್ತು ಮಲ್ಲಪ್ಪಗೌಡ ('ಗೌಡ' ಎಂಬುದು ಊರ ಮುಖಂಡರಿಗೆ ಬಳಸುವ ಸಾಮಾನ್ಯ ಪದ) ಈರ್ವರೂ ವೀರಶೈವರಾಗಿದ್ದು, ಇಬ್ಬರಿಗೂ ಉತ್ತಮ ಸಂಪರ್ಕವಿತ್ತು. ಚಿಕ್ಕವೀರರಾಜೇಂದ್ರರನ್ನು ಬ್ರಿಟಿಷ್ ಸೆರೆಹಿಡಿದು, ಕರೆದೊಯ್ಯುವ ಸಂದರ್ಭದಲ್ಲಿ, ತನ್ನೆಲ್ಲಾ ನಾಗಭರಣಗಳನ್ನೂ ಆಲದಮರವೊಂದರಲ್ಲಿ ಅವಿತಿಟ್ಟಿರುವುದಾಗಿಯೂ, ಅದನ್ನು ನೀನೇ ತೆಗೆದುಕೊಳ್ಳಬೇಕೆಂದು ರಾಜೇಂದ್ರ ಹೇಳಿ, 'ನೀವೇ ಹೋಗುವಾಗ, ಅದನ್ನು ಕಟ್ಟಿಕೊಂಡು ನನಗೇನಾಗಬೇಕು ಸ್ವಾಮಿ' ಎಂದು ಮಲ್ಲಪ್ಪ ತಿಳಿಸಿದರು. ಚಿಕ್ಕವೀರರಾಜೇಂದ್ರರ ನಂತರ ಕೊಡಗಿನ ಸಿಂಹಾಸನಕ್ಕೆ ತಾನೆ ಉತ್ತರಾಧಿಕಾರಿಯೆಂದು ಘೋಷಿಸಿ, ಗೆರಿಲ್ಲಾ ಹೋರಾಟ ನಡೆಸಿದ ಸ್ವಾಮಿ ಅಪರಾಂಪರರೊಡನೆಯೂ ಮಲ್ಲಪ್ಪರಿಗೆ ಒಡನಾಟವಿತ್ತು ಎಂದು ಹೇಳಲಾಗಿದೆ.

ಇದೇ ಮಲ್ಲಪ್ಪಗೌಡರನ್ನು ಬ್ರಿಟಿಷರು ಬಂಧಿಸಿ ೨೫ ವರ್ಷಗಳ ಕಾಲ ಸೆರೆವಾಸದಲ್ಲಿರಿಸಿದ್ದರು. ಚಿಕ್ಕವೀರಾರಾಜೇಂದ್ರರ ವಿರುದ್ಧ ಬ್ರಿಟಿಷರು ಧಾಳಿ ಮಾಡುತ್ತಿದ್ದಾಗ, ಮಡಿಕೇರಿ ಕೋಟೆ ಮೇಲೆ ರಾಜರ ಬಾವುಟ ಹಾರಿಸಿದ್ದಕ್ಕೆ ಮಲ್ಲಪ್ಪರನ್ನು ಬ್ರಿಟಿಷರು ಬಂಧಿಸಿದರೆಂದು ಹೇಳಲಾಗಿದೆ. ತಮ್ಮ ಮನೆಯೊಂದರಲ್ಲಿ ಚಿಕ್ಕವೀರರಾಜೇಂದ್ರರನ್ನು ಅವಿತಿಟ್ಟು, ಆಶ್ರಯಕೊಟ್ಟ ಕಾರಣದ ಮೇಲೆ ಬ್ರಿಟಿಷರು ಮಲ್ಲಪ್ಪರನ್ನು ಬಂಧಿಸಿದರೆಂದು ಮತ್ತೊಂದು ಕಥೆಯಾಗಿದೆ.

ತಲೆಮರೆಸಿಕೊಂಡು ಓಡಾಡುತ್ತಿದ್ದ ಚಿಕ್ಕವೀರರಾಜೇಂದ್ರರನ್ನು ಪತ್ತೆ ಮಾಡಲು, ಜಂಗಮ ವೇಷದಲ್ಲಿ ಒಬ್ಬಾತನನ್ನು ಮಲ್ಲಪ್ಪರ ಮನೆಗೆ ಭಿಕ್ಷೆ ಕೇಳಲು ಕಳುಹಿಸಲಾಯಿತು. ತಮ್ಮ ಮನೆಗೆ ಭಿಕ್ಷೆ ಕೇಳಬರುವ ಜಂಗಮರಿಗೆ ಎಂತಹುದೇ ಸಂದರ್ಭವಾಗಿದ್ದರೂ, ಖುದ್ದು ತಾನೇ ಬಂದು ಭಿಕ್ಷೆ ಹಾಕುವ ಪರಿಪಾಠ ಹೊಂದಿದ್ದ ರಾಜೇಂದ್ರರೇ ಮಲ್ಲಪ್ಪರ ಮನೆಯಿಂದ ಹೊರಬರಲು, ಬ್ರಿಟಿಷರು ಅವರನ್ನು ಬಂಧಿಸಿದರೆಂದು ನಾಗರಾಜ್ ಹೇಳುತ್ತಾರೆ.

ಮಲ್ಲಪ್ಪರು 'ಸರ್ಕಾರಿ ಕೂಳನ್ನು' ತಿನ್ನಲು ಒಪ್ಪದೇ ಇದ್ದುದರಿಂದ, ಅವರಿಗೆ ಮನೆ ಊಟವೇ ಬರುತ್ತಿತ್ತು. ಈ ಆಧಾರದ ಮೇಲೆ, ಅವರು ಮಡಿಕೇರಿಯ ಜೈಲಿನಲ್ಲಿಯೇ ಇದ್ದರೆನ್ನಬಹುದು. ಜೈಲಿನಿಂದ ಬಿಡುಗಡೆಯಾದ ನಂತರ, ಅವರ ಮನೆಗೆಲಸಗಾರನಾಗಿದ್ದ 'ಗೆಂಡೆ' ಎಂಬಾತನಿಗೆ ಕೋಟೆ ಮತ್ತು ಅರಮನೆಯನ್ನು ನೋಡಿಕೊಳ್ಳಲು ಹೇಳಿ ತಮ್ಮ ಸಂಬಂಧಿಕರು ಹೆಚ್ಚಾಗಿದ್ದ ಪಿರಿಯಾಪಟ್ಟಣಕ್ಕೆ ಬಂದು 'ಜೋಡಕ್ಕಿ ಬಯಲು' ಎಂಬಲ್ಲಿ ನೆಲೆಸಿದರು (ಇದೇ ಪಿರಿಯಾಪಟ್ಟದಲ್ಲಿ ದೊಡ್ಡವೀರರಾಜೇಂದ್ರರನ್ನು ಒಮ್ಮೆ ಹೈದರಾಲಿ ಬಂಧಿಸಿದ್ದನು)

ಮಲ್ಲಪ್ಪಗೌಡರ ಪುತ್ರ 'ಹಳ್ಳಿ ಮಲ್ಲಣ್ಣ' ಪಿರಿಯಾಪಟ್ಟಣದಲ್ಲಿಯೇ ನೆಲೆಸಿದರಾದರೂ, ಅವರ ಪುತ್ರ ಪಿ.ಎಂ. ಚಿನ್ನಣ್ಣ ಮೈಸೂರಿಗೆ ಬಂದು, ಶಿವರಾಂಪೇಟೆಯಲ್ಲಿ ನೆಲೆಸಿದರು. ಚಿನ್ನಣ್ಣರವರಿಗೆ ಮೂವರು ಪುತ್ರರಿದ್ದು, ಸಿ. ನಾಗರಾಜ್ ಮೂರನೆಯವರಾಗಿದ್ದಾರೆ. ನಂಜನಗೂಡಿನ ಹುಲ್ಲಹಳ್ಳಿಯಲ್ಲಿರುವ ಸಿ. ಶಿವರುದ್ರಪ್ಪ ಮೊದಲನೆಯ ಮತ್ತು ಮೈಸೂರಿನಲ್ಲಿಯೇ ಪಾಲಿಥಿನ್ ಪೇಪರ್ ಪ್ರಿಂಟ್ ಮಾಡುವ ಕಾರ್ಖಾನೆ ಹೊಂದಿದ್ದ ಸಿ. ಸುಬ್ಬರಾಯಪ್ಪ ಎರಡನೆಯ ಪುತ್ರರಾಗಿದ್ದಾರೆ.

ಮೇಲೆ ನೀಡಿರುವ ವಿವರಣೆಗಳನ್ನೆಲ್ಲಾ ನಾಗರಾಜ್‌ರೇ 'ಮೈಸೂರು ಮಿತ್ರ'ನಿಗೆ ಒದಗಿಸಿದ್ದು, ಇದನ್ನು ತಮ್ಮ ತಾತ ತಮ್ಮ ತಂದೆಗೂ, ತಮ್ಮ ತಂದೆ ತಮಗೂ ತಿಳಿಸುತ್ತಿದ್ದುದಾಗಿ ಹೇಳಿದ್ದಾರೆ.

ತಾವು ರಾಜಮನೆತನಕ್ಕೆ ಸೇರಿದವರೆಂಬುದಕ್ಕೆ ಪುರಾವೆಯಾಗಿ ತಮ್ಮ ಮನೆಯಲ್ಲಿ ಆ ಕಾಲದ ಈಟಿಯೊಂದಿದೆ ಎನ್ನುವ ನಾಗರಾಜ್, ಕೆಲವು ವರ್ಷಗಳ ಹಿಂದಿನವರೆಗೂ ತಾಳೆಗರಿಯ ಪುಸ್ತಕವೊಂದು ತಮ್ಮ ಮನೆಯಲ್ಲಿತ್ತು. ಅದನ್ನು ದಸರಾ ಸಮಯದಲ್ಲಿ ಮಾತ್ರ ಅಟ್ಟದಿಂದ ಕೆಳಗಿರಿಸಿ, ಪೂಜೆ ಮಾಡಿ, ಮತ್ತೆ ಅಟ್ಟದಲ್ಲಿಯೇ ಇಡಲಾಗುತ್ತಿತ್ತು. ಕಾಲಕ್ರಮೇಣ ಅದಕ್ಕೆ ಗೆದ್ದಲು ಹಿಡಿದಿದ್ದರಿಂದ, ಅದು ಚಿಂದಿಚಿಂದಿಯಾದ ಪರಿಣಾಮ ಒಲೆಗೆ ಹಾಕಲಾಯಿತು ಎಂದರು.

ಪೂರ್ವಜರ ಸ್ವತ್ತಾಗಿ ತಮ್ಮ ಬಳಿ ಹಲವಾರು ಕತ್ತಿ, ಗುರಾಣಿ, ಭರ್ಜಿ ಇತ್ಯಾದಿ ಇತ್ತು. ಆದರೆ ಅವುಗಳನ್ನು ಈಗಿರುವ ಮನೆಯ ಕೆಳಗಡೆ ಯಾವುದೋ ಒಂದು ಭಾಗದಲ್ಲಿ ಹೂಳಲಾಗಿದೆ ಎಂದೂ ಅವರು ಹೇಳಿದರು.

ಕರ್ನಾಟಕ ಸರ್ಕಾರದ ಪತ್ರಾಗಾರ ಇಲಾಖೆಯು ಹೊರಡಿಸುವ ತ್ರೈಮಾಸಿಕ 'ಪತ್ರಾಗಾರ ವಾರ್ತಾ'ದ ಸಂಪುಟ (ನಂ. ೨ ಮತ್ತು ೩), ೧೯೮೩ರ ಪುಟ ನಂ. ೫೦ರಲ್ಲಿ ಜೆ. ವಿ. ಗಾಯತ್ರಿ (ಅಸಿಸ್ಟೆಂಟ್ ಆರ್ಕಿವಿಸ್ಟ್) ಎಂಬುವವರು ಬರೆದಿರುವ 'ಕೊಡಗು ಹಕ್ಕುದಾರರು' ಅಷ್ಟಾಗ್ರಾಮ ದಾಖಲಾತಿಗಳಿಂದ (೧೮೩೫-೩೭) ಒಂದು ಅಧ್ಯಯನ' ಎಂಬ ಸಂಶೋಧನಾ ಪ್ರಬಂಧದಲ್ಲಿ 'ಮಲ್ಲಪ್ಪ ಗೌಡರ'ಹೆಸರು ಉಲ್ಲೇಖವಾಗಿದೆ.

"೧೮೩೪ರಲ್ಲಿ ಚಿಕ್ಕವೀರರಾಜೇಂದ್ರರ ನಂತರ ಕೊಡಗು ಸಿಂಹಾಸನಕ್ಕೆ ಅಪರಾಂಪರ ಸ್ವಾಮಿ ಹಕ್ಕು ಕೇಳುವ ಪ್ರಕರಣಕ್ಕೆ ಸಂಬಂಧಿಸಿದಂತೆ, ತನ್ನ ಹೋರಾಟಕ್ಕೆ ಬೆಂಬಲ ಗಳಿಸಲು

ಮಂಗಳೂರಿಗೆ ಪರಾರಿಯಾಗಿದ್ದ ಅಪರಾಂಪರ ಸ್ವಾಮಿ ಮರ್ಕೆರಾ (ಮಡಿಕೇರಿ)ಗೆ ೧೮೩೭ರಲ್ಲಿ ಹಿಂತಿರುಗಿದನು. "ಆತ ಮಡಿಕೇರಿಗೆ ಹೋದಾಗ ಹೈದರಾಬಾದ್‌ನ ಇಬ್ಬರು ವ್ಯಕ್ತಿಗಳು ಆತನನ್ನು ಭೇಟಿ ಮಾಡಿದರು. ಆತನನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಆತ 'ಮಲ್ಲಪ್ಪಗೌಡ'ರ ಮನೆಯಲ್ಲಿದ್ದನು".

(According to the "Patragara Vartha", the quarterly bulletin of Karnataka State Archives Vol. I, 1983 (No. 2 & 3), Page no 50, there is a reference to Mallappagowda.

"Relating the incident relating the claims of Aparampara Swamy to the throne of Kodagu after Chikkaveerarajendra in 1834, it is stated that in 1837, this Aparampara Swamy who had escaped to Mangalore to seek support returned to Mercara and "when he went to Merkerra, two of the Hyderabad men had visited him and during the time, he was at "Mallappah Gowdah's house".

ಕೊಡಗು ಸಿಂಹಾಸನದ ಉತ್ತರಾಧಿಕಾರಿಗಳಿಗೆ ಅಥವಾ ಕೊಡಗು ರಾಜಮನೆತನಕ್ಕೆ ಮಲ್ಲಪ್ಪಗೌಡರ ಸಂಬಂಧ ಕಲ್ಪಿಸುವ ಪ್ರಾಯಶಃ ಏಕೈಕ ದಾಖಲಾರ್ಹ ರುಜುವಾತು ಇದಾಗಿದೆ.

ಈ ಸಂಬಂಧ ಲಂಡನ್‌ನ ಪತ್ರಾಗಾರ ಇಲಾಖೆಗೆ ಪತ್ರ ಬರೆದು, ಅವಶ್ಯಕ ದಾಖಲೆಗಳಿದ್ದರೆ ಕಳುಹಿಸಿಕೊಡಬೇಕೆಂದು ಕೋರಲಾಗಿದೆ ಎಂದೂ ನಾಗರಾಜ್ ತಿಳಿಸಿದ್ದಾರೆ.

ಹುಟ್ಟಿ ಬೆಳೆದು ಈಗಲೂ ವಾಸ್ತವ್ಯವಿರುವ ಮೈಸೂರು ಅರಮನೆಯನ್ನೇ ತಮ್ಮದಾಗಿಸಿಕೊಳ್ಳಲು ಅಹರ್ನಿಶಿ ಪ್ರಯತ್ನ ನಡೆಸುತ್ತಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರ ನಿದರ್ಶನ ಕಣ್ಮುಂದೆಯೇ ಇರಬೇಕಾದರೆ, ತಾನು ಟಿಪ್ಪು ಸುಲ್ತಾನ್ ವಂಶಸ್ಥನೆಂದೂ ಆತನ ಆಸ್ತಿಪಾಸ್ತಿಯೆಲ್ಲಾ ತನಗೆ ಸೇರಬೇಕೆಂದು ದೂರದ ಬಂಗಾಳದಿಂದ ಬಂದ ಆತನ ವಂಶಸ್ಥ ಸರ್ಕಾರದ ತಾತ್ಸಾರಕ್ಕೊಳಗಾಗಿ, ಬಂದ ವೇಗದಲ್ಲಿಯೇ ಹಿಂತಿರುಗಿ ಹೋದ ಘಟನೆ ನೆನಪಿನಂಗಳದಲ್ಲಿ ಉಳಿದಿರುವಾಗ, ಶತಮಾನಗಳ ಹಿಂದೆಯೇ ಕಳೆದುಕೊಂಡಿರುವ 'ಮಡಿಕೇರಿ ಕೋಟೆ' ಗಿಟ್ಟಿಸಲು ನಾಗರಾಜ್ ಸಫಲರಾಗುವರೇ? ಎಂಬುದೇ ದೊಡ್ಡ ಪ್ರಶ್ನೆಯಾಗಿದೆ.

**ಕೃಪೆ : ಮೈಸೂರು ಮಿತ್ರ : ಕೆಎಂಎಂ**

---

## ಗೃಹ ಪ್ರವೇಶ

**ಶ್ರೀಮತಿ ಮತ್ತು ಶ್ರೀ ಕುದುಕುಳಿ ಜನಾರ್ಧನನವರ** ನೂತನ ಮನೆಯ ಗೃಹಪ್ರವೇಶವು ದಿನಾಂಕ 12-12-1999 ರಂದು ಬೆಂಗಳೂರಿನ ಹೊಸೂರು ರಸ್ತೆಯಲ್ಲಿರುವ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾದಲ್ಲಿ ನೆರವೇರಿತು.

## ಜಸ್ಟ್ ಮಿಸ್ಸ್

ನಮ್ಮ ಮ್ಯಾಗಡೆ ಮನೆ ಮೊಟತ್ತೆಗೆ ಹಾಟ್ ಅಟ್ಯಾಕ್ ಆಕಾಕನ ಅವರ್ನ ಇಮ್ಮಿಡಿಯೆಟ್ ಆಗಿ ಆಸ್ಪತ್ರೆಗೆ ಕರ್ಕಂಡ್ ಹೋಗಿ ಸೇರ್ಸಿದೊ. ಆಪರೇಷನ್ ಟೇಬಲ್ ಮೇಲೆ ಅವು ಮಲ್ಗಿಧ್ಯಾಕನ ಸತ್ತ್ ಬದ್‌ಕಿದವು ! ಸತ್ತ್ ದೇವರ ಹತ್ರ ಹೋಗಿ ಮೊಟತ್ತೆ "ನನ್ ಕತೆ ಇಷ್ಟೇನಾ ದೇವ್ರೇ?" ತ ಕೇಳ್‌ಕಾಕನ ದೇವ್ರ್ ಅವ್ಕೆ ಹೇಳ್ತ್‌ಗಡ - "ಛೆ... ಛೆ... ನಿನ್ನ ಆಯುಷ್ಯ ಮುಗ್ತ್‌ಲೆ ನೀನ್ ಭೂಲೋಕಲಿ ಇನ್ನೂ ಸರಿಯಾಗಿ 33 ವರ್ಷ, 2 ತಿಂಗ ಮತ್ತೆ 8 ದಿನ ಬದುಕುವ ಯೋಗ ಉಟ್ಟು". ಇದ್ನ ಕೇಳಿ ಮೊಟತ್ತೆಗೆ ಬಾರಿ ಖುಷಿಯಾಗಿ ಅವು ಉಷಾರಾದ ಮೇಲೂನೂ ಒಂದ್ ವಾರ ಆಸ್ಪತ್ರೇಲೆ ಕಾಲ ಕಳ್ತ್. ಆ ಒಂದ್ ವಾರಲಿ ಅವು ಇಂತದ್ ಮಾಡ್ತ್‌ಲೆತ ಇಲ್ಲೆ. ಮುಖನ ಬ್ಲೀಚ್ ಮಾಡಿಸಿಕಂಡೊ; ಐಬ್ರೋನ ಶೇಪ್ ಮಾಡಿಸಿದೊ, ಮೂಗ್‌ನ ಪ್ಲಾಸ್ಟಿಕ್ ಸರ್ಜರಿ ಮಾಡಿಸಿದೊ, ಹೊಸ ಹಲ್ಲ್‌ನ ಕಟ್ಟಿಸಿದೊ; ಉಬ್ಬಿದ ಹೊಟ್ಟೆನ ತಗ್ಗ್‌ಸಿ, ಬಗ್ಗಿದ ಎದೆನ ಎತ್ತ್‌ಸಿದೊ. ಹೆಂಗಿದ್ರೂ ಧೈರ್ಯಲಿ ಇನ್ನೂ 33 ವರ್ಷ ಬದ್‌ಕಿನೆತೇಳುವ ಆಸೆಂದ ಕೂದಲು ಸಹ ಕಲರ್ ಮಾಡಿಸಿ ಕಂಡೊ.

ವಾರ ಕಳ್ದ ಮೇಲೆ ಹೊಸ ಮನ್‌ಷ್ಯಳಾಗಿ ಜುಂಮ್‌ತ ಖುಷೀಲಿ ಆಸ್ಪತ್ರೆಂದ ಹೊರಗೆ ಕಾಲ್ ಮಡ್ಗ್‌ಕಾಕನ ಆಕಡೆಂದ ರ್‍ಯಂಯತ ಬಂದ ಆಂಬುಲೆನ್ಸ್ ಅವ್ಕೆ ಡಿಕ್ಕಿ ಹೊಡ್ದ್ ಅವು ನಾಲ್ಕು ಪಲ್ಟಿ ಹೊಡ್ದ್ ಸ್ಪಾಟ್‌ಲಿ ಸತ್ತ್‌ಹೋಗಿ ದೇವ್ರ ಹತ್ರ ಹೋದೊ.

"ದೇವ್ರೇ.... ಎಂತ ಆತ್? ನೀನ್ ನಂಗೆ ಇನ್ನೂ 33ವರ್ಷ ಆಯಸ್ಸ್ ಉಟ್ಟ್‌ತ ಅಲ ಹೇಳ್ದ್?!" ತೇಳಿ ಮೊಟತ್ತೆ ಆಶ್ಚರ್ಯಲಿ ಕೇಳ್ಕ್‌ಕನ ದೇವ್ರು "ಅಯ್ಯೋ....... ಸಾರಿ...... ನಂಗೆ ನಿನ್ನ ಗುರ್ತೇ ಸಿಕ್ತ್‌ಲೆ" ತೇಳಿಬುಟ್ಟತ್ ಗಡ

**ಎಡಿಕೇರಿ ಸುದರ್ಶನ್**
**ಬೆಂಗಳೂರು**

---

**11ನೇ ಪುಟದಿಂದ**

ಕಣ್ಣ್‌ಲೇ ಕರ್ದ್ ಒಳಗೆ ಕರ್‌ಕಂಡ್ ಹೊರಟತ್. ಹಂಗೇ ಹೋಕಾಕನ ತಂಗೆ ಹೇಳ್ತ್ ಅಣ್ಣಯ್ಯ ನೆಂಟ್ರ್‌ಗ ಬಂದಿದ್ದೊ. ಎಲ್ಲಾ ನೋಡಿ ಮಾತಾಡಿಕಂಡ್ ಹೋಗೊಳೊ. ನೀನ್ ಬಂದಿಯತ್ತೇಳಿ ನಿಂಗೋಸ್ಕರ ತುಂಬಾ ಹೊತ್ತ್ ಕಾದಿದ್ದೊ. ಹುಡುಗ ನೋಡಿಕೆ ಒಳ್ಳೆ ಪೊರ್ಲ್ ಉಟ್ಟ್. ಬ್ಯಾಂಕ್‌ಲಿ ಜಾಬ್‌ಲಿ ಉಟ್ಟ್‌ಗಡ ಆದ್ರೇ ಅವುಕೆ ಒಂದ್ ಲಕ್ಷ ವರದಕ್ಷಿಣೆ ಬೇಕ್‌ಗಡ. ನಿಂದ್ ಯಾಗೋಳು ಒಂದೇ ತರದ ಹುಡ್‌ಗಾಟ. ಪಪ್ಪಂಗೆ ನನ್ನ ಮೇಲೆ ತುಂಬ ಸಿಟ್ಟ್ ಬಂದುಟ್ಟು. ಎಲ್ಲವೂ ಸ ಮಾತಾಡಿಕಂಡ್ ಮನೆ ಮೆಟ್ಲ್ ಹತ್ತಿಕಾಕನ ಒಳಗೆಂದ ಭೋಜಪಜ್ಜ ಮುಖನ ಕೆಂಪ್ ಮಾಡಿಕಂಡ್ ದಪ್ಪದ ಬೆತ್ತದ ದೊಣ್ಣೆನ ಹಿಡ್‌ಕಂಡ್ ಕೊಂಬರೆ ಒಳಗಿಂದ ಕೈಯಲೆಗೆ ಪ್ರತ್ಯಕವಾದೊ.

**(ಮುಂದ್‌ವರ್ದದೆ)**

**ಶಂಕರನ ಮುತ್ತಪ್ಪ ಬಸಪ್ಪ**

# ಆತ್ಮಹತ್ಯೆ : ಒಂದು ಚಿಂತನೆ

ಬದುಕನ್ನು ಎದುರಿಸುವ ವ್ಯಕ್ತಿ ತಿಳಿಯಬೇಕಾದ ಮೊದಲ ವಿಷಯವೆಂದರೆ, ಜೀವನವೆಂಬುದು ಹುಟ್ಟೂ ಅಲ್ಲ, ಸಾವೂ ಅಲ್ಲ, ಇವೆರಡರ ನಡುವಿನ ದೀರ್ಘ ಬಂಧನ. (ಪ್ರತಿಯೊಂದು ಜೀವಿಯೂ ಕಷ್ಟ ನೋವನ್ನು ಅನುಭವಿಸಲೇಬೇಕು. ಇದು ದೈವ ಸಿದ್ಧಾಂತ, ಪ್ರಕೃತಿ ನಿಯಮ. ಆದರೆ, ಸಹಿಸಲೇಬೇಕು ಎನ್ನುವ ನಿಯಮ ಇಲ್ಲ. ಕಾರಣ ಕಷ್ಟಗಳನ್ನು ಸಹಿಸಲಾಗದೇ, ಎದುರಿಸುವ ಶಕ್ತಿಯಿಲ್ಲದೇ ಜೀವನದಿಂದ ವಿಮುಖರಾಗಬಹುದಲ್ಲಾ ಇದೇ ಆತ್ಮಹತ್ಯೆ.(Suicide)

ಪ್ರಸ್ತುತ ನಮ್ಮ ಸಮಾಜದಲ್ಲಿ ದಿನ ದಿನಕ್ಕೂ ಹೆಚ್ಚುತ್ತಿರುವ ಆತ್ಮಹತ್ಯೆ ಪ್ರಸಂಗಗಳು ಮಾನವನ ಸಂಕುಚಿತ ಮನೋಭಾವವನ್ನು ಎತ್ತಿ ತೋರಿಸುತ್ತೆದೆ. ಪ್ರಪಂಚವನ್ನು ವಿಶಾಲವಾಗಿ ಅವಲೋಕಿಸಿದರೆ, ಇಂತಹ ಆಲೋಚನೆ ಖಂಡಿತಾ ನುಸುಳದು. 'ಆಸೆಯೇ ದುಃಖಕ್ಕೆ ಮೂಲ, ದುಃಖವೇ ಆತ್ಮಹತ್ಯೆಯ ಮೂಲ". ಮನುಷ್ಯನ ಯಾವುದೇ ಒಂದು ಜೀವನಸ್ಥಿತಿಯನ್ನು ಇತರರಿಗೆ ಹೋಲಿಸಿದಾಗ ಕಂಡು ಬರುವ ಏರು ಪೇರೇ ಮಾನವನ ದುಃಖಕ್ಕೆ ಕಾರಣವಾಗುತ್ತದೆ. ಜೀವನವೆಂಬುದು ಒಂದು ವಿಶಾಲ ಸಂತೆಯೆಂದು ಭಾವಿಸೋಣ. ಸಂತೆಯಲ್ಲಿರುವ ಎಲ್ಲಾ ವಸ್ತುಗಳು ತನಗೇ ಬೇಕೆಂದು ಬಯಸುವುದು ಸ್ವಾರ್ಥ, ದುರಾಸೆ. ಹಾಗೆಯೇ ಜೀವನದ ಎಲ್ಲಾ ವಸ್ತುಗಳು ನಮಗಾಗಿಯೇ ಇಲ್ಲ. ಜೀವನದ ವಸ್ತುಗಳೆಂದರೆ, ಐಶ್ವರ್ಯ, ಸುಖ, ಆರೋಗ್ಯ, ವಿದ್ಯೆ ಇತ್ಯಾದಿ ಇತ್ಯಾದಿ. ಇವುಗಳಲ್ಲಿ ಕೆಲವು ನಮಗೆ, ಕೆಲವು ಪರರಿಗೆ, ಕೆಲವು ನೋಟಕ್ಕೆ ಮಾತ್ರ ನಮಗೆ, ಕೆಲವಲ್ಲಿ ಕೆಲವನ್ನು ಅನುಭವಿಸುವ ಸ್ವಾತಂತ್ರ್ಯ ನಮಗೆ, ಹೀಗೆ.

ಜೀವನ ಎಂದರೇನು ಎಂಬ ಪ್ರಶ್ನೆಗೆ, ನಮ್ಮ ಅನುಭವದ ಮೂಲಕ ನಾವೇ ಉತ್ತರ ಕಂಡುಕೊಳ್ಳಬೇಕೇ ಹೊರತು ಇನ್ನೊಬ್ಬರಿಂದಲ್ಲ ಹೀಗೆಂದ ಮಾತ್ರಕ್ಕೆ ಪರರ ಜೀವನದ ಅನುಭವಗಳು ಅನಗತ್ಯ ಎಂಬ ಅರ್ಥವಲ್ಲ. ಬಾಳಿನ ಮರ್ಮವನ್ನರಿಯಲು ಕೊನೆಯವರೆಗೆ ಬಾಳಿ ಬದುಕಬೇಕು. (ಸಹಜ - ಸಾವನ್ನು ಹೊರತುಪಡಿಸಿ) ಪ್ರಪಂಚದಲ್ಲಿ ಎಷ್ಟು ಬಗೆಯ ಜೀವ (ಜೀವಿ) ಇದೆಯೋ, ಅಷ್ಟು ಬಗೆಯ ಜೀವನವಿದೆ. ಉದಾಹರಣೆಗೆ, ನಮ್ಮ ದೇಶದಲ್ಲೇ 100 ಕೋಟಿ ಮಾನವ ಜೀವ ಇದೆಯೆಂದಾದರೆ, ಅಷ್ಟೇ ಬಗೆಯ ಮುಖ ಚಹರೆಗಳಿವೆ. ಪ್ರತಿಯೊಬ್ಬರ ಮುಖಗಳಲ್ಲಿರುವುದೂ ಕಣ್ಣು, ಮೂಗು, ಬಾಯಿ, ಹಣೆಯೇ ಆದರೂ, ಒಬ್ಬರಂತೆ ಒಬ್ಬರಿಲ್ಲ. ಎಲ್ಲೋ ಅಪರೂಪಕ್ಕೊಮ್ಮೆ ಒಂದೇ ಲಕ್ಷಣವನ್ನು ಕಾಣಬಹುದಾದರೂ 'ಎ ಟು ಜಡ್' ಸಾಮ್ಯತೆ ಕಾಣಲು ಸಾಧ್ಯವಿಲ್ಲ. ಹಾಗೆಯೇ, ಜೀವನದಲ್ಲಿ ಕೆಲವು ಘಟನೆಗಳು, ಪರಿಸ್ಥಿತಿಗಳಲ್ಲಿ ಹೋಲಿಕೆ ಇರಬಹುದಾದರೂ ಪೂರ್ಣಸ್ಥಿತಿ ಒಂದೇ ಆಗಲು ಸಾಧ್ಯವಿಲ್ಲ. ಆದ್ದರಿಂದ ಜೀವನದಿಂದ ವಿಮುಖರಾಗದೆ ಬದುಕಿನ ಸ್ವಾರಸ್ಯವನ್ನು ಸ್ವತಃ ಅನುಭವಿಸಬೇಕು. ಈ ಮೂಲಕ ಪ್ರಪಂಚದ ಕೋಟ್ಯಾಂತರ ಬಗೆಯ ಜೀವನಕ್ಕೆ ಮತ್ತೊಂದು ಬಗೆಯನ್ನು ಸೇರಿಸಿದಂತಾಗುವುದು.

ಬದುಕಿನ ಹೀನಾಯ ಪರಿಸ್ಥಿತಿ ಆತ್ಮಹತ್ಯೆಗೆ ಪ್ರೇರಣೆ ನೀಡಬಹುದಾದರೂ, ಸಾವಿನ ಬಗ್ಗೆ ಭಯ, ಭೀತಿ ಉಂಟಾಗುವುದು ಸಹಜ. ಈ ಬದುಕು ಕೊನೆಗಾಣುತ್ತಿದೆಯಲ್ಲಾ ಎಂಬ ಭೀತಿ ಒಂದೆಡೆಯಾದರೆ, ಸಾವಿನ ಆಚೆಗೆ ಏನಿದೆಯೋ, ಏನಾದಿತೋ ಎಂಬುದು ಮತ್ತೊಂದು ಬಗೆಯ ಭೀತಿ. ಈ ಪರಿಚಿತ ಜಗತ್ತಿನಿಂದ ದೂರವಾದ ಮೇಲೆ ಇನ್ಯಾವ ಅಪರಿಚಿತ ಜಗತ್ತು ಸೇರುವೆನೋ ಎಂಬ ಭಯ. ಇಷ್ಟಕ್ಕೂ ಸಾವಿನ ನಂತರದ ಬದುಕು ಪ್ರಸ್ತುತ ಬದುಕಿಗಿಂತ ಸುಖಕರವಾಗಿಯೇ ಇರುತ್ತದೆ ಎನ್ನುವುದು ಏನು ಗ್ಯಾರಂಟಿ? ಸಾವಿನ ನಂತರ ಬೇರೆ ಬದುಕಿಲ್ಲ, ಪುನರ್ಜನ್ಮ ಎಂಬುದು ಇಲ್ಲವೇ ಇಲ್ಲ ಎಂದು ನಂಬುವವರಿಗೆ ಈ ಮೇಲಿನ ಮಾತುಗಳು ಅನ್ವಯವಾಗುವುದಿಲ್ಲ. ಆದರೂ ಆತ್ಮಹತ್ಯೆ ಮಾಡಿಕೊಳ್ಳದಿರುವುದೇ ಜಾಣತನ ಯಾಕೆಂದರೆ, ಸಾವಿನ ನಂತರ ಪುನರ್ಜನ್ಮ ಉಂಟೋ ಇಲ್ಲವೋ ಎಂಬುದು ಬದುಕಿರುವ ಯಾರಿಗೂ ನಿಶ್ಚಿತವಾಗಿ ಗೊತ್ತಿಲ್ಲ. ಒಂದು ವೇಳೆ ಪುನರ್ಜನ್ಮ ಇದೆ ಎಂಬುದೇ ಸತ್ಯವಾದರೆ ?!

ಬೈಬಲ್‌ನ ಒಂದು ತುಣುಕು ಹೀಗೆ ಹೇಳುತ್ತದೆ, "ಆತ್ಮಹತ್ಯೆ ಮಾಡಿಕೊಂಡವನಿಗೆ ಏಳು ಜನ್ಮಗಳ ಪಾಪವೂ, ಆತ್ಮಹತ್ಯೆಯ ಆಲೋಚನೆ ಮಾಡಿದವನಿಗೆ ಎರಡು ಜನ್ಮಗಳ ಪಾಪವೂ ಲಭಿಸುತ್ತದೆ" ಎಂದು.

೧. ಜೀವನದಲ್ಲಿ ಎದುರಾದ ಸಮಸ್ಯೆಗಾಗಿ ಸ್ವತಃ ತಾನೇ ಅನುಭವಿಸುವ ನೋವು ತಾತ್ಕಾಲಿಕ. (ಕಾರಣ ಪ್ರತಿಯೊಂದು ಸಮಸ್ಯೆಗೂ ಪರಿಹಾರವಿದೆ ಎನ್ನುವ ಆಶಾವಾದ ಸಿದ್ಧಾಂತ)

೨. ಆದರೆ, ಜೀವನದ ಸಮಸ್ಯೆ ಎದುರಿಸಲಾಗದೇ, ಆತ್ಮಹತ್ಯೆಗೆ ಬಲಿಯಾಗಿ, ತನ್ನ ಆತ್ಮೀಯ ಬಂಧು ಬಳಗದವರಿಗೆ ಬಿಟ್ಟು ಹೋಗುವ ನೋವು ದೀರ್ಘಕಾಲಿಕ, ಈ ಎರಡರಲ್ಲಿ ಮೊದಲನೆಯದೇ ಸೂಕ್ತವಲ್ಲವೇ? ನೀವೇನನ್ನುತ್ತೀರಿ?

**ಕು. ಕಟ್ರತನ ರಘಾನ್ಸಿ ದೇವಯ್ಯ, ಮೂಡಿಗೆರೆ**

---

**5ನೇ ಪುಟದಿಂದ**

ರೂಮಿನ ಬಾಗಿಲು ತೆರೆಯಿತು !

ಪ್ರಸನ್ನ ಹೊರಗೆ ಬಂದು ಆತುರದಿಂದ ಎಲ್ಲಾ ಕಡೆ ಹುಡುಕಾಡಲಾರಂಭಿಸಿದನು.

ಇಲ್ಲ..... ಯಾರೂ ಕಾಣುತ್ತಿಲ್ಲ !

ತನ್ನ ಕೊಲೆಯ ಪ್ರಯತ್ನ ನಡೆಯಬಹುದೆಂದು ಅರಿತು ಮಂಚದ ಅಡಿಯಲ್ಲಿ ಮಲಗಿದ್ದನು.

ದಿಂಬುಗಳನ್ನು ಜೋಡಿಸಿ, ರಗ್ಗು ಹೊದೆಸಿಟ್ಟನು !

ಪ್ರಸನ್ನನಿಗೆ ಕಣ್ಣಿಗೆ ನೆಲದ ಮೇಲೆ ಏನೋ ಬಿದ್ದಿರುವುದು ಕಂಡಿತು ! ಫಳ ಫಳನೆ ಹೊಳೆಯುತ್ತಿತ್ತು !

ಅದು...... ಅದು..... ಚಿನ್ನದ ಬಳೆ !

ಅದನ್ನು ನೋಡುತ್ತಿರುವಾಗಲೇ ಅಕ್ಕ ಅರುಂಧತಿಯ ಬಳೆ ಎಂದು ಗೊತ್ತಾಗಿ ಹೋಯಿತು !

ಅರುಂಧತಿ ನನ್ನನ್ನು ಸಾಯಿಸಲು ಪ್ರಯತ್ನಿಸಿದ್ದಾಳೆ ! ಇದು ಮೂರನೆಯ ಪ್ರಯತ್ನ !

ಪ್ರಸನ್ನನ ಮುಖದ ಚಹರೆ ಬದಲಾಯಿತು. ಅವನು ಕೋಪದಿಂದ ಮುಷ್ಠಿ ಬಿಗಿದನು !

ಇನ್ನು ನಾನು ಸುಮ್ಮನಿರಲಾರೆ !

ಏನಾದರೂ...... ಏನಾದರೂ ಮಾಡಲೇಬೇಕು...... ಪಾಠ ಕಲಿಸಬೇಕು !

ಪ್ರಸನ್ನ ರಾಕ್ಷಸನಾಗಿದ್ದಾನೆ !

ಹಲ್ಲು ಕಡಿಯುತ್ತಿದ್ದಾನೆ !

(ಮುಂದುವರೆಯುತ್ತದೆ)

# ವಿವಾಹ (ಲಗ್ನ) ಬಗ್ಗೆ ಮಾತಾಪಿತರಲ್ಲಿ ಗೊಂದಲ

ನಾವೀಗ 2000 ಇಸವಿಗೆ ಕಾಲಿಡುತ್ತಿದ್ದೇವೆ ತುಂಬ ಹೆಮ್ಮೆ ನಮಗೆಲ್ಲ. ಏಕೆಂದರೆ ಈ ಜಗತ್ತು ಸೃಷ್ಟಿಯಾಗಿ ಅದೆಷ್ಟೋ ವರ್ಷ ಸಂದವೂ. ಅದರಲ್ಲಿ ಕಲಿಯುಗ ಈಗ ನಡೆಯುತ್ತಿದೆ. ಸರಿ ಒಪ್ಪಿಕೊಳ್ಳೋಣ. ಈ ಕಲಿಯುಗದಲ್ಲಿ ಮನುಷ್ಯರು ಹೇಗೆ ವರ್ತಿಸುತ್ತಾರೆ ಏನು ಮಾಡಬಲ್ಲರು ಎಂದು ಕಾದು ನೋಡಬೇಕಾಗುತ್ತದೆ. ಕೆಲವು ಜನರು ಹೇಳುತ್ತಾರೆ 2000 ಇಸವಿಯಿಂದ 3ಕಾಲು, 5 ಕೈ ಇರುವಂತಹ ಮಗು ಹುಟ್ಟಬಹುದೆ? ಎಂದು ಲೆಕ್ಕಚಾರ ಹಾಕುತ್ತಿರಬಹುದು. ಅದು ಅವರದೇನು ತಪ್ಪಲ್ಲ. ಏಕೆಂದರೆ ಇಂದು ರಾಸಾಯನಿಕ ಗೊಬ್ಬರ ಹಾಕಿದ ಪ್ರತಿಯೊಂದು ಆಹಾರವನ್ನು ತಿಂದು ತೇಗಿ ಮನಸ್ಸನ್ನೇ ಹಿಡಿತದಲ್ಲಿಟ್ಟು ಕೊಳ್ಳಲು ಆಗುವುದಿಲ್ಲ. ಈವಾಗ 24 ಗಂಟೆಗಳಿಗೆ 48 ಬುದ್ದಿ ಆಗಬಹುದೇನು ನಿಜ. ಇಂತಿಷ್ಟರಲ್ಲಿ ಮಾತಾಪಿತರಿಗೆ ಬಿಡಿಸಲಾರದ ಒಗಟಾಗಿದೆ ಮತ್ತು ಜನ್ಮವಿತ್ತ ಮಕ್ಕಳ ಮೇಲೆ ಇತ್ತೀಚೆಗೆ 2000 ಇಸವಿಯಿಂದ ಲಗ್ನ ಮಾಡಲೇಬಾರದು ಎಂದು ಹಲವು ಬಿಸಿ ಸುದ್ದಿಗಳು ಕೇಳಿ ಬರುತ್ತಿವೆ ನಿಜ. ಅದರ ಬಗ್ಗೆಯಲ್ಲಿ ನನ್ನದೊಂದು ಪ್ರತಿಕ್ರಿಯೆ. ಮುಂದಿನ ವಿಕ್ರಮ ನಾಮ ಸಂವತ್ಸರದಲ್ಲಿ 5-4-2000 ರಿಂದ 7-6-2000ದ ವರೆಗೆ ಕಾಲರಾಹುಯೋಗವಿರುವುದರಿಂದ ಹೇಳುವಷ್ಟು ಪ್ರಮಾಣ ಬೀರುವಷ್ಟುಂಥಹುದೇನು ಇಲ್ಲ. ಏಕೆಂದರೆ ಪೇಪರು ಮಾಲೀಕರಿಗೆ ತುಂಬ ಬಂಡವಾಳ ಹೂಡಬಹುದೇನೊ. ಹಿಂದೊಮ್ಮೆ ಮಂಗಳೂರಿನಲ್ಲಿ ಒಂದು ತರಂಗಕ್ಕೆ 150 ರೂಪಾಯಿ ಕೊಟ್ಟು ತೆಗೆದುಕೊಂಡಿದ್ದೇನೆ. ಏಕೆಂದರೆ ಅದರಲ್ಲಿ ಬಹಳ ವಿಶೇಷ ಇನ್ನು ಪ್ರಳಯ ಆಗುತ್ತದೆಂದು ಇಂತಹ ಕೆಲವು ವಿಶೇಷಗಳನ್ನು ತಲೆಗೆ ಹಾಕಿ ಆರೋಗ್ಯ ಹಾಳು ಮಾಡುವುದರಿಂದ ತಿಳಿದಂತವರಿಂದ ಕೇಳಿ ತಿಳಿದುಕೊಳ್ಳಬಹುದು. ಅದರಲ್ಲೇನು ತಪ್ಪಿಲ್ಲ. ಮಾತಾಪಿತರು ಈವಾಗಲೇ ತಮ್ಮ ಮಕ್ಕಳಿಗೆ ರಿಂಗ್ ಪಾಸಂತೆ ಮಾಂಗಲ್ಯ ಮಾಡುವಂತೆ ಯಾವ ಮುಹೂರ್ತದಲ್ಲಿ ಅಲ್ಪ ಜ್ಞಾನದ ಮುಹೂರ್ತವನ್ನು ತ್ಯಜಿಸುವುದು ತುಂಬ ಒಳ್ಳೆಯದು. ಇಂತಹ ಹುರುಳಿಲ್ಲದ ವಿಷಯದಲ್ಲಿ ಮಾತಾಪಿತರು ತಲೆ ಕೆಡಿಸಿಕೊಳ್ಳುವುದು ಬೇಡ. ಅಲ್ಪ ಶಾಸ್ತ್ರ ಕಲಿತು ಜನರನ್ನು ಭಯ ಭೀತಿ ಹುಟ್ಟಿಸುವುದು ಬೇಡ. ವಿದ್ಯಾವಂತೆ ಶಾರದಾಂಬೆಗೂ ಹಿತವಾಗುವ ನುಡಿಗಳಲ್ಲ. ದಯವಿಟ್ಟು ಪಂಚಾಂಗದ ಅರ್ಥವಿದೆ 60 ಸಂವತ್ಸರಗಳು. ವರುಷಕ್ಕೊಂದು ಸಂವತ್ಸರ ಒಂದೊಂದು ಸಂವತ್ಸರದಲ್ಲಿ ಒಂದೊಂದು ರೀತಿಯ ಪ್ರಭಾವಗಳು ಕಾಣಬಹುದು. ನಿಜವೇನೊ ಸರಿ ಆದರೆ ಪ್ರತಿಯೊಂದು ವ್ಯವಹಾರವೂ ಮನುಷ್ಯ ಮಾಡುವ ಆಚಾರ ವಿಚಾರದ ಮೇಲೆ ಒಳ್ಳೆದು ಕೆಟ್ಟದು ಆಗುತ್ತದೆ. ವಿನಹ ಕಾಲವನ್ನು ದೂರಿ ಪ್ರಯೋಜನವಿಲ್ಲ. ಇಂದು ಮನುಷ್ಯನಲ್ಲಿ ಆಸೆ, ಆಕಾಂಕ್ಷೆ ಹೇಳಲಾರದ ಮೊತ್ತದ ಆಮಿಷಗಳಿಗೆ ಒಳಗಾಗಿ ಚಡಪಡಿಸಿದ್ದು ನಿಜ. ನಾವೆಲ್ಲ ಒಪ್ಪಿಕೊಳ್ಳಲೇಬೇಕು. ಇನ್ನು ಮುಂದೆ ಎಂಥದೇ ಸಮಸ್ಯೆ ಬಂದರು ಅದನ್ನು ಈಡೇರಿಸಲೂ ಮನುಷ್ಯನಿಗೆ ನಿಜವಾಗಿಯೂ ಆಗುವುದಿಲ್ಲ. ಏಕೆಂದರೆ ಜ್ಯೋತಿಷ್ಯ ಶಾಸ್ತ್ರದಲ್ಲಿ ಮಹೇಂದ್ರಯೋಗ, ಚಕ್ರಯೋಗ, ಶೂನ್ಯಯೋಗ, ಪಂಚಗ್ರಹ ಯೋಗ, ಕಾಲರಾಹು ಯೋಗ ಎಂಬಿತ್ಯಾದಿ ಯೋಗಗಳು ಇರುವುದು ನಿಜ. ಬರೀಯ ಕಾಲರಾಹು ಯೋಗವಿದೆ ಎಂಬುದನ್ನು ಮನದಟ್ಟು ಮಾಡಿಕೊಂಡು ತಮ್ಮ ಮಕ್ಕಳ ಮದುವೆ ಮಾಡದೇ ದಯವಿಟ್ಟು ಮತಾಪಿತರು ಸುಮ್ಮನೇ ಕುಳಿತುಕೊಳ್ಳಬೇಡಿ. ಒಂದು ಮಗುವಿನ ಹುಟ್ಟಿದ ನಕ್ಷತ್ರಕ್ಕೆ ಅನುಗುಣವಾಗಿ ರಾಶಿಯಿಂದ ಯಾವ ಗ್ರಹಗಳು ಯಾವ ಸ್ಥಾನದಲ್ಲಿದ್ದರೆ ಎಂಬಿತ್ಯಾದಿ ವಿಚಾರಗಳನ್ನು ಮನದಟ್ಟು ಮಾಡಿಕೊಂಡು ಅಷ್ಟಗಂಧ ಬ್ರಹ್ಮ ಕಲಶ ಅದಂತಹ ಸಾನಿಧ್ಯ ಕ್ಷೇತ್ರದಲ್ಲಿ ತಕ್ಕುದಾದ ಪೂಜೆ ಪುರಸ್ಕಾರ ವಗೈರೆ ಮಾಡಿಕೊಂಡು ಲಗ್ನ ಮಾಡಿದ್ದಾರೆ. ಯಾವ ರೀತಿಯ ದೋಷಗಳು ಬೀರಲು ಸಾಧ್ಯತೆ ಇಲ್ಲ. ಸುಬ್ರಮಣ್ಯ ದೇವಸ್ಥಾನದಲ್ಲಿ ಈಶ್ವರ ಪಾರ್ವತಿ ದೇವಸ್ಥಾನದಲ್ಲಿ ಶ್ರೀಕ್ಷೇತ್ರ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ಪೂಜೆ ಪುರಸ್ಕಾರ ಮಾಡಿಕೊಂಡು ಬರತಕ್ಕದು. ನವ ವಧುವರರ ಮನೆಯಲ್ಲಿ ನವಗ್ರಹಗಳಿಗೆ ಅಧಿಪತಿಯಾದ ಗಣಪತಿಗೆ ಗಣಹೋಮ, ಸತ್ಯನಾರಾಯಣ ಪೂಜೆ ಪುರಸ್ಕಾರ ಮಾಡಿಕೊಂಡು ಕುಲದೇವತಾರಾಧನೆ, ಗ್ರಾಮಾದೇವತಾರಾಧನೆ, ಮಾತಾಪಿತರ ಆಶೀರ್ವಾದೊಂದಿಗೆ ಲಗ್ನ ನೆರವೇರಿಸಬಹುದು. ಸೂರ್ಯ ಉದಯವಾದ ಪ್ರತಿಯೊಂದು ದಿನವು ಉತ್ತಮವೆಂದು ಪರಿಗಣಿಸಲಾಗುವುದು ಮತ್ತು ನಾಗ ದೋಷವಿರುವವರು ಲಗ್ನ ವಿಷಯದಲ್ಲಿ ಜ್ಯೋತಿಷ್ಯ ಶಾಸ್ತ್ರದಲ್ಲಿ ವಿಮರ್ಶೆ ಮಾಡಿ ಲಗ್ನ ಮಾಡಿ

ಹೊಸ ವರುಷವು 1-1-2000 ಶನಿವಾರ ಸ್ವಾತಿ ನಕ್ಷತ್ರ, ಸುಧರ್ಮ ಯಾಗ, ಕುದುರೆ ಕರ್ಣ ವಿಧ 54 ಗಳಿಗೆ ಅದ್ಭುತಾ 15ಗಳಿಗೆ 1-6-2000 ಮೂಲಾನಕ್ಷತ್ರದಲ್ಲಿ ಅಮವಾಸ್ಯೆ ಕರ್ಕಾಟಕ ರಾಶಿಯಲ್ಲಿ ರಾಹುವಿದ್ದರೆ ಮಾನಾಹಾನಿ ಒಂದು ವೇಳೆ ಮಾನಹಾನಿ ಎಂದು ಲಗ್ನ ಕಾರ್ಯ ಮಾಡದೇ ಇರುವುದು ಬೇಡ ವಧುವರರ ಪಾಲಾವಳಿ ಯಾವ ರಾಶಿಯಲ್ಲಿ ಪಾಪಗ್ರಹಗಳು ಇದ್ದವೆ ಎಂಬುದನ್ನು ಮನದಟ್ಟು ಮಾಡಿ ಹೊರಟು, ಮಾಂಗಲ್ಯ ಕಾರ್ಯ ನೆರವೇರಿಸಬಹುದು. ಕಾಲರಾಹುಯೋಗ ಸಮಯದಲ್ಲಿ ಮಗು ಅಂಗವಿಕಲತೆ ಅಥವಾ ಶರೀರದ ಯಾವುದೇ ಭಾಗಗಳು ಶಾಶ್ವತವಾದ ಕುಂದು ಕೊರತೆ ಬರಬಹುದು. ಎಂಬಿತ್ಯಾದಿ ಹುರುಳಿಲ್ಲದೆ ಮಾತುಗಳನ್ನು ನಂಬಿಕೊಂಡು ಚಿಂತಾಕ್ರಾಂತನಾಗುವುದು ಸರಿಯಲ್ಲ. ತಜ್ಞ ಜ್ಯೋತಿಷ್ಯ (ಮನಃ ಶಾಸ್ತ್ರಜ್ಞ) ರಲ್ಲಿ ಚರ್ಚಿಸಿ ಕೈಗೆತ್ತಿಕೊಳ್ಳುವುದು ತುಂಬ ಉತ್ತಮ. ನಾಗ ದೋಷವಿದೆ ಎಂದರೆ ಕರ್ಮಿಗಳಿಂದ ಶಾಸ್ತ್ರ ಸಮ್ಮುಖ ಮಾಡಿಕೊಂಡು ಬರುವುದು ಉತ್ತಮ. ಮಗುವಿನ ಹುಟ್ಟಿದ ದಿನ, ಯೋಗ, ಕರಣ, ವಿಷ, ಅಮೃತಾ ಎಂಬಿತ್ಯಾದಿ ವಿಚಾರಗಳನ್ನು ಸಾಬೀತು ಪಡಿಸಿದಲ್ಲಿ ಜ್ಯೋತಿಷ್ಯ ಯೋಗ ಫಲ ಹೇಳಲು ತುಂಬ ಉಪಯೋಗಕಾರಿ ಹೆಚ್ಚಿನ ವಿಶೇಷಗಳು ಬೇಕಾದಲ್ಲಿ ಕೇಳಿ ಪಡೆಯುವುದು.

|| ಯಃ ಶಾಸ್ತ್ರ ಮುತ್ಸೃಜ್ಯ ವರ್ತತೆ ಕಾರತ ||

**ಜಿ. ಸಿ. ಗಿರೀಶ್‌ಕುಮಾರ್**
**ಜ್ಯೋತಿಷಿ + ವೈದ್ಯರು, ಮದೆ.**

# ಗೌಡರ ಮದುವೆ : ಒಂದು ವಿಶ್ಲೇಷಣೆ

ಕಳೆದ ಒಂದು ಶತಮಾನದಲ್ಲಿ ಮಾನವ ಶಾಸ್ತ್ರಜ್ಞರು ಪ್ರಪಂಚದ ಬೇರೆ ಬೇರೆ ಮೂಲೆಗಳಲ್ಲಿ ನೆಲೆ ನಿಂತು, ಕ್ಷೇತ್ರ ಕಾರ್ಯದ ಮೂಲಕ, ಸಾವಿರಾರು ಸಮುದಾಯಗಳನ್ನು ಅಧ್ಯಯನ ಮಾಡಿದ್ದಾರೆ. ಬೇರೆ ಬೇರೆ ಸಂಸ್ಕೃತಿಗಳನ್ನು ತೌಲನಿಕವಾಗಿ ನೋಡುತ್ತಾ, ಅವುಗಳ ನಡುವೆ ಇರುವ ವೈವಿಧ್ಯತೆಗಳನ್ನೋ, ಸಮಾನತೆಗಳನ್ನೋ ಗುರುತಿಸಲು ಯತ್ನಿಸುತ್ತ ಅವುಗಳಿಗೆ ವಿವರಣೆಯನ್ನೋ, ವ್ಯಾಖ್ಯಾನವನ್ನೋ ನೀಡಿದ್ದಾರೆ. ಇದರ ಜೊತೆಗೆ ಪುರಾತತ್ತ್ವ ಸಂಶೋಧನೆಗಳಿಂದ ಬೆಳಕಿಗೆ ಬಂದ ಪುರಾತನ ಸಂಸ್ಕೃತಿಗಳನ್ನು ಗಮನದಲ್ಲಿರಿಸಿಕೊಂಡು, ಮನುಕುಲ ನಡೆದು ಬಂದ ದಾರಿಯನ್ನು ಚಾರಿತ್ರಿಕವಾಗಿ ವಿಶ್ಲೇಷಿಸಲು ಯತ್ನಿಸಿದ್ದಾರೆ. ಒಟ್ಟಿನಲ್ಲಿ ಮಾನವ ಜೀವನದಲ್ಲಿ ಸಮಾಜ ವ್ಯವಸ್ಥೆಯ ಭಿನ್ನ ಭಿನ್ನ ಅಂಗಗಳು ಕಾರ್ಯ ನಿರತವಾಗುವ ಬಗೆ, ಆ ಮೂಲಕ ಸಂಸ್ಕೃತಿಯೊಂದು ಸಮಗ್ರತೆಯನ್ನು ಸಾಧಿಸಲು ಯತ್ನಿಸುವ ಬಗೆಯನ್ನು ಅಪಾರವಾದ ವಿಷಯ ಸಂಗ್ರಹಣೆಯ ಮೂಲಕ ತಿಳಿಸಿ ಹೇಳುವ ಕೆಲಸವನ್ನು ಮಾನವಶಾಸ್ತ್ರ ಮಾಡಿದೆ.

ಇಂಥ ಸಂಸ್ಕೃತಿಯ ಮೂಲ ಘಟಕ ಗಂಡು ಮತ್ತು ಹೆಣ್ಣು. ಇವೆರಡೂ ಪರಸ್ಪರ ಪೂರಕ ಮತ್ತು ವಿರೋಧ ಗುಣವುಳ್ಳದ್ದು. ಮದುವೆ ಮತ್ತು ಸಂತಾನದಿಂದ ಅದು ಬೆಳೆದು ಬಂದು ತನಗಗತ್ಯವಾದ ಕುಟುಂಬವನ್ನು ರಚಿಸಿಕೊಳ್ಳುತ್ತದೆ. ಆಸ್ಕರ್ ಲೀವಿಸ್ ಅವರು ತಮ್ಮ ಅಧ್ಯಯನವನ್ನು 'ಕುಟುಂಬ'ಕ್ಕೆ ಮಿತಿಗೊಳಿಸಿ ಮಹತ್ವದ ತೀರ್ಮಾನಗಳನ್ನು ಕೊಡಲು ಶಕ್ತರಾದರು. ಕುಟುಂಬವು 'ಕೂಡಿಉಂಬು' (ಕೂಡಿ ಊಟ ಮಾಡುವ) ಗಂಡು ಹೆಣ್ಣಿನ ವ್ಯವಸ್ಥೆಯನ್ನು ಹೇಳುತ್ತದೆ. ಆಹಾರದ ನಿಯಮಕ್ಕೆ ಮತ್ತು ಸಹಬಾಳ್ವೆಗೆ ಸಂಬಂಧಿಸಿದ 'ಕುಟುಂಬ' ಪದವು ಸಂಬಂಧ ವಾಚಕ (Kinship terms) ವಲ್ಲ. ಬದಲಾಗಿ ಮೂಲತಃ ಮದುವೆಯೆಂಬ ಘಟನೆಗನುಸಾರವಾಗಿ ರೂಪಗೊಳ್ಳುವಂಥದ್ದು. ಅಂದರೆ ಕುಟುಂಬವೊಂದರ ನಡಾವಳಿ (Behaviour)ಯನ್ನು ಮದುವೆಯ ವಿಧಿವಿಧಾನಗಳು ಸಾಂಕೇತಿಕವಾಗಿ ಅಭಿವ್ಯಕ್ತಿಸಲೇ ಬೇಕಾಗುತ್ತದೆ. ಇಂಥ ಕಡೆ ಸಮಾನ ಆಚರಣೆ ಇರುವ ಒಂದು ಗುಂಪಿಗೆ, ಆ ಗುಂಪಿನ ಮದುವೆ ಕ್ರಮವು ಸಹಜವಾಗಿ ತೋರಿದರೆ, ಇತರರ ಆದರ್ಶಗಳು, ಭಾವನೆಗಳು ನಡಾವಳಿಗಳು ವಿಚಿತ್ರವೆಂದೋ, ಅಸಂಬದ್ಧವೆಂದೋ ತೋರಬಹುದು. ಒಂದು ಕುಟುಂಬದ ಆಹಾರ ನಿಯಮ, ಉಡುಪಿನ ಕ್ರಮಗಳು, ತೊಡುಗೆಗಳು, ಅಲಂಕಾರ, ವಿವಾಹ ಸಂಬಂಧಗಳು, ವ್ಯಕ್ತಿ ಸಂಬಂಧಗಳು, ಕೃಷಿ ಪದ್ಧತಿಗಳು ಹೀಗೆ ಸಕಲವೂ ಅದರ ಅಧ್ಯಯನದ ವ್ಯಾಪ್ತಿಗೆ ಬರುತ್ತದೆ. ದಯೆ, ಕರುಣೆ, ದ್ವೇಷ ಭಕ್ತಿ, ವಿನಯ, ಗೌರವ ಈ ಭಾವನೆಗಳನ್ನು ಯಾರು ಯಾರಲ್ಲಿ ಯಾವ ಮಟ್ಟದಲ್ಲಿ, ಎಕೆ ತೋರಬೇಕೆಂಬುದೂ ಇದರಲ್ಲಿ ಸೇರುತ್ತದೆ. ಹೊರ ಸಂಸ್ಕೃತಿಗಳ ಸಂಪರ್ಕವು ತೀವ್ರವಾದಂತೆ ಈ ಭಾವನೆ ಕಡಿಮೆಯಾಗುವುದು ಹೌದಾದರೂ ಪ್ರತಿ ಸಂಸ್ಕೃತಿಯಲ್ಲೂ ತನ್ನದು ಎಂಬುದಕ್ಕೆ ವಿಶಿಷ್ಟ ಸ್ಥಾನವೊಂದು ಇದ್ದೇ ತೀರುತ್ತದೆ. ಇದರಿಂದಾಗಿ ಒಂದು ಜನಾಂಗದ ಕುಟುಂಬ ವ್ಯವಸ್ಥೆಯು ತನ್ನ ವಿವಿಧ ರೀತಿಯ ಹೊಂದಾಣಿಕೆಗಳ ಪರಿಣಾಮವಾಗಿ ತನ್ನ ಆಶ್ರಯದಲ್ಲಿ ಇರುವವರಿಗೆ ತೃಪ್ತಿಯನ್ನೋ, ನಿರಾಶೆಯನ್ನೋ, ಸಮಚಿತ್ತತೆಯನ್ನೋ ನೀಡುತ್ತದೆ. ಇವುಗಳನ್ನು ಒಂದು ಕುಟುಂಬದ ಅಧ್ಯಯನದಲ್ಲಿ ಸ್ಪಷ್ಟವಾಗಿ ಗುರುತಿಸಲು ಸಾಧ್ಯ.

ಈಗಾಗಲೇ ನಾನು ಸ್ಪಷ್ಟಪಡಿಸಿರುವಂತೆ, ಒಂದು ಕುಟುಂಬದ ನಡಾವಳಿ, ಮತ್ತು ದೃಷ್ಟಿಕೋನವನ್ನು ಆ ಕುಟುಂಬ ಯಾವ ಗುಂಪಿಗೆ ಸೇರಿದೆಯೋ ಅವರಲ್ಲಿರುವ ಮದುವೆ ಕ್ರಮದಲ್ಲಿ ನಾವು ಗುರುತಿಸಬಹುದು. ಸುಳ್ಯ ಪರಿಸರದ ಗೌಡ ಜನಾಂಗದಲ್ಲಿ ಬಳಕೆಯಲ್ಲಿರುವ ಮದುವೆ ಕ್ರಮವನ್ನು ವಿಶ್ಲೇಷಿಸುವುದರ ಮೂಲಕ ಮೇಲಿನ ಮಾತನ್ನು ಸಮರ್ಥಿಸುವುದು ಈ ಪ್ರಬಂಧದ ಉದ್ದೇಶ.

**ಗೌಡ ಜನಾಂಗದ ಸಂಕ್ಷಿಪ್ತ ಪರಿಚಯ :**

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕು, ಪುತ್ತೂರು ತಾಲೂಕು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಸುಮಾರು ಎರಡು ಲಕ್ಷದ ಹತ್ತು ಸಾವಿರದಷ್ಟು ಸಂಖ್ಯೆಯಲ್ಲಿ ಗೌಡರಿದ್ದಾರೆ. ಬಂಟ್ವಾಳ ಮತ್ತು ವಿಟ್ಲ ಪರಿಸರದಲ್ಲಿ, ಕೊಡಗಿನ ಭಾಗ ಮಂಡಲ ಪರಿಸರದಲ್ಲಿಯೂ ಗೌಡರು ಇದ್ದಾರೆ. ಭಾಷಿಕವಾಗಿ ಇವರಲ್ಲಿ ಎರಡು ಪ್ರಭೇದಗಳಿವೆ. ಸುಳ್ಯ ಮತ್ತು ಭಾಗಮಂಡಲ ಪರಿಸರದಲ್ಲಿ 'ಗೌಡಕನ್ನಡ' ಇದ್ದರೆ ಇತರೆಡೆಗಳಲ್ಲಿ ತುಳು ಭಾಷೆಯನ್ನಾಡುತ್ತಾರೆ.[1]

ಸುಳ್ಯ ಪರಿಸರಕ್ಕೆ ಗೌಡರು ಮೂಲನಿವಾಸಿಗಳಲ್ಲ. ಇವರು ಹಾಸನ ಪರಿಸರದ ಐಗೂರು ಸೀಮೆಯಿಂದ ಕ್ರಿ. ಶ. 1450-1600ರ ಮಧ್ಯೆ ಕರಾವಳಿಗೆ ವಲಸೆ ಬಂದಿದ್ದಾರೆ. ವಲಸೆ ಬಂದ ಕಾಲದಲ್ಲಿ ರಾಗಿ ಪ್ರಧಾನ ಬೆಳೆಯಾಗಿದ್ದರೂ ಅನಂತರದ ಕಾಲದಲ್ಲಿ ಆ ಸ್ಥಾನವನ್ನು ಬತ್ತ ಮತ್ತು ಅಡಿಕೆ ಆಕ್ರಮಿಸಿಕೊಂಡಿತು. ಬತ್ತವನ್ನು ಹಣವನ್ನಾಗಿ ಮಾರ್ಪಡಿಸುವ ಬ್ರಿಟಿಷರ ಧೋರಣೆಯನ್ನು ಪ್ರತಿಭಟಿಸಿದ ಗೌಡರು ಕ್ರಿ. ಶ. 1830ರ ದಶಕದಲ್ಲಿ 'ಅಮರ ಸುಳ್ಯದ ದಂಗೆ'ಗೆ ಕಾರಣಕರ್ತರಾದರು. ಪರಿಣಾಮವಾಗಿ ಆಳರಸರ ಅವಕೃಪೆಗೆ ತುತ್ತಾಗಿ ಹಿಂದುಳಿದರು. ಸ್ವಾತಂತ್ರ್ಯಾನಂತರವೂ ಈ ಜನಾಂಗದ ಜೀವನ ಕ್ರಮದಲ್ಲಿ ಗಂಭೀರ ಬದಲಾವಣೆಗಳೇನೂ ಆಗಿಲ್ಲ.

**ಮದುವೆ : ಕ್ರಮ ಮತ್ತು ವಿಶ್ಲೇಷಣೆ :**

ಗೌಡರು ಮದುವೆಯನ್ನು ಬದುಕಿನ ಅತ್ಯಂತ ಮುಖ್ಯ ಘಟ್ಟವೆಂದು ಮಾನ್ಯ ಮಾಡಿದ್ದಾರೆ. ಅದು 'ಮನೆತನದ ಗೌರವ'ವನ್ನು ಪ್ರತಿನಿಧಿಸುತ್ತದೆ ಎಂದು ಅವರ ನಂಬಿಕೆ. ಕುಟುಂಬ ಮತ್ತು ಸಮಾಜದ ವ್ಯಾಪ್ತಿಯನ್ನು ನಿರ್ಧರಿಸುವ ಪ್ರಮುಖ ಮಾನದಂಡವಾಗಿ 'ಮದುವೆ' ಅವರಲ್ಲಿ ಅನುಷ್ಠಾನಕ್ಕೆ ಬರುತ್ತದೆ.[2]

ಗೌಡರ ಮದುವೆಯ ಮೊದಲ ಹಂತ ಆರಂಭವಾಗುವುದು 'ಬಳಿ'ಯ ಆಯ್ಕೆಯಲ್ಲಿ. ಪ್ರಸ್ತುತ ಗೌಡರಲ್ಲಿ ಬಳಕೆಯಲ್ಲಿರುವ ಹನ್ನೆರಡು ಬಳಿಗಳಲ್ಲಿ, ವರನು ತನ್ನ ಗೋತ್ರವನ್ನು ಬಿಟ್ಟು, ತನಗೆ ಸರಿ ಹೊಂದುವ 'ಬಳಿ'ಯೊಂದನ್ನು ಆಯ್ದುಕೊಳ್ಳಬೇಕಾಗುತ್ತದೆ.

ಇಂಥ ಆಯ್ಕೆಯಲ್ಲಿ ವರನ ತಂದೆ ಮತ್ತು ತಾಯಿಯ ಬಳಿಯನ್ನೇ ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತಾರೆ. ಆಸ್ತಿಯ ಒಡೆತನದ ಹಾಗೆ ಬಳಿಯೂ ತಂದೆಯಿಂದ ಮಗನಿಗೆ ಇಳಿದು ಬರುವುದರಿಂದ, ತಂದೆಯ 'ಬಳಿ'ಯ ಹುಡಿಗಿಯನ್ನು ಮದುವೆಯಾಗುವಂತಿಲ್ಲ. ಆದರೆ ತಂದೆಯ ತಂಗಿಯನ್ನು ಬೇರೆ ಕಡೆಗೆ ಕೊಟ್ಟಿರುವುದರಿಂದ ಆಕೆಯಲ್ಲಿ ಹುಟ್ಟಿದ ಹೆಣ್ಣನ್ನು ಮತ್ತೆ ಮನೆಗೆ ಮದುವೆಯ ಮೂಲಕ ತರಬಹುದು; ಮಗಳನ್ನು ಕೊಡಬಹುದು. ಅದೇ ಪ್ರಕಾರ ಮಗಳನ್ನು ತಾಯಿಯ ಸಹೋದರನೇ ಮದುವೆ ಮಾಡಿಕೊಳ್ಳಬಹುದು. ಇಲ್ಲವೇ ಸೋದರ ಮಾವನ ಮಗನಾದರೂ ಮದುವೆ ಆಗಬಹುದು. ಇಲ್ಲಿ ಮೂಲ ನಿಷೇಧ ಇರುವುದು 'ಒಂದೇ ಬಳಿಯಲ್ಲಿ ಮದುವೆಯಾಗ ಕೂಡದು' ಎಂಬುದು ಮಾತ್ರ. 'ಒಂದೇ ಬಳಿಯವರೆಲ್ಲ ಸಹೋದರ ಸಹೋದರಿಯರಾದ್ದರಿಂದ' ಮತ್ತು ಅದು ತಂದೆಯಿಂದ ನೇರವಾಗಿ ಇಳಿದು ಬಂದಿರುವುದರಿಂದ ಅಲ್ಲಿ ಮದುವೆ ನಿಷಿದ್ಧವಾಗುತ್ತದೆ.[3] ಇಲ್ಲಿ ತಾಯಿಯ 'ಬಳಿಯ' ವಧುವಾದರೆ ಅದಕ್ಕೆ ಪ್ರಾಶಸ್ತ್ಯ ಹೆಚ್ಚು. ತಂದೆಯ ಆಯ್ಕೆಯೇ ಮಗನ ಆಯ್ಕೆಯೂ ಆಗುತ್ತದೆ. ಬಳಿಯ ಈ 'ಆಯ್ಕೆ' ಹೆಣ್ಣಿನ ಆಯ್ಕೆಯನ್ನೂ ಸಮರ್ಥಿಸುತ್ತದೆ. ಅಕ್ಕನ ಮಗಳನ್ನು ಅಣ್ಣನಾದರೂ ಮದುವೆಯಾಗಬಹುದು ಇಲ್ಲವೇ ಅಣ್ಣನ ಮಗನಾದರೂ ಮದುವೆಯಾಗಬಹುದು. ಅಂದರೆ ಒಂದು ಹೆಣ್ಣಿನ ಮೇಲೆ ಆಕೆಯ ಸೋದರ ಮಾವ ಮತ್ತು ಸೋದರ ಮಾವನ ಮಗನಿಗೂ ಸಮಾನ ಮದುವೆಯ ಹಕ್ಕು ಇರುವುದು ಕಂಡುಬರುತ್ತದೆ. ತನಗೆ ಮದುವೆ ಆಗಲಾಗದ ಸಂದರ್ಭದಲ್ಲಿ ಹಕ್ಕನ್ನು ಮುಂದಿನ ತಲೆಮಾರಿಗೆ ದಾಟಿಸಿ, ಆಕೆಯನ್ನು ಒಳತರುವ ಕ್ರಮವಿದು. ಗೌಡರ ಮದುವೆಯ ಶೇಕಡಾ ಮೂವತ್ತು ಭಾಗವನ್ನು ನಂದರ, ಹೆಮ್ಮನ, ಬಂಗಾರ ಮತ್ತು ಮೂಲರ ಬಳಿಗಳೇ ಹಂಚಿಕೊಂಡಿದ್ದೂ, ಅಲ್ಲಿ ಕ್ವಚಿತ್ತಾಗಿ ಒಂದೇ ಬಳಿಯಲ್ಲಿ ಮದುವೆಯಾದದ್ದೂ ಇದೆ.[4]

ತಂದೆಯ ತಂಗಿಯ ಕಡೆಯಿಂದ ( ಆಕೆಯ ಬಳಿ ಬೇರೆಯಾಗುತ್ತದೆ) 'ಹೆಣ್ಣನ್ನು ತರುವುದು' ಮತ್ತು ತಾಯಿಯ ಸಹೋದರನ ಕಡೆಗೆ 'ಹೆಣ್ಣನ್ನು ಕೊಡುವುದು' ಗೌಡರಲ್ಲಿ ಪುನರಾವರ್ತನೆಗೊಳ್ಳುವ ಘಟನೆ[5]. ಇಲ್ಲಿ 'ಕೊಡುವ' ಮತ್ತು 'ತರುವ' ಎಂಬ ಎರಡು ಕನಿಷ್ಠ ಗುಂಪುಗಳ ಅವಶ್ಯಕತೆಯಿದೆ. ಇದನ್ನು 'ಹೆಣ್ಣಿನ ಕಡೆ' ಮತ್ತು 'ಗಂಡಿನ ಕಡೆ' ಎಂದು ಗೌಡರು ಕರೆಯುತ್ತಾರೆ.

ಮದುವೆಯಲ್ಲಿ ಗಂಡಿನ ಕಡೆಯವರೇ ಹುಡುಗಿ ನೋಡಲು (ಗೂಡೆ ನೋಡ್ದು) ಹೋಗುತ್ತಾರೆ. ಹಾಗೆ ಹೋಗುವಾಗ ಎರಡು ವಿಭಿನ್ನ ಗುಂಪುಗಳ ಮಧ್ಯೆ ಸಮಾಲೋಚನೆ ನಡೆಸಲು ಮಧ್ಯವರ್ತಿಯೊಬ್ಬನನ್ನು ಆಯ್ಕೆ ಮಾಡುತ್ತಾರೆ. ಇವನಿಗೆ 'ದಲಾಳಿ' ಎಂದು ಹೆಸರು. ಈ ದಲಾಳಿ ಎರಡೂ ಕಡೆಗಳ ಪರಿಚಯಸ್ಥನಾಗಿರಬೇಕು. ಈತ ಎರಡು ಗುಂಪಿನ ಜನರ ಭೇಟಿ ಸಂದರ್ಭದಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುತ್ತಾನೆ. ಹುಡುಗಿ ಒಪ್ಪಿಗೆಯಾದರೆ, ಅನಂತರ 'ಹುಡುಗಿ ಕಡೆ'ಯವರು 'ಹುಡುಗನ ಕಡೆ'ಮನೆ ನೋಡಲು (ಹೈದನ ಮನೆ ನೋಡ್ದು) ಬರುತ್ತಾರೆ. ಪರಸ್ಪರ ಊಟೋಪಚಾರಗಳು ಸಂದಾಯವಾದ ಅನಂತರ, ವಧುವಿನ ಮನೆಯಲ್ಲಿ 'ಮದುವೆ ದಿನ'' ಮತ್ತು 'ಮುಹೂರ್ತ'ವನ್ನು ನಿಗದಿ ಪಡಿಸುತ್ತಾರೆ.

ಈ ಮದುವೆ ದಿನ ನಿರ್ಧಾರ ಮತ್ತು ಮುಹೂರ್ತದ ನಿರ್ಧಾರವನ್ನು 'ಮನೆಯ ಜಗಲಿಯಲ್ಲಿ' ಅಥವಾ ಗೌಡಕನ್ನಡದಲ್ಲಾದರೆ 'ಕೈಯ್ಯಾಲೆ'ಯಲ್ಲಿಯೇ ಮಾಡಬೇಕು.[6] ಕೈಯಾಲೆ ಅಥವಾ ಜಗಲಿ ಮನೆಯ ಒಳಗೂ ಅಲ್ಲದ, ಹೊರಗೂ ಅಲ್ಲದ ಮಧ್ಯದ ಸ್ಥಳ. ದಲಾಳಿಯ ಹಾಗೆ ಸಮತೋಲವುಳ್ಳ ಜಾಗ. ಅಂದರೆ, ಜಗಲಿಯು ಸಂಸ್ಕೃತಿಯ ಅಂತರಂಗ ಮತ್ತು ಬಹಿರಂಗಗಳ ಮಧ್ಯದ, ಅವೆರಡರ ಮಧ್ಯೆ ಸಂಬಂಧ ಕಲ್ಪಿಸಲು ಸಹಾಯಕವಾಗುವ ಸ್ಥಳ. ಹೆಣ್ಣು ಇನ್ನೂ ಮನೆಯೊಳಕ್ಕೆ ಬಂದಿಲ್ಲವಾದ ಕಾರಣ ಹೆಣ್ಣಿನ ಕಡೆಯವರು ಜಗಲಿಯಲ್ಲಿಯೇ ಮಾತುಕತೆಗಳನ್ನಾಡುತ್ತಾರೆ. ಈ ಮಾತುಕತೆ ಅತಿ ಮುಖ್ಯದ್ದಾದ್ದರಿಂದ ಮದುವೆ ಇರುವ ಎಲ್ಲಾ ಗೌಡರು ಮನೆಯಲ್ಲಿಯೂ 'ಜಗಲಿ' ಇದ್ದೇ ಇರಬೇಕು. ಇದು ಅವರ ವಾಸ್ತುವಿನ ಮೂಲ ಘಟಕಗಳಲ್ಲಿ ಒಂದಾಗಿದೆ. ಅವಿಭಕ್ತ ಕುಟುಂಬ ಪದ್ಧತಿ ಇರುವಲ್ಲಿ ಮೂಲ ಮನೆ (ತರವಾಡಿನ ಮನೆ, ಐನ್ ಮನೆ)ಯಲ್ಲಿಯೇ ಜಗಲಿ ಇದ್ದು, ಅಲ್ಲಿಯೇ ಮದುವೆ ನಿರ್ಧಾರಗಳಾಗುತ್ತವೆ. ಜಗಲಿ ಇಲ್ಲದೆ ಗೌಡರಲ್ಲಿ ಮದುವೆ ನಡೆಯದು.[7]

ಮದುವೆ ದಿನ ನಿರ್ಧಾರವಾದ ಅನಂತರ ವರ ಮತ್ತು ವಧುವಿನ ಮನೆಯಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿಯೇ ತಯಾರಿ ನಡೆಯುತ್ತದೆ. ಎರಡೂ ಕಡೆಯ ಆಚರಣೆಗಳೂ ಮನೆಯೊಳಗಡೆ, ಅಡುಗೆ ಮನೆಯಲ್ಲಿ (ಗೌಡ ಕನ್ನಡದಲ್ಲಿ 'ಉಂಬೊಳಗೆ' ಊಟ ಮಾಡುವ ಒಳಗಿನ ಸ್ಥಳ) ನಡೆಯುತ್ತದೆ. ಅಡುಗೆ ಮನೆಯಲ್ಲಿ ಹಾಕಿಟ್ಟಿರುವ 'ಕನ್ನಿಕಂಬ'ವೇ ಅತ್ಯಂತ ಪವಿತ್ರ ಜಾಗವಾಗಿರುತ್ತದೆ.[8] ಈ ಸ್ಥಳದಲ್ಲಿ ಮದುಮಗನನ್ನೋ, ಮದುಮಗಳನ್ನೋ ಕುಳ್ಳಿರಿಸುವುದರಿಂದ ಅವರಿಗೆ 'ಪ್ರತ್ಯೇಕ ಅಸ್ತಿತ್ವ'ವೊಂದು ಸಿದ್ಧವಾಗುತ್ತದೆ. ಮೈಗೆ ಅರಸಿನ ತಿಕ್ಕಿ, ಕೊರಳಿಗೆ ಮುಹೂರ್ತದ ಮಣಿ ಕಟ್ಟಿದ ಅನಂತರ ಮದುಮಗ-ಳು ಮನೆಯ ವಾತಾವರಣವನ್ನು ಬಿಟ್ಟು ಹೊರಗೆ ಹೋಗಬಾರದೆಂಬ ನಿಷೇಧವಿದೆ. ಅರಸಿನ ತಿಕ್ಕಿದ ಅನಂತರ ಅವರು 'ಹಸಿಮ್ಮೆ' ವ್ಯಕ್ತಿಗಳಾಗುತ್ತಾರೆ.

ಸಾಮಾನ್ಯವಾಗಿ ಮದುವೆಯ ಹಿಂದಿನ ದಿನ ನಡೆಯುವ ಎಲ್ಲಾ ಆಚರಣೆಗಳೂ ಮದುಮಗ-ಳನ್ನು ಸಾಮಾನ್ಯ ಜೀವನಕ್ರಮದಿಂದ ಪ್ರತ್ಯೇಕಿಸುತ್ತದೆ. ಮತ್ತು ಹಾಗೆ ಪ್ರತ್ಯೇಕಿಸುವುದರಿಂದಾಗಿ ಮಾತ್ರ ಸಾಮಾನ್ಯ ಜೀವನಕ್ರಮದಲ್ಲಿ ಅವರು 'ಅಸಾಮಾನ್ಯ'ರಾಗಿ ಪ್ರತ್ಯೇಕ ಸ್ಥಾನವನ್ನು ಗಳಿಸಿಕೊಳ್ಳುತ್ತಾರೆ. ಇದು ಸ್ಪಷ್ಟವಾಗಲು ಅವರಿಗೆ ಸ್ನಾನ ಮಾಡಿಸುತ್ತಾರೆ. ಬಿಳಿ ಬಟ್ಟೆ ಉಡಿಸುತ್ತಾರೆ. ಗಂಡಿಗೆ ಕ್ಷೌರ ಮಾಡಿಸುತ್ತಾರೆ, ಪಟ್ಟೆ ಬಾಸಿಂಗ ಕಟ್ಟುತ್ತಾರೆ, ಮುಂಡಾಸು ಕಟ್ಟುತ್ತಾರೆ ಮತ್ತು ಆಗಾಗ ಶೋಭಾನೆಗಳನ್ನು ಹಾಡಿ ಅವರನ್ನು ಪುರಾಣಗಳ ಎತ್ತರಕ್ಕೆ ಕೊಂಡೊಯ್ಯುತ್ತಾರೆ. ವ್ಯಕ್ತಿಗಳನ್ನು ಪ್ರತ್ಯೇಕಿಸಿದ ಹಾಗೆ ಸಮಯವನ್ನೂ ಪ್ರತ್ಯೇಕಿಸಿ 'ಮುಹೂರ್ತ'ವನ್ನು ನಿರ್ಧರಿಸುತ್ತಾರೆ. ಸ್ಥಳವನ್ನು ಪ್ರತ್ಯೇಕಿಸಿ 'ಧಾರಾಮಂಟಪ'ವನ್ನು ಮಾಡುತ್ತಾರೆ. ಮುಹೂರ್ತಕ್ಕೆ ಮಹತ್ವ ಇದ್ದ ಹಾಗೇ ಧಾರಾ ಮಂಟಪಕ್ಕೂ ಇರುವುದರಿಂದ ಅದನ್ನು ವಿಶೇಷವಾಗಿ ಶೃಂಗರಿಸುತ್ತಾರೆ. 'ವ್ಯಕ್ತಿ',

'ಮುಹೂರ್ತ'ಮತ್ತು 'ಸ್ಥಳ' ಒಂದು ನಿರ್ದಿಷ್ಟ ಉದ್ದೇಶಕ್ಕೆ ಬದ್ಧವಾಗಿಯೇ ಸಮಾನವಾದ ಮಹತ್ವವನ್ನು ಪಡೆದು ಒಟ್ಟು ಮದುವೆಯಲ್ಲಿ ಪಾವಿತ್ರ್ಯವನ್ನು ಪಡೆದಿರುತ್ತದೆ.

ಧಾರಾ ಮಂಟಪಕ್ಕೆ ಹೆಣ್ಣು ಮನೆಯೊಳಗಿನಿಂದ ಬಂದು ಪ್ರವೇಶವಾದರೆ ಗಂಡು ಚಪ್ಪರದಿಂದ ಹೊರಗಿನಿಂದ ಒಳಗೆ ಬರುತ್ತಾನೆ. ಗಂಡಿನ ಮನೆಯಲ್ಲಿಯೇ ಮದುವೆಯಾಗುವುದಿದ್ದರೂ ಆತ ಮನೆಯನ್ನು ತತ್ಕಾಲಕ್ಕೆ ಹೆಣ್ಣಿನ ಕಡೆಯವರಿಗೆ ಬಿಟ್ಟುಕೊಟ್ಟು, ತಾನು ಹೊರಗಿನಿಂದ ಬರುತ್ತಾನೆ. ಅಂದರೆ ಗಂಡು ಮನೆಯಿಂದ ಹೊರಗಡೆಗೆ ಹೋಗಿ ಹೆಣ್ಣನ್ನು ತರುತ್ತಾನೆ ಹೀಗೆ ತರುವಾಗ ಎರಡೂ ಕಡೆಯ ಹಿರಿಯರು ಚಪ್ಪರದಡಿಯಲ್ಲಿ ಒಟ್ಟು ಸೇರಿ ವೀಳ್ಯಕೊಟ್ಟು ಪರಸ್ಪರ ಒಪ್ಪಂದ ಮಾಡಿಕೊಳ್ಳುತ್ತಾರೆ. ಈ ಒಪ್ಪಂದ 12 ವಿಧದಲ್ಲಿ ನಡೆಯುತ್ತದೆ. ಅವುಗಳೆಂದರೆ :

1. ಹೆಣ್ಣು ಮಾತಾಡುವುದು : (5 ಕವಳಿಗೆ ಎಲೆ ಮತ್ತು 5 ಅಡಿಕೆ)[9]
2. ಬಳಿ ನಿರ್ಣಯ ಮಾಡುವುದು : (5 ಕವಳಿಗೆ ಎಲೆ ಮತ್ತು 5 ಅಡಿಕೆ)
3. ಹೆಣ್ಣನ್ನು ಒಪ್ಪಿಕೊಳ್ಳುವುದು : (5 ಕವಳಿಗೆ ಎಲೆ ಮತ್ತು 5 ಅಡಿಕೆ)
4. ಲಗ್ನ ನಿಶ್ಚಯಿಸುವುದು : (5 ಕವಳಿಗೆ ಎಲೆ ಮತ್ತು 5 ಅಡಿಕೆ)
5. ದೇವರಿಗೆ ಗೌರವ : (5 ಕವಳಿಗೆ ಎಲೆ ಮತ್ತು 5 ಅಡಿಕೆ)
6. ಹಿರಿಯರಿಗೆಗೌರವ : (5 ಕವಳಿಗೆ ಎಲೆ ಮತ್ತು 5 ಅಡಿಕೆ)
7. ಬಂಧುಗಳಿಗೆ ಗೌರವ : (5 ಕವಳಿಗೆ ಎಲೆ ಮತ್ತು 5 ಅಡಿಕೆ)
8. ತಂದೆಗೆ ಗೌರವ : (5 ಕವಳಿಗೆ ಎಲೆ ಮತ್ತು 5 ಅಡಿಕೆ)
9. ತಾಯಿಗೆ ಗೌರವ : (5 ಕವಳಿಗೆ ಎಲೆ ಮತ್ತು 5 ಅಡಿಕೆ)
10. ಅಚ್ಚುಕಟ್ಟಾಗಿ ಮದುವೆ ಆಗುವುದುರ ಬಗ್ಗೆ : (5 ಕವಳಿಗೆ ಎಲೆ ಮತ್ತು 5 ಅಡಿಕೆ)
11. ಬಣ್ಣ ಬಂಗಾರದ ಗೌರವ : (5 ಕವಳಿಗೆ ಎಲೆ ಮತ್ತು 5 ಅಡಿಕೆ)
12. ಎಲ್ಲರಿಗೂ ಗೌರವ : (5 ಕವಳಿಗೆ ಎಲೆ ಮತ್ತು 5 ಅಡಿಕೆ)

**ಕೊನೆ ಟಿಪ್ಪಣಿಗಳು**

1. ತಾಂತ್ರಿಕವಾಗಿ 'ಗೌಡಕನ್ನಡ' ಎಂಬ ಪದವು ಗೌಡರಲ್ಲಿ ಪ್ರಚಲಿತವಾಗಿರುವ 'ಅರೆಭಾಷೆ'ಗೆ ಸಂವಾದಿಯಾಗಿ ಬಂದಿದೆ. ಇದನ್ನು ಮೊದಲು ಬಳಕೆಗೆ ತಂದದ್ದು. ಪ್ರೊ. ಎಂ. ಮರಿಯಪ್ಪಭಟ್ಟರು. ಈ ಭಾಷೆಯ ಬಗೆಗೆಗ ಮೊದಲ ಬಾರಿಗೆ ವೈಜ್ಞಾನಿಕ ಅಧ್ಯಯನ ನಡೆಸಿದ ಪ್ರೊ. ಕೆ. ಕುಶಾಲಪ್ಪ ಗೌಡರು ತಮ್ಮ ಗ್ರಂಥದಲ್ಲಿ 'ಗೌಡ ಕನ್ನಡ' ಎಂಬ ಪದವನ್ನೇ ಅಧಿಕೃತವಾಗಿ ಬಳಸಿದ್ದಾರೆ.

2. ವಿವಾಹ ಸಂಬಂಧಗಳಲ್ಲಿ ವಿಧಿ ನಿಷೇಧಗಳು ಕೆಲಸ ಮಾಡುವ ಪರಿಗೆ ನೋಡಿರಿ : ವಿವೇಕ ರೈ : 1985

3. ಸುಳ್ಯ ಪರಿಸರದ ಗೌಡರಲ್ಲಿ ಜನಪ್ರಿಯವಾಗಿರುವ ಅನೇಕ ಜನಪದ ಕತೆ, ಕವನಗಳಲ್ಲಿ ಸಹೋದರ-ಸಹೋದರಿಯರ ಮದುವೆ ನಿಷೇಧದ ಬಗ್ಗೆ ಉಲ್ಲೇಖವಿದೆ. ಉದಾಹರಣೆಗೆ ಒಂದನ್ನು ಇಲ್ಲಿ ಸಂಕ್ಷೇಪವಾಗಿ ನೋಡಬಹುದು :

ಒಂದೂರಿನಲ್ಲಿ ಅಣ್ಣ ತಂಗಿ ಇಬ್ಬರಿದ್ದರು. ಅಣ್ಣ ತಂಗಿಯನ್ನು ಮದುವೆಯಾಗುತ್ತೇನೆ ಎಂದಾಗ ತಂಗಿ ಅದಕ್ಕೆ ಒಪ್ಪದೆ ಮನೆ ಬಿಟ್ಟು ಓಡಿದಳು. ಅಣ್ಣ ಬೆನ್ನಟ್ಟಿದ. ಬೆದರಿದ ತಂಗಿ ಹೊಳೆ ಬದಿಯಲ್ಲಿರುವ ಮರವೇರಿದಳು. ಅಣ್ಣ ಬೇಡಿಕೊಂಡ. ತಂಗಿಯ ಮನಕರಗಲಿಲ್ಲ. ಅಣ್ಣನೂ ಮರವೇರಿದಾಗ ಆಕೆ ಗೆಲ್ಲಿನಲ್ಲಿ ನಡೆದಳು. ಅಣ್ಣ ಗೆಲ್ಲಲ್ಲೆ ನಡೆದಾಗ ಆಕೆ ಎಲೆಯಲ್ಲಿ ನಡೆದಳು. ಅಣ್ಣ ಎಲೆಯಲ್ಲಿ ನಡೆದಾಗ ಆಕೆ ಎಲೆ ತುದಿಗೆ ಬಂದು 'ಅಪ್ಪನ ನಾನಿನ್ನು ಮಾವನೆಂದು ಹೇಳಲೇ, ಅಪ್ಪನ ನಾನಿಂದು ಅತ್ತೆಯೆಂದು ಹೇಳಲೇ' ಎಂದು ಹೊಳೆಗೆ ಧುಮುಕಿದಳು. ಅಣ್ಣನೂ ಧುಮುಕಿದ ಹೊಳೆಯಲ್ಲಿ ತಂಗಿ 'ಬಾಳೆಮೀನು' ಆಗಿ ಮಾರ್ಪಟ್ಟಳು. ಅಣ್ಣ 'ಮೂಡು ಮೀನು ಆಗಿ ಮಾರ್ಪಟ್ಟ. ಇಂದಿಗೂ ಈ ಎರಡು ಮೀನನ್ನು ಗೌಡರು ಒಟ್ಟಿಗೇ ಬೇಯಿಸುವುದಿಲ್ಲ. ಆಹಾರದ ಬಗೆಗೆ ನಿಷೇಧ ಮೂಲದಲ್ಲಿ ಅಣ್ಣ ತಂಗಿಯರ ಮದುವೆಯ ಬಗೆಗಣ ನಿಷೇಧವಾಗಿರುವುದನ್ನು ಕಾಣಬಹುದು.

ಪಂಜುರ್ಲಿ ಪಾಡ್ದನದಲ್ಲಿ ಅಣ್ಣ ತಂಗಿಯರು ಮದುವೆಯಾಗಿ ಹುಟ್ಟಿದ ಸಂತಾನವನ್ನು 'ಅನಿಷ್ಟಬೀಜ'ವೆಂದು ವರ್ಣಿಸಲಾಗಿದ್ದು, ಅಲ್ಲಿಯೂ ಇದೇ ಆಶಯವಿದೆ.

4. ಈ ಬಳಿಯವರ ಸಂಖ್ಯೆ ಅತ್ಯಂತ ಹೆಚ್ಚಿಗೆ ಇರುವುದೇ ಇದಕ್ಕೆ ಕಾರಣವಿರಬಹುದು. 'ಒಳಗಿನಿಂದಲೇ' ಹೆಣ್ಣು ತರುವ ರೂಢಿ ಕಡಿಮೆಯಾದಂತೆ ಗೌಡರು 'ಹೊರಗಡೆ' ನೋಡಬೇಕಾಗುತ್ತದೆ. ಆಗ ತಮ್ಮ ಬಳಿಯವರೇ ವಿಸ್ತಾರವಾಗಿ ಹರಡಿಕೊಂಡಾಗ 'ಆಯ್ಕೆ' ಬಳಿಯೊಳಗಡೇ ನಡೆದು ಬಿಡುತ್ತದೆ. ಜೊತೆಗೆ 'ಪ್ರೇಮವಿವಾಹ' ಗಳಿಗೆ ಅಷ್ಟ ಬರುವುದಿಲ್ಲ.

5. ಹೆಣ್ಣು ಮೈ ನೆರೆತಾಗಣ ಆಚರಣೆಯಲ್ಲಿ ಹೆಣ್ಣಿನ ಮೇಲೆ ಸೋದರ ಮಾವನಿಗೆ ಇರು ಲೈಂಗಿಕ ಹಕ್ಕು ನಿಚ್ಚಳವಾಗಿ ಕಾಣಿಸುತ್ತದೆ. ಮೈನೆರೆದ ಏಳು ದಿವಸಗಳವರೆಗೆ ಆಕೆಗೆ 'ಹೊಲೆ' ಇರುತ್ತದೆ. ಏಳನೇ ದಿನ ಆಕೆ 'ಮಡಿ' ಆಗುತ್ತಾಳೆ. ಆ ದಿವಸ ಮೈಗೆ ಅರಸಿನ ತಿಕ್ಕಿದ ಆಕೆ ಒನಕೆಯನ್ನು ದಾಟಬೇಕು ಮತ್ತು ವೀಳ್ಯವನ್ನು ತಿನ್ನಬೇಕು. ಇದಾದ ಅನಂತರ ಸೋದರಮಾವ ಆಕೆಯನ್ನು ಕರೆದುಕೊಂಡು ತನ್ನ ಮನೆಗೆ ಹೋಗುತ್ತಾನೆ.

6. 'ಜಗಲಿ'ಗಿರುವ ಅರ್ಥವ್ಯಾಪ್ತಿ ಏನೆಂಬುದು ಖಚಿತಾಗಿ ತಿಳಿಯದು. 'ಇಲ್‌ನ ಜಾಗ' (ಇಲ್=ಮನೆ) ಎಂಬ ಅರ್ಥದಲ್ಲಿ ಬಳಕೆಯಾಗಿರಬಹುದು. ಕೈ ಶಾಲೆಯೇ ಕೈಯ್ಯಾಲೆಯಾಗಿದೆ.

7. ಮನೆಯ ಒಳಗಿನಿಂದ ಮಗು ಮದಲ ಬಾರಿಗೆ ಜಗಲಿಗೆ ಇಳಿದಾಗ ಮತ್ತು ಜಗಲಿಯಿಂದ ಅಂಗಳಕ್ಕೆ ಇಳಿದಾಗ, ಗೌಡರು 'ಜಗಲಿ ಪೂಜೆ' ಮಾಡುತ್ತಾರೆ. ಹೊರಗೂ ಅಲ್ಲದ ಒಳಗೂ ಅಲ್ಲದ ಈ ಸಂಕೀರ್ಣ ಪ್ರದೇಶವೇ ಮಾಟ-ಮಂತ್ರಗಳ ಸ್ಥಾನವೂ ಹೌದು, ಆತಂಕಗಳ ಸ್ಥಾನವೂ ಹೌದು.

8. ಮನೆಕಟ್ಟುವಾಗ ಅಡುಗೆ ಮನೆಯಲ್ಲಿ ಪೂರ್ವಾಭಿಮುಖವಾಗಿ ಹುಗಿದಿಟ್ಟಿರುವ ಮರದ ಒಂದು ಚಿಕ್ಕ ಕಂಬವನ್ನು 'ಕನ್ನಿ ಕಂಬ' ಎಂದು ಹೇಳುತ್ತಾರೆ. ಹಾಗೆ ಹುಗಿಯುವಾಗ ಅದರಡಿಯಲ್ಲಿ ಚೂರು ಚಿನ್ನವನ್ನು ಹಾಕಿರುತ್ತಾರೆ. ಹುಟ್ಟಿನಿಂದ ಸಾಯುವಲ್ಲಿವರೆಗಿನ ಕ್ರಿಯಾಚರಣೆಗಳು, ಹಾಗೇ ಋತು ಮಾನದ ಆಚರಣೆಗಳೆಲ್ಲ ಈ ಕನ್ನಿಕಂಬದ ಕೆಳಗೇ ನಡೆಯುವುದರಿಂದ ಇದು ಇಡೀ ಗೌಡ ಸಂಸ್ಕೃತಿಯ ಕೇಂದ್ರಸ್ಥಳವಾಗಿದೆ. ಹಸಿವನ್ನು ತೀರಿಸಲು ಅನ್ನ ಕೊಡುವ ಅಡುಗೆ ಮನೆಯಲ್ಲಿಯೇ ಇದನ್ನು ಸ್ಥಾಪಿಸುತ್ತಾರೆ. ಕನ್ನಿಕಂಬವಿಲ್ಲದ ಗೌಡರ ಮನೆಗಳಿಲ್ಲ. ಇದು ಕೂಡಾ, ಅಂದರೆ ಅಡುಗೆ ಮನೆ ಸಹಿತವಾದ ಕನ್ನಿಕಂಬವು ಗೌಡ ವಾಸ್ತುವಿನ ಮೂಲ ಘಟಕವಾಗಿಯೂ ಕೆಲಸ ನಿರ್ವಹಿಸಿದೆ.

9. ಒಂದು ಕವಳಿಗೆ ಎಂದರೆ ಇಪ್ಪತ್ತೈದು ವೀಳ್ಯದೆಲೆಗಳಿರುವ ಒಂದು ಕಟ್ಟು. ಅಂಥ ನಾಲ್ಕು ಕವಳಿಗೆ ಸೇರಿದರೆ 'ಒಂದು ಸೂಡಿ' ಆಗುತ್ತದೆ. ಗೌಡರ ಮದುವೆಯಲ್ಲಿನ 12 ಒಪ್ಪಂದಗಳಿಗೆ ಪ್ರಕೃತ ಒಂದೂವರೆ ವೀಳ್ಯದೆಲೆ ಮತ್ತು 60 ಅಡಿಕೆಗಳ ಅಗತ್ಯವಿದೆ. ಅದರಲ್ಲಿ ಒಂದು ಕಡಿಮೆಯಾದರೂ ಮದುವೆಯೇ ನಿಂತು ಹೋಗಬಹುದು.

**(ಮುಂದುವರೆಯುತ್ತದೆ)** **ಕೃಪೆ : ಕರಾವಳಿ ಜಾನಪದ**

**ಲೇಖನ : ಡಾ. ಪುರಷೋತ್ತಮ ಬಿಳಿಮಲೆ**

## ನಮ್ಮ ಕೊಡಗು ಜಿಲ್ಲೆ ನಮ್ಮದು

ನಮ್ಮ ಕೊಡಗು ಜಿಲ್ಲೆ ನಮ್ಮದು
ಕಾಶ್ಮೀರ ಸೊಗಡಿನ ಊರಿದು

ಬ್ರಹ್ಮಗಿರಿ ಇಗ್ಗುತಪ್ಪ ತಳಿಯಾಂಡ ಮೋಳು ಬೆಟ್ಟ
ಸುಬ್ರಮಣ್ಯ, ದೇವಾಸಿ, ಸೀಮೆ ಸಾಲುಗಳೇ ಮಡಿಕೇರಿ ಪೀಠ
ಕಾವೇರಿ, ಹಾರಂಗಿ, ಹೇಮಾ, ಲಕ್ಷ್ಮಣತೀರ್ಥ ಮಹಾಪೂರ ಪೊಳೆಯಿಸಿ
ತಳದ ಜಲವ ಪಚ್ಚೆ ಹಾರೈಸಿ ಬೆಳೆ ಬೆಳೆಯಿಸಿ
ನಮ್ಮ ಕೊಡಗು ಜಿಲ್ಲೆ ನಮ್ಮದು
ನಮ್ಮ ಕೊಡಗು ಜಿಲ್ಲೆ ನಮ್ಮದು

ಗಂಗಾ, ಕದಂಬ, ಚೆಂಗಳ್ವರ ಹಾಲೇರಿ ಆಳಿದ
ಚಂದ್ರವರ್ಮ, ಮುದ್ದುರಾಜ, ಟಿಪ್ಪು, ಲಿಂಗರಾಜೇಂದ್ರರ ನಾಡಿದು
ಕರುನಾಡು ಅರಸರ ಕದನ ಸಿರಿಮುಡಿ ಏರಿದ
ಕೊಡಗು ಚರಿತ್ರೆಯ ಅಮರ ಧರಿತ್ರಿದು
ನಮ್ಮ ಕೊಡಗು ಜಿಲ್ಲೆ ನಮ್ಮದು
ನಮ್ಮ ಕೊಡಗು ಜಿಲ್ಲೆ ನಮ್ಮದು

ಆಗಸ್ತ್ಯ ತಪದ ಬ್ರಹ್ಮಗಿರಿ, ರಾಮಕೃಷ್ಣಾ ಶಾರದ ಆಶ್ರಮ
ಪಾಪ ಪಾವನೆ ಲೋಪಮುದ್ರೆ ನೀರೆ ಧೀರೆ
ಕೋಟೆ ಓಂಕಾರೇಶ್ವರ ತಲಕಾವೇರಿ ಭಗಂಡೇಶ್ವರ
ಆತಿಥ್ಯ ಕಾಣುವ ಆಗರದ ರಾಜ ಸೀಟು
ನಮ್ಮ ಕೊಡಗು ಜಿಲ್ಲೆ ನಮ್ಮದು
ನಮ್ಮ ಕೊಡಗು ಜಿಲ್ಲೆ ನಮ್ಮದು

ಕೊಡಗಿನ ಗೌರಮ್ಮ, ಭಾರತೀಸುತ ಕಾಕೇಮನಿ
ಕನ್ನಡ ಸಾಹಿತ್ಯ ಸೇವೆ ಅರಳಿದ ಕೀರ್ತಿ ತಂದ ಜಿಲ್ಲೆಯಿದು
ಜನರಲ್ ಕಾರ್ಯಪ್ಪ, ಜನರಲ್ ತಿಮ್ಮಯ್ಯ
ಸ್ಥೈರ್ಯ, ಪರಾಕ್ರಮ ಯೋಧರ ತಾಯ್ನಾಡಿದು
ನಮ್ಮ ಕೊಡಗು ಜಿಲ್ಲೆ ನಮ್ಮದು
ನಮ್ಮ ಕೊಡಗು ಜಿಲ್ಲೆ ನಮ್ಮದು

ಸೋಮವಾರ ಪೇಟೆ, ವಿರಾಜಪೇಟೆ, ಮಡಿಕೇರಿ
ಸುತ್ತುವರಿದಿಹ ಬನ ಕೊಡಗು ಕೇರಿ
ವನ್ಯ ಮೃಗ ನಾಗರಹೊಳೆ, ಜೇನು ರಸಹಣ್ಣು ಉದ್ದಿಮೆ
ಅಚ್ಚೆ ಎಲೆಗೂಸು ಮೌಲ್ಯದ ಕೃಷಿ ಸಂಪತ್ತು
ನಮ್ಮ ಕೊಡಗು ಜಿಲ್ಲೆ ನಮ್ಮದು
ನಮ್ಮ ಕೊಡಗು ಜಿಲ್ಲೆ ನಮ್ಮದು

**ಯಮುನ ಕೊಳಂಗಾಯ ಪೆರಾಜೆ**

---

## ಡ್ಯಾಡಿ ಮಮ್ಮಿ

ನಮ್ಮ ಗೆಳೆಯನ ಮಗನನ್ನು ಕಾನ್ವೆಂಟ್ ಸ್ಕೂಲಿಗೆ ಸೇರಿಸಲಿಕ್ಕೆ ಹೋಗಿದ್ದೆ ಆಗ ನಡೆದ ಘಟನೆ ತುಂಬ ಸ್ವಾರಸ್ಯಕರವಾಗಿತ್ತು ಶಾಲೆಯ ಮುಖ್ಯೋಪಾಧ್ಯಾಯರು ನನ್ನ ಗೆಳೆಯನ ಮಗನನ್ನು ಕುರಿತು ನಿನಗೆ ಅಪ್ಪ ಅಮ್ಮ ಇದ್ದಾರೇನೂ? ಎಂದು ಕೇಳಿದರು. ಅದಕ್ಕುತ್ತರವಾಗಿ ಅವನು ತುಂಬ ವಿನಯಪೂರಕವಾಗಿ ಇಲ್ಲ ಸರ್ ನನಗೆ ಅಪ್ಪ ಅಮ್ಮ ಇಲ್ಲ ಡ್ಯಾಡಿ ಮಮ್ಮಿ ಇದ್ದಾರೆ ಎಂದಾಗ ಅಲ್ಲಿದ್ದವರಿಗೂ ಮತ್ತು ಮುಖ್ಯೋಪಾಧ್ಯಾರಿಗೂ ಏನು ತೋಚಲಿಲ್ಲ.

**ಕೂಡಕಂಡಿ ಯಿ. ಸೋಮಣ್ಣ (ಪೊಪ್ಪಣ)**

## ಪತ್ರ ವಿಭಾಗ :

### ಶುಭಾಶಯ ಪತ್ರ 2,000

ಪತ್ರಿಕೆಯಾ ಸಂಪಾದಕ ಮತ್ತು ಸಿಬ್ಬಂದಿ ವರ್ಗದವರಿಗೂ, ಓದುಗರಿಗೂ ಹಾಗೂ ನಾಡಿನ ಜನತೆಗೂ ಹೊಸ ವರುಷದ ಶುಭಾಶಯಗಳು. 1999ನೇ ಇಸವಿ ಮುಗಿದು, 2000ನೇ ಇಸವಿಗೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ನಿಮ್ಮೆಲ್ಲರ ಬಾಳು ಸುಖಕರವಾಗಿರಲೆಂದು ಮತ್ತು ನಮ್ಮ ಸಂಗಾತಿ ಪತ್ರಿಕೆಯು ಹೆಚ್ಚು ಜನ ಮನ್ನಣೆ ಪಡೆದು, ಸಾವಿರಾರು ನಕ್ಷತ್ರಗಳ ಮಧ್ಯೆ ಚಂದ್ರ ಹೇಗೆ ಶೋಭಿಸುತ್ತಾನೆಯೋ ಹಾಗೆ ಸಾವಿರಾರು ಪತ್ರಿಕೆಗಳ ಮಧ್ಯೆ ಈ ಪತ್ರಿಕೆಯು ಕೀರ್ತಿಗಳಿಸಿ ನಾಡಿನ ಜನರ ಕಗ್ಗತ್ತಲ ಬಾಳಿಗೆ ಬೆಳಕು ನೀಡುವಂತಾಗಲಿ ಎಂದು ದೇವ್ರು ವೆಂಕಟರಮಣನ ಪ್ರಾರ್ಥಿಸಿ ಶುಭ ಹಾರೈಸುತ್ತೇನೆ.

**ಅಣ್ಣೆಚೀರಾ ಭಾರತಿ ಸೋಮಣ್ಣ, ಮಕ್ಕಂದೂರು ಗ್ರಾಮ**

---

## ನಮ್ಮ ಬದ್ಧತೆ

ಪ್ರತಿಯೊಬ್ಬ ಚಂದದಾರನಿಗೂ ತಲುಪಿಸುವ ಸಾಂದ್ರತೆಯೊದಗಿಸುತ್ತೇವೆ. ಬದಲಾಗುವ ಸಾಮಾಜಿಕ ಮತ್ತು ಆರ್ಥಿಕ ವಾತಾವರಣಕ್ಕೆ ಅನುಗುಣ ರೀತಿಯಲ್ಲಿ ಸಾಮಾಜಿಕ ಆಸಕ್ತಿ ಹಾಗೂ ರಾಷ್ಟ್ರದ ಆದ್ಯತೆಗಳನ್ನು ಗಮನದಲ್ಲಿರಿಸಿಕೊಂಡು ನಮ್ಮೆಲ್ಲ ವ್ಯವಹಾರಗಳನ್ನು ನಿರ್ವಹಿಸುತ್ತೇವೆ.

---

**12ನೇ ಪುಟದಿಂದ**

ಪ್ರ. : ಕೆಲವು ಶಿಕ್ಷಕರು ಮಕ್ಕಳಿಗೆ ಸಿಕ್ಕಾಪಟ್ಟೆ ಬರೆಯಲು ಕೊಡುತ್ತಾರೆ. ರಜೆಗಿಂತಲೂ ಹೆಚ್ಚು ಮನೆಗೆಲಸ ಇಪ್ಪತ್ತು ಬಾರಿ ಬರೆಯಲು ಕೊಡುವುದುಂಟು. ಇದು ಮಕ್ಕಳಿಗೆ ಒಂದು ರೀತಿ ಹಿಂಸೆ ಅಂತ ಅನ್ಸುತ್ತಾ?

ಉ. : ಹೌದು, ಇದು ಖಂಡಿತಾ ತಪ್ಪು. ಏಕೆಂದರೆ ಬರೆದುದನ್ನೇ ಬರೆದು ಬರೆದು ಆ ವಿಷಯದ ಬಗ್ಗೆ ಮತ್ತು ಅಂತಹ ಶಿಕ್ಷೆ ಕೊಟ್ಟ ಗುರುಗಳ ಬಗ್ಗೆ ಮಕ್ಕಳಿಗೆ ಅಸಮಾಧಾನ ಉಂಟಾಗಿ ಕೊನೆಗೆ ತಿರಸ್ಕಾರವೇ ಬರುತ್ತದೆ.

ಪ್ರ. : ನಿಮ್ಮ ಬಿಡುವಿನ ವೇಳೆಯ ಹವ್ಯಾಸವೇನು?

ಉ. : ಕೇಂದ್ರ ಗ್ರಂಥಾಲಯಕ್ಕೆ ಹೋಗ್ತೇನೆ. ಕಾದಂಬರಿ ಓದೋದು ನನಗಿಷ್ಟ. ಸಧ್ಯಕ್ಕೆ 'ಬೆಕ್ಕಿನ ಕಣ್ಣು' ಕಾದಂಬರಿಯನ್ನು ಓದುತ್ತಿದ್ದೇನೆ. ಪ್ರೇಮಾಭಟ್‌ರ ಕಾದಂಬರಿ ನನಗಿಷ್ಟ.

ಪ್ರ. : ಸಧ್ಯಕ್ಕೆ ನೀವು ಎಲ್ಲಿ ಉದ್ಯೋಗದಲ್ಲಿದ್ದೀರಿ?


ಉ. : ನಾನೀಗ ಮಡೆನಾಡಿನ 'ಮದೆ ಮಹೇಶ್ವರ ಪ್ರೌಢ ಶಾಲೆಯಲ್ಲಿ' ಶಿಕ್ಷಕಿಯಾಗಿದ್ದೇನೆ.

ನಮಸ್ಕಾರ........ ನಮಸ್ಕಾರ.....

**ಸಂದರ್ಶನ, ಲೇಖನ : ಬಿ. ಆರ್. ಜೋಯಪ್ಪ, ಮದೆ.**

## ಜೀವಾವಧಿ ಸದಸ್ಯತನ ಕೊಟ್ಟೊಳೊ

ಶ್ರೀಮತಿ ಮತ್ತ್ ಶ್ರೀ ಪೇರಿಯನ ಸೋಮಯ್ಯ ರತ್ನಾಕರ ಇವು ಪತ್ರಿಕೆಯ ಅಭಿವೃದ್ಧಿ ಬಯಸಿ ಜೀವಾವಧಿ ಸದಸ್ಯತನ ಕೊಟ್ಟೊಳೊ. ಇವುಕೆ ಕುಲದೇವ್ರು ವೆಂಕಟರಮಣನ ಕೃಪಾಕಟಾಕ್ಷ ಸದಾ ಇರಲಿತ್ತ್‌ಳಿ ಸಂಗಾತಿ ಶುಭ ಹಾರೈಸಿದೆ. **ಸಂಪಾದಕಿ.**



**ಕಿರು ಪರಿಚಯ :** ಪೇರಿಯನ ರತ್ನಾಕರನವು ಮರಗೋಡ್‌ನ ಪೇರಿಯನ ಸೋಮಯ್ಯನವ್ರ ಮಂಙ. ಓದಿದ್ ಮರಗೋಡು ಮತ್ತ್ ಬೊಂಬಾಯಿಲಿ. ಕೃಷಿಕರು ಹೌದು. ರತ್ನಕರನವು ಈಗ ಷಿಪ್ಪಿಂಗ್ ಕಾರ್ಪೊರೇಶನ್ ಆಫ್ ಅಮೇರಿಕಾ ಸಂಸ್ಥೆಲಿ ಅಮೇರಿಕಾಲಿ ಒಳೊ. ಇವ್ರು ಬಾಗಮಂಡ್ಲ ನಾಡ್ ತಣ್ಣಿಮಾನಿ ಗ್ರಾಮದ ದೇವಂಗೊಡಿ ಸೋಮಪ್ಪನವ್ರ ಮಗ್ಳು ಅನಿತಾಳ ಕೈ ಹಿಡ್ದ್ ಸುಖ ಸಂಸಾರಲಿ ಒಳೊ. ಇವ್ರುಕೆ ಮೂರು ವರ್ಷಪ್ರಾಯದ ಸ್ವರ್ಣಲಕ್ಷ್ಮಿ (ಚುಮ್ಮಿ) ತ್ತ್ಳ್ಳು ಕೂಸ್ ಉಟ್ಟು.

**ಪಿ. ಎಸ್. ರತ್ನಾಕರ** 10/26/1, ಬ್ಲಾಕ್ 14,
ರೇಸ್‌ಕೋರ್ಸ್ ರಸ್ತೆ, ರಿಮ್ಯಾಂಡ್ ಹೋಂ ಹತ್ತಿರ, ಮಡಿಕೇರಿ

---

**ಚೇರಂಬಾಣೆಯ ಏಜೆಂಟ್ / ವರದಿಗಾರರಾಗಿ ಶ್ರೀ ಸೆಟ್ಟೆಜನ ನರೇಂದ್ರ (ಷರಿ) ಆಯ್ಕೆ. ಓದುಗರಿಂದ ಸಹಕಾರ ನಿರೀಕ್ಷೆ.**




ಈ ಹಿಂದೆ ಸಂಗಾತಿ ಪತ್ರಿಕೆಯ ಕೊಡಗು ನಾಡಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಇವರಿಗೆ ಕೊಡಗು ನಾಡಿನಾದ್ಯಂತ ಪ್ರವಾಸ ಮಾಡಲು ಅನಾನುಕೂಲವಾದ್ದರಿಂದ ಅವರ ವಿನಂತಿ ಮೇರೆಗೆ ಚೇರಂಬಾಣೆ, ಕೊಳಗದಾಳು, ಬೆಂಗೂರು, ಐವ್ವತ್ತೊಕ್ಲು, ಕೊಟ್ಟೂರು, ಬಿ. ಬಾಡಗ, ಚರಂಡೇಟಿ, ಕೋಪಟ್ಟಿ ಗ್ರಾಮಗಳಿಗೆ ಸೀಮಿತವಾಗಿ ವರದಿ, ಕಲೆಕ್ಷನ್, ಜಾಹೀರಾತು ಇತ್ಯಾದಿಯಾಗಿ ಕೆಲಸ ನಿರ್ವಹಿಸಲು ಅನುವು ಮಾಡಲಾಗಿದೆ. ಹಿಂದಿನಂತೆ ಈಗಲೂ ಸಹ ಓದುಗರು ಸಹಕರಿಸುವಂತೆ ಕೋರಿಕೆ.

**ಸಂಪಾದಕಿ**

---

## ಉತ್ತಮ ತಳಿಯ ನಾಯಿ ಮರಿಗಳು ಮಾರಾಟಕ್ಕಿವೆ



ಅಲ್ಸೇಷನ್, ಡಾಬರ್‌ಮನ್, ಲಾಬ್ರಡಾರ್, ಬಾಕ್ಸರ್, ಸೇಂಟ್ ಬರ್ನಾರ್ಡ್, ಗೋಲ್ಡನ್ ರಿಟ್ರೈವರ್, ಜರ್ಮನಿ ಶೆಪರ್ಡ್, ಗ್ರೇಟ್‌ಡನ್, ಡಾಲ್ಮೇಶನ್ ಹಾಗೂ ಇತರ ಎಲ್ಲಾ ತರದ ನಾಯಿ ಮರಿಗಳು ಸೂಕ್ತ ಬೆಲೆಯಲ್ಲಿ ಲಭ್ಯವಿದೆ.

ಮೂರು ತಿಂಗಳ ಮೇಲ್ಪಟ್ಟ ಮರಿಗಳಿಗೆ ತರಬೇತಿ ನೀಡಲು ತರಬೇತುದಾರರು ಇದ್ದಾರೆ.

ಆಸಕ್ತರು ಸಂಪರ್ಕಿಸಿ : 0821 / 516771 **ಭಾಸ್ಕರ್**
C/o ಕೊಡಗು ಸಂಗಾತಿ, 35, ಸವಿತಾ ನಿಲಯ,
1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿ ಪುರಂ, ಮೈಸೂರು -12

---

## ನಿಧನ

ಕುಯ್ಯಂಗೇರಿ ಗ್ರಾಮದ ಪೋರೆಯನ ಬೋಪಣ್ಣನವರ ಧರ್ಮಪತ್ನಿ ಗಂಗಮ್ಮನವರು ದಿನಾಂಕ 25-12-1999ನೇ ಶನಿವಾರ ನಿಧನರಾದರು. ಇವರಿಗೆ 70 ವರ್ಷ ಪ್ರಾಯವಾಗಿತ್ತು. ಇವರು ಮೂವರು ಪುತ್ರರು, ಒಬ್ಬ ಪುತ್ರಿಯನ್ನು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಒಬ್ಬ ಪುತ್ರ ಮೈಸೂರು ಆನಂದ ಗೌಡ ಸಮಾಜದ ಹಾಲಿ ಮ್ಯಾನೇಜರ್ ಆಗಿದ್ದಾರೆ.

* * *

ಪಾಲೂರು ಗ್ರಾಮದ ಸೂದನ ಪೊನ್ನಪ್ಪನವರ ಮಗ ಜಗದೀಶ್‌ನವರು ದಿನಾಂಕ 24-12-1999ರಂದು ಮೈಸೂರಿನಲ್ಲಿ ಅಕಾಲ ಮರಣ ಹೊಂದಿದರು. ಇವರಿಗೆ 28 ವರ್ಷ ಪ್ರಾಯವಾಗಿದ್ದು ಇವರು ಜೀವ ವಿಮಾ ನಿಗಮ ಮಡಿಕೇರಿ ಶಾಖೆಯಲ್ಲಿ ಉದ್ಯೋಗದಲ್ಲಿದ್ದರು.

K. R. N. N. - 240

10-01-96 TCI Kar. 09592

## ಬೈತಡ್ಕ ನಂಜಪ್ಪ (ನವೀನ) ಮತ್ತು ಪ್ರಿಸಿಲ್ಲಾ ದಂಪತಿಗಳಿಗೆ ನಮ್ಮ ಶುಭಾಶಯಗಳು




ಯಿಂದ:

ಬೈತಡ್ಕ ದಿನೇಶ್,
ಬಾರಿಕೆ ನೀತಿನ್, ಟ್ರಿಸಿಲ್ಲಾ
ಕೋಳುಮುಡಿಯನ ಮಿಲನ್,
ನೂತನ್, ರಂಜು, ಪಟ್ಟಡ
ದೀಪಕ್, ನಿಶಾ, ಗೌಕಮ್,
ರಶ್ಮಿ, ರೀನಾ, ಚೈತ್ರಾ, ನೇತ್ರ,
ಪವನ, ಕೀರ್ತಿ, ಸುಭಾಷ್

ಡಾ|| ಕುಮ್ಮಿ ಶ್ರೀಧರ್, **M.B.B.S., M.S., Mch.F.I.C.C.** ಇವರು ಸಹಾಯಕ ಪ್ರೊಫೆಸರ್ ಕಾರ್ಡಿಯೋ ವಾಸುಲರ್ ಮತ್ತು ಜೊರಾಸ್ ಸರ್ಜರಿಯಾಗಿ ಶ್ರೀ ಜಯದೇವ ಇನ್ಸ್‌ಟ್ಯೂಟ್ ಆಫ್ ಕಾರ್ಡಿಯಾಲಜಿ ವಿಕ್ಟೋರಿಯಾ ಆಸ್ಪತ್ರೆ ಕಾಂಪ್ಲೆಕ್ಸ್ ಬೆಂಗಳೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರು ಮೂಲತಃ ಶಿವಮೊಗ್ಗದವರಾಗಿದ್ದು ಕಳೆದ 35 ವರ್ಷಗಳಿಂದ ಬೆಂಗಳೂರು ನಿವಾಸಿಯಾಗಿದ್ದಾರೆ. ಜಯದೇವ ಆಸ್ಪತ್ರೆಯಲ್ಲಿ 15 ವರ್ಷಗಳಿಂದಲೂ ಸೇವೆ ಸಲ್ಲಿಸಿ ಉತ್ತಮ ಹೆಸರು ಗಳಿಸಿದ್ದಾರೆ. ಉತ್ತಮ ನಡತೆ ಮತ್ತು ದಕ್ಷತೆಯಿಂದ ಸೇವೆ ಸಲ್ಲಿಸಿದ ಇವರಿಗೆ ಒಳ್ಳೆಯ ಭವಿಷ್ಯವಿದೆ. ವಿಶೇಷವಾಗಿ ಕೊಡಗಿನಿಂದ ಬರುವ ರೋಗಿಗಳಿಗೆ ಉತ್ತಮ ಶುಶ್ರೂಷೆ ನೀಡಿ ಈಗಾಗಲೇ ಜನಾನುರಾಗಿಯಾಗಿದ್ದಾರೆ.

ಖ್ಯಾತಿಶೀಲರಾದ ಡಾ|| ಕುಮ್ಮಿ ಶ್ರೀಧರನವರು ಕೊಡಗಿನ ಕೊಡಗನ ಮನೆ ಮೊಣ್ಣಪ್ಪನವರ ಮಗಳು ಗೀತಾಳನ್ನು ಲಗ್ನವಾಗಿದ್ದಾರೆ. ಇವರಿಗೆ 8 ವರ್ಷದ ಪೃಥ್ವಿ ಮತ್ತು 5 ವರ್ಷದ ಪ್ರಜ್ವಲ್ ಇಬ್ಬರು ಗಂಡು ಮಕ್ಕಳನ್ನು ಪಡೆದ ಸುಖಿ ಸಂಸಾರವಾಗಿದೆ.



**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.